**ಸೆಂಟರ್ ಫಾರ್ ಮಲ್ಟಿ-ಡಿಸಿಪ್ಲಿನರಿ ಡೆವಲಪ್‌ಮೆಂಟ್ ರಿಸರ್ಚ್ (ಸಿ.ಎಮ್.ಡಿ.ಆರ್),**
**ಅಂಬೇಡ್ಕರ್ ನಗರ, ಯಾಲಕ್ಕಿ ಶೆಟ್ಟರ ಕಾಲೋನಿ ಧಾರವಾಡ-580004**

# ರೈತರ ಸಾಲಮನ್ನಾ ಯೋಜನೆ: ನಾವು ಸಂದಿಗ್ಧತೆಯಲ್ಲಿ ಸಿಲುಕಿದ್ದೇವೆಯೇ?

**ಎಂಬ ವಿಷಯದ ಮೇಲೆ ಚರ್ಚಾಗೋಷ್ಠಿ**

**24ನೇ ಅಗಸ್ಟ 2018 ರಂದು ಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗಿತ್ತು.**

**ಚರ್ಚಾಗೋಷ್ಠಿಯಲ್ಲಿ ಈ ಕೆಳಗಿನ ಪರಿಣಿತರು ಭಾಗವಹಿಸಿದ್ದರು**

**ಪ್ರೊ. ಎಸ್.ಬಿ. ಮಹಾಜನಶೆಟ್ಟಿ,**
ಕೃಷಿ ವಿಶ್ವವಿದ್ಯಾಲಯ, ಧಾರವಾಡ
**ಪ್ರೊ. ಆರ್.ವಿ. ದಾಡಿಭಾವಿ**
ನಿವೃತ್ತ ಪ್ರಾಧ್ಯಾಪಕರು, ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ
**ಪ್ರೊ. ಎಸ್.ಟಿ.ಬಾಗಲಕೋಟ,**
ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ

**ಪ್ರೊ .ಆರ್.ಆರ್. ಬಿರಾದಾರ**
ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ
**ಪ್ರೊ. ಬಿ.ಎಚ್. ನಾಗೂರ**
ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ
**ಪ್ರೊ. ರಾಜೇಂದ್ರ ಪೋತದಾರ**
ನಿರ್ದೇಶಕರು, ವಾಲ್ಮಿ, ಧಾರವಾಡ
**ಶ್ರೀ ಪ್ರಕಾಶ ಜಕಾತಿ**
ಸಾಮಾಜಿಕ ಕಾರ್ಯಕರ್ತರು ಧಾರವಾಡ

**ಶ್ರೀ ಕೆ. ಈಶ್ವರ**
ವ್ಯವಸ್ಥಾಪಕರು, ವಿಜಯ ಬ್ಯಾಂಕ್, ಹುಬ್ಬಳ್ಳಿ
**ಶ್ರೀ ಬಸವರಾಜ ಹೊಂಗಲ**
ಉಪ ಮುಖ್ಯ ವರದಿಗಾರರು, ಉದಯವಾಣಿ
**ಶ್ರೀ ಮಾಲತೇಶ ಪರಪ್ಪನವರ**
ಅಧ್ಯಕ್ಷರು, ರೈತಸಂಘ ಮತ್ತು ಹಸಿರು
ಸೇನೆ, ಹಾನಗಲ್ ತಾಲ್ಲೂಕ್
**ಶ್ರೀ ಶಂಕರಪ್ಪಾ ಅಂಬಲಿ**
ಕಾರ್ಯದರ್ಶಿಗಳು, ರೈತಸೇನಾ, ಕರ್ನಾಟಕ
**ಶ್ರೀ ಬಿ.ಎಮ್. ಹನಸಿ**
ರೈತರು, ನವಲಗುಂದ
**ಶ್ರೀ ಶಂಕರಗೌಡ ಆರ್. ಪಾಟೀಲ**
ರೈತರು, ರಾಮದುರ್ಗ

**ಕಾರ್ಯಕ್ರಮದ ಅಧ್ಯಕ್ಷತೆಯನ್ನು**
**ಪ್ರೊ. ಎಸ್.ಏ. ಪಾಟೀಲ, ಮಾಜಿ ಉಪ ಕುಲಪತಿಗಳು, ಕೃಷಿ ವಿಶ್ವ ವಿದ್ಯಾಲಯ, ಧಾರವಾಡ ಇವರು ವಹಿಸಿದ್ದರು**

*******

**ಮುನ್ನುಡಿ**

ಭಾರತವು ಕೃಷಿ ಪ್ರಧಾನವಾದ ರಾಷ್ಟ್ರವಾಗಿದ್ದು, ದೇಶದ ಮೂರನೇ ಎರಡು ಭಾಗದಷ್ಟು ಜನರು ಕೃಷಿಯನ್ನೇ ಅವಲಂಬಿಸಿದ್ದು ಅನೇಕ ಕಾರಣಗಳಿಂದ ಅನ್ನದಾತರೆನಿಕೊಂಡ ರೈತರು ಪರಿಸ್ಥಿತಿ ಸಂತೃಪ್ತದಾಯಕ ಇಲ್ಲದಿರುವದು ಹಾಗೂ ಅವರು ಕೃಷಿ ಚಟುವಟಿಕೆಗಳಿಗಾಗಿ ಸಾಲದ ಸುಳಿಯಲ್ಲಿ ಸಿಕ್ಕು ನಲುಗಿ ಹೋಗಿರುವದು ನಮ್ಮೆಲ್ಲರಿಗೂ ಗೊತ್ತಿರುವ ಸಂಗತಿ. ರೈತನು ತಾನು ಅನೇಕ ನೈಸರ್ಗಿಕ ವೈಪರಿತ್ಯಗಳ ಸವಾಲುಗಳನ್ನು ಎದುರಿಸಿ ಸಮಾಜಕ್ಕೆ ಅನ್ನದಾತನಾಗಿದ್ದರೂ ತಾನು ಮಾತ್ರ ತೊಂದರೆಯನ್ನು ಅನುಭವಿಸುತ್ತಿದ್ದಾನೆ. ಇದಕ್ಕೆ ಹಲವಾರು ಕಾರಣಗಳಿವೆ ಅವುಗಳೆಂದರೆ, ತಾನು ಬೆಳೆದ ಬೆಳೆಗಳನ್ನು ಕಚ್ಚಾ ವಸ್ತುಗಳನ್ನು ಪೂರೈಸುವ ಮಾದರಿಯಲ್ಲಿ ಮಾರಾಟ ಮಾಡುತ್ತಾನೆ ಇದರಿಂದ ಅವನು ಮಾರುಕಟ್ಟೆ ಅನಿಶ್ಚಿತತೆಗಳಿಗೆ ಒಳಗಾಗಿ ನಷ್ಟವನ್ನೇ ಅನುಭವಿಸುವಂತಾಗಿದೆ ಅದರ ಬದಲಾಗಿ ಔದ್ಯೋಗೀಕರಣದ ರೂಪದಲ್ಲಿ ತನ್ನ ಉತ್ಪಾದನೆಗಳನ್ನು ಸಂಸ್ಕರಿಸಿ ಮಾರಾಟ ಮಾಡುವದರಿಂದ ಹೆಚ್ಚಿನ ಲಾಭ ಪಡೆಯಬಹುದಾಗಿದೆ ಆದರೆ ತಾಂತ್ರಿಕ ಜ್ಞಾನದ ಕೊರತೆ, ಬಡತನ, ಸಮರ್ಪಕ ತರಬೇತಿಗಳ ಕೊರತೆ ಇತ್ಯಾದಿಗಳು ರೈತರ ಈ ಪರಿಸ್ಥಿತಿಗೆ ಕಾರಣವಾಗಿವೆ.

ಈ ಹಿಂದೆ ವಿವಿಧ ರಾಜ್ಯ ಸರಕಾರಗಳು ಹಾಗೂ ಕೇಂದ್ರ ಸರಕಾರ ಅನೇಕ ಸಾಲಮನ್ನಾ ಯೋಜನೆಗಳನ್ನು ಜಾರಿಗೊಳಿಸಿರುವ ನಿದರ್ಶನಗಳಿವೆ ಆದರೆ ಅವುಗಳಿಂದ ರೈತರ ಪರಿಸ್ಥಿತಿಗಳು ಸುಧಾರಣೆಯಾಗಿರುವ ಯಾವ ಉದಾಹರಣೆಗಳು ಕಂಡು ಬಂದಿರುವದಿಲ್ಲ ಆದ್ದರಿಂದ ಸುಸ್ಥಿರ ಕೃಷಿ ಅಭಿವೃದ್ದಿಯನ್ನು ಕಾರ್ಯ ರೂಪದಲ್ಲಿ ತರುವ ಮಹತ್ತರ ಯೋಜನೆಗಳನ್ನು ಕೈಗೊಳ್ಳುವದು ಇಂದಿನ ಅವಶ್ಯಕತೆಯಾಗಿದೆ.

ಪ್ರಸ್ತುತ ರಾಜ್ಯ ಸರಕಾರವು ರೈತರ ಸಾಲಮನ್ನಾ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಸಾಲಮನ್ನಾದ ಒಟ್ಟು ಮೊತ್ತವು ದೊಡ್ಡ ಮೊತ್ತದಲ್ಲಿದ್ದು ಸದರಿ ಮೊತ್ತದ ಕ್ರೂಢಿಕರಣದ ಮೂಲಗಳು ಯಾವವು?, ಬ್ಯಾಂಕು ವ್ಯವಸ್ಥೆಯ ಮೇಲೆ ಆಗಬಹುದಾದ ದುಷ್ಪರಿಣಾಮಗಳು ಯಾವವು? ಹಾಗೂ ರಾಜ್ಯದ ಸಮಗ್ರ ಆರ್ಥಿಕತೆಯ ಮೇಲೆ ಆಗುವ ಪರಿಣಾಮಗಳು ಯಾವವು? ಅಷ್ಟೇ ಅಲ್ಲದೇ ಕೇವಲ ರೈತರ ಸಾಲಮನ್ನಾ ಮಾಡುವದರಿಂದ ಮಾತ್ರವೇ ರೈತರ ಎಲ್ಲ ಸಮಸ್ಯೆಗಳನ್ನು ಪರಿಹರಿಸಿ ಕೃಷಿಯನ್ನು ಸುಸ್ಥಿರವಾಗಿ ಅಭಿವೃದ್ಧಿಪಡಿಸಲು ಸಾಧ್ಯವೇ? ಎಂಬ ಇತ್ಯಾದಿ ಪ್ರಶ್ನೆಗಳು ಕೃಷಿಕರನ್ನು, ಕೃಷಿ ತಜ್ಞರನ್ನು, ನೀತಿ ನಿರೂಪಕರನ್ನು ಹಾಗೂ ಜನಸಾಮಾನ್ಯರನ್ನು "ನಾವು ಸಂಧಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿದ್ದೆವೆಯೇ" ಎಂಬ ವಿಚಾರ ಕಾಡುತ್ತಿದೆ. ಆದ್ದರಿಂದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ದಿಯ ವಿವಿಧ ಆಯಾಮಗಳು ಹಾಗೂ ಜ್ವಲಂತ ಸಮಸ್ಯೆಗಳ ಕುರಿತು ಸಂಶೋಧನೆಗಳನ್ನು ನಡೆಸುತ್ತ ಬಂದಿರುವ ಸಿ.ಎಮ್.ಡಿ.ಆರ್ ಸಂಸ್ಥೆಯು ರೈತ ಪ್ರತಿನಿಧಿಗಳು, ಕೃಷಿತಜ್ಞರು, ಬ್ಯಾಂಕ ಅಧಿಕಾರಿಗಳು ಹಾಗೂ ಸಂಶೋಧಕರನ್ನೊಳಗೊಂಡ ವಿಚಾರಗೊಷ್ಠಿಯನ್ನು ಆಯೋಜಿಸಿ ಪ್ರಸ್ತುತ ಸಾಲಮನ್ನಾ ಯೋಜನೆಯನ್ನು ಆರ್ಥಿಕ ವ್ಯವಸ್ಥೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರದಂತೆ ಜಾರಿಗೊಳಿಸುವ ಮಾರ್ಗೋಪಾಯಗಳು ಹಾಗೂ ಸುಸ್ತಿರ ಕೃಷಿ ಅಭಿವೃದ್ದಿಯ ನೀತಿ ನಿಯಮಗಳನ್ನು ಚರ್ಚಿಸಿ ರಾಜ್ಯದ ಕೃಷಿಕರ ಸರ್ವತೋಮುಖ ಅಭಿವೃದ್ದಿಗೆ ಸಹಾಯಕಾರಿ ಆಗುವಂತಹ ಸಲಹೆ ಸೂಚನೆಗಳನ್ನು ಮುದ್ರಣ ರೂಪದಲ್ಲಿ ತರಲು ಸಂಸ್ಥೆಯು ಹೊಂದಿರುವ ಸದುದ್ದೇಶದ ಫಲವಾಗಿ ಸದರಿ ಕಿರುಹೊತ್ತಿಗೆಯನ್ನು ಪ್ರಕಟಿಸಲಾಗಿದೆ.

ಪ್ರೊ. ವಿ ಬಿ ಅಣ್ಣಿಗೇರಿ
ನಿರ್ದೇಶಕರು ಸಿ.ಎಮ್.ಡಿ.ಆರ್
ಧಾರವಾಡ

# ಪ್ರಾಸ್ತಾವಿಕ

ಡಾ. ಏ ಆರ್ ಕುಲಕರ್ಣಿ

ಕೃಷಿಯು ಭಾರತದ ಅರ್ಥ ವ್ಯವಸ್ಥೆಯ ಬೆನ್ನೆಲುಬೆನಿಸಿದ್ದು, ಶೇಕಡಾ 66ಕ್ಕಿಂತಲೂ ಹೆಚ್ಚು ಜನಸಂಖ್ಯೆಯು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕೃಷಿಯನ್ನು ಮತ್ತು ಕೃಷಿ ಆಧಾರಿತ ಉದ್ಯೋಗವನ್ನೇ ಅವಲಂಬಿಸಿದೆ. ಒಟ್ಟು ದೇಶೀಯ ಉತ್ಪಾದನೆಯಲ್ಲಿ ಶೇಕಡಾ 15ರಷ್ಟು ಕೃಷಿ ಉತ್ಪಾದನೆಗಳದ್ದೇ ಆಗಿದೆ.

ಆದಾಗ್ಯೂ ಅನ್ನದಾತರೆನಿಸಿಕೊಂಡ ರೈತರ ಪರಿಸ್ಥಿತಿ ಕ್ಲಿಷ್ಟಕರವಾಗಿದೆ. ಇದಕ್ಕೆ ಪ್ರಮುಖ ಸಾಕ್ಷಿಯೆಂದರೆ, ಅಂಕಿ-ಅಂಶಗಳೇ ಹೇಳುವಂತೆ ಶೇಕಡಾ 80ರಷ್ಟು ರೈತರು ಸಣ್ಣ ಮತ್ತು ಅತೀ ಸಣ್ಣ ಹಿಡುವಳಿದಾರರಾಗಿದ್ದಾರೆ. ಒಟ್ಟು ರೈತರಲ್ಲಿ ಶೇಕಡಾ 36ರಷ್ಟು ರೈತರು ಗುಡಿಸಲು ಅಥವಾ ಕಚ್ಚಾ ಮನೆಗಳಲ್ಲಿ ವಾಸವಾಗಿದ್ದಾರೆ. ಶೇಕಡಾ 44ರಷ್ಟು ರೈತರು ಮಧ್ಯಮ ತರಗತಿಯ ಮನೆಗಳಲ್ಲಿ ವಾಸವಾಗಿದ್ದಾರೆ. ಶೇಕಡಾ 32ರಷ್ಟು ರೈತರು ಕೃಷಿಯೊಂದಿಗೆ ಇತರೆ ಉಪ-ಕಸುಬುಗಳನ್ನು ಕೈಗೊಂಡಿರುವುದು ತಿಳಿದು ಬರುತ್ತದೆ.

ಸಣ್ಣ ಮತ್ತು ಅತೀ ಸಣ್ಣ ಹಿಡುವಳಿದಾರರು ತಮಗೆ ಅಗತ್ಯವಿರುವಾಗ ಶೀಘ್ರವಾಗಿ ಸಾಲವನ್ನು ಪಡೆಯಲು ಅನ್ಯ ಮಾರ್ಗವಿಲ್ಲದೇ ತಮಗೆ ಹತ್ತಿರದಲ್ಲಿರುವ ಲೇವಾದೇವಿಗಾರರ ಮೊರೆ ಹೋಗುವುದು ಸಾಮಾನ್ಯವಾಗಿದೆ. ಹೀಗೆ ರೈತರು ಒಮ್ಮೆ ಸಾಲದ ವಿಷ ವರ್ತುಲದಲ್ಲಿ ಸಿಲುಕಿದರೆ ಅದರಿಂದ ಪಾರಾಗುವುದು ಕಷ್ಟ ಸಾಧ್ಯವಾಗುತ್ತದೆ. ಅದರಂತೆ ತಾವು ಬೆಳೆದ ಬೆಳೆಗಳನ್ನು ತಮಗೆ ಅನುಕೂಲಕರ ಪರಿಸ್ಥಿತಿಗಳಲ್ಲಿ ಮಾರಾಟ ಮಾಡಿ ಲಾಭದಾಯಕ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾರೆ. ಇದೂ ಕೂಡಾ ಗಾಯದ ಮೇಲೆ ಬರೆ ಎಳೆದಂತೆ ಪುನರಪಿಯಾಗಿ ರೈತನನ್ನು ತನಗರಿವಿಲ್ಲದಂತೆ ಸಾಲದ ಸುಳಿಯಲ್ಲಿ ಸಿಲುಕುವಂತೆ ಮಾಡುತ್ತದೆ.

ರೈತನು ತಾನು ಬೆಳೆದಂಥ ಬೆಳೆಗಳನ್ನು ಸಂಸ್ಕರಿಸಿ, ಶ್ರೇಣೀಕರಿಸಿ ತನಗೆ ಲಾಭದಾಯಕ ಬೆಲೆಗಳನ್ನು ಪಡೆಯುವುದಕ್ಕೆ ಪೂರಕವಾದ ತಾಂತ್ರಿಕತೆ ಮತ್ತು ವಾತಾವರಣದ ಕೊರತೆಯಿಂದಾಗಿ ಸಮರ್ಪಕ ಬೆಲೆಗಳನ್ನು ಪಡೆಯುವಲ್ಲಿ ಹಿನ್ನಡೆಯನ್ನು ಅನುಭವಿಸುವುದು ಒಂದೆಡೆಯಾದರೆ, ಕೃಷಿಯೇತರ ಕೂಲಿ ದರಗಳು ಹೆಚ್ಚಿರುವುದು ಹಾಗೂ ಸರ್ಕಾರದ ಯೋಜನೆಗಳಿಂದಾಗಿ ರೈತರು ಕೂಲಿಯನ್ನು ಹೆಚ್ಚು ವ್ಯಯಿಸಬೇಕಾಗುತ್ತದೆ. ಒಂದೆಡೆ ಒಟ್ಟು ಆದಾಯದಲ್ಲಿ ಕೊರತೆ, ಇನ್ನೊಂದೆಡೆ ಹೂಡಿಕೆಯಲ್ಲಿ ಹೆಚ್ಚಳ. ಇಂತಹ ದ್ವಂದ್ವ ಪರಿಸ್ಥಿತಿಯಲ್ಲಿ ರೈತ ತೊಂದರೆಗಳನ್ನು ಅನುಭವಿಸುತ್ತಿದ್ದಾನೆ.

ರೈತರನ್ನು ಸಾಲದ ಸುಳಿಯಿಂದ ಪಾರು ಮಾಡಿ ಅವರು ಸಾಧ್ಯವಾದಷ್ಟು ವೈಜ್ಞಾನಿಕವಾಗಿ ಮತ್ತು ತಾಂತ್ರಿಕವಾಗಿ ಮುಂದುವರೆದು ಹಾಗೂ ಮಧ್ಯವರ್ತಿಗಳು ಮತ್ತು ಲೇವಾದೇವಿಗಾರರ ಕಪಿಮುಷ್ಟಿಯಿಂದ ಪಾರಾಗಿ ಸ್ವತಂತ್ರವಾಗಿ ಕೃಷಿಯನ್ನು ಔದ್ಯೋಗಿಕರಣದ ರೀತಿಯಲ್ಲಿ ಅಭಿವೃದ್ಧಿಪಡಿಸುವಂಥ ಶಾಶ್ವತ ಯೋಜನೆಗಳನ್ನು ಕೈಗೊಂಡಲ್ಲಿ ಮಾತ್ರ  ಅನ್ನದಾತೋ ಸುಖೀಭವ  ಎಂಬುದು ಸಾರ್ಥಕವಾಗುತ್ತದೆ ಹಾಗೂ ದೇಶದ ಸರ್ವತೋಮುಖ ಮತ್ತು ಸಮಗ್ರ ಅಭಿವೃದ್ಧಿ ಸಾಧ್ಯ.

**ಸಾಲಮನ್ನಾ ಯೋಜನೆಯ ಒಂದು ಪಕ್ಷಿನೋಟವನ್ನು ನೋಡುವುದಾದರೆ**, ಪ್ರ-ಪ್ರಥಮವಾಗಿ 1990ರಲ್ಲಿ ದೇಶ ವ್ಯಾಪಿ 10 ಸಾವಿರ ಕೋಟಿ ರೂಪಾಯಿಗಳ ಮೊತ್ತದ ಸಾಲ ಮನ್ನಾವನ್ನು ಅಂದಿನ ಭಾರತ ಸರ್ಕಾರವು ಮಾಡಿತ್ತು. ಕ್ರಿ.ಶ. 2008ರಲ್ಲಿ ಭಾರತ ಸರ್ಕಾರವು ಮತ್ತೊಮ್ಮೆ 52 ಸಾವಿರ ಕೋಟಿ ರೂಪಾಯಿಗಳ ಮೊತ್ತದ ಸಾಲಮನ್ನಾ ಮಾಡಿತ್ತು. ಕ್ರಿ.ಶ. 2014ರಲ್ಲಿ ಆಂಧ್ರ ಪ್ರದೇಶ ಸರ್ಕಾರವು 40 ಸಾವಿರ ಕೋಟಿ ರೂಪಾಯಿಗಳ ಹಾಗೂ ತೆಲಂಗಾಣ ಸರ್ಕಾರವು 20 ಸಾವಿರ ಕೋಟಿ ರೂಪಾಯಿಗಳ ಮೊತ್ತದ ಸಾಲಮನ್ನಾ ಮಾಡಿತ್ತು. ಅದರಂತೆ 2017ರಲ್ಲಿ ಉತ್ತರ ಪ್ರದೇಶ ಸರ್ಕಾರವು 36 ಸಾವಿರ ಕೋಟಿ

ರೂಪಾಯಿಗಳ ಸಾಲಮನ್ನಾ ಮಾಡಿದರೆ, ಮಹಾರಾಷ್ಟ್ರ ಸರ್ಕಾರವು 35 ಸಾವಿರ ಕೋಟಿ ರೂಪಾಯಿಗಳ ಸಾಲಮನ್ನಾ ಮಾಡಿತ್ತು.

ಪ್ರಸ್ತುತ, ಕರ್ನಾಟಕ ರಾಜ್ಯ ಸರ್ಕಾರವು ದೊಡ್ಡ ಪ್ರಮಾಣದಲ್ಲಿ ರೈತರನ್ನು ಋಣಮುಕ್ತರನ್ನಾಗಿ ಮಾಡುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಕೈಗೊಂಡಿದೆ.
ಆದರೆ, ಕೆಲವು ಅಧ್ಯಯನಗಳ ಪ್ರಕಾರ, ಹಿಂದಿನ ಸಾಲಮನ್ನಾ ಯೋಜನೆಗಳು ಸಾಕಷ್ಟು ಸಮಸ್ಯೆಗಳನ್ನು ಎದುರಿಸಿವೆ ಎನ್ನಲಾಗುತ್ತಿದೆ. ಉದಾಹರಣೆಗೆ ಸಾಲಮನ್ನಾ ಆದ ನಂತರದ ವರ್ಷಗಳಲ್ಲಿ ಹಣಕಾಸಿನ ಸಂಸ್ಥೆಗಳಲ್ಲಿ ಸಾಲ ಮರು ಪಾವತಿಯ ದರಗಳಲ್ಲಿ ಕಡಿಮೆಯಾಗಿರುವುದು ಕಂಡು ಬಂದಿದೆ. ಇದರಿಂದ ಹಣಕಾಸಿನ ಸಂಸ್ಥೆಗಳು ಮತ್ತು ಅರ್ಥ ವ್ಯವಸ್ಥೆಯ ಮೇಲೆ ದುಷ್ಪರಿಣಾಮಗಳು ಆಗಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ.

ಅಷ್ಟೇ ಅಲ್ಲದೇ ಸಾಲಮನ್ನಾ ಯೋಜನೆಯ ಅನುಷ್ಠಾನದಲ್ಲಿಯೂ ಸಾಕಷ್ಟು ಲೋಪ-ದೋಷಗಳು ಕಂಡು ಬಂದಿವೆ.

- ಸಾಲಮನ್ನಾಕ್ಕೆ ಅರ್ಹರಾಗಿರುವ ಫಲಾನುಭವಿಗಳ ಹೆಸರುಗಳು ಹಣಕಾಸಿನ ಸಂಸ್ಥೆಗಳ ಪಟ್ಟಿಯಲ್ಲಿ ಇಲ್ಲದೇ ಇರುವುದು
- ಕೃಷಿಯೇತರ ಸಾಲಗಾರರನ್ನೂ ಸದರಿ ಯೋಜನೆಯಲ್ಲಿ ಸೇರ್ಪಡಿಸಿದ್ದು
- ಸಾಲಮನ್ನಾ ಯೋಜನೆಯಲ್ಲಿ ಫಲಾನುಭವಿಗಳಾದವರು ದಾಖಲೆಗಳನ್ನು ಇಡದೇ ಇರುವುದು, ಮುಂತಾದವುಗಳು

ಪ್ರಸ್ತುತ ಯೋಜನೆಯು ಈ ಹಿಂದೆ ಆದಂಥ ಲೋಪ-ದೋಷಗಳನ್ನು ನಿವಾರಿಸಿ ಒದಗಬಹುದಾದಂತಹ ಯಾವುದೇ ಲೋಪ-ದೋಷಗಳ ಬಗ್ಗೆ ಎಚ್ಚರಿಕೆ ವಹಿಸಿ ಸೂಕ್ತ ಮತ್ತು ಸರಿಯಾದ ಕ್ರಮದಲ್ಲಿ ಪಾರದರ್ಶಕವಾಗಿ ಅನುಷ್ಠಾನಗೊಳಿಸಿದ್ದೇ ಆದಲ್ಲಿ ನಿಜವಾಗಿಯೂ ತೊಂದರೆಯಲ್ಲಿರುವ ರೈತರಿಗೆ ಲಾಭ ದೊರೆತು ರೈತರು ಸದೃಢರಾಗಲು ಅನುಕೂಲವಾಗುವುದು.
ಕೇವಲ ಸಾಲಮನ್ನಾ ಮಾಡುವುದಕ್ಕಿಂತಲೂ ರೈತರು ಸಾಲದ ಸುಳಿಯಲ್ಲಿ ಸಿಲುಕದೇ ಮಾನ್ಯ ಪ್ರಧಾನ ಮಂತ್ರಿಗಳವರ ಮಹತ್ವಾಕಾಂಕ್ಷೆ ಯೋಜನೆಯಾದ ರೈತರ ಆದಾಯ ದ್ವಿ-ಗುಣಗೊಳಿಸುವಂಥ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಕೈಗೊಳ್ಳುವ ಕಡೆಗೆ ಹೆಜ್ಜೆ ಇಡಬೇಕಾಗಿದೆ.

**ರೈತರು ಸಮಾಜಕ್ಕೆ ಹೊರೆಯಲ್ಲ ಅವರು ದೇಶದ ನಿಜವಾದ ಆಸ್ತಿಯೆಂದು ತಿಳಿದುಕೊಳ್ಳುವುದು ಅಗತ್ಯವಿದೆ ಎಂಬುವದನ್ನು ಈ ಮೂಲಕ ಮನವರಿಕೆ ಮಾಡಿಕೊಡಲು ಇಚ್ಚಿಸುತ್ತೇನೆ ಧನ್ಯವಾದಗಳು.**

**ಧನ್ಯವಾದಗಳು**

**ಪ್ರೊ. ಎಸ್.ಬಿ. ಮಹಾಜನಶೆಟ್ಟಿ,** *ಕೃಷಿ ವಿಶ್ವವಿದ್ಯಾಲಯ, ಧಾರವಾಡ*

ಈ ಚರ್ಚಾಕೂಟದ ಅಧ್ಯಕ್ಷತೆಯನ್ನು ವಹಿಸಿದಂತಹ ರೈತ ಪ್ರೇಮಿಗಳು, ಕೃಷಿ ವಿಜ್ಞಾನಿಗಳು, ನಮ್ಮ ಕೃಷಿ ವಿಶ್ವವಿದ್ಯಾಲಯದ ಹಿಂದಿನ ಕುಲಪತಿಗಳು, ರಾಷ್ಟ್ರ ಮಟ್ಟದ ಮತ್ತು ರಾಜ್ಯ ಮಟ್ಟದಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿಂದತಹ ಡಾ. ಎಸ್.ಎ. ಪಾಟೀಲ ಅವರೆ, ಸಂಸ್ಥೆಯ ನಿರ್ದೇಶಕರಾದ ಡಾ. ಅಣ್ಣಿಗೇರಿಯವರೆ ಹಾಗೂ ಇಲ್ಲಿ ಉಪಸ್ಥಿತರಿರುವ ಕೃಷಿ ಬಾಂಧವರೆ ಮತ್ತು ಬೇರೆ ಬೇರೆ ವಿಶ್ವವಿದ್ಯಾಲಯ ಮತ್ತು ಸಂಸ್ಥೆಗಳಿಂದ ಬಂದಂತಹ ನನ್ನ ಎಲ್ಲಾ ಸಹದ್ಯೋಗಿಗಳೆ, ನೆಚ್ಚಿನ ವಿದ್ಯಾರ್ಥಿಗಳೇ ಹಾಗೂ ಸಿಎಮ್‌ಡಿಆರ್ ಸಂಸ್ಥೆಯ ಎಲ್ಲ ಸಿಬ್ಬಂದಿ ವರ್ಗದವರೇ, ಈಗಾಗಲೇ ಕುಲಕರ್ಣಿಯವರು ಹೇಳಿದಂತೆ ಕೃಷಿಕರು ನಮ್ಮ ದೇಶದ ಬೆನ್ನೆಲಬು. ಕೊನೆಗೆ ಒಂದು ಮಾತನ್ನು ಹೇಳಿದರು ಕೃಷಿಕರನ್ನು ಹೊರೆ ಎಂದು ತಿಳಿದುಕೊಳ್ಳಬಾರದು ಮತ್ತು ಕೃಷಿಕರು ನಮ್ಮ ಸಮಾಜದ ಒಂದು ಆಸ್ತಿ ಎಂದು ತಿಳಿದುಕೊಳ್ಳಬೇಕು ಎಂದು ಕುಲಕರ್ಣಿಯವರು ಹೇಳಿದರು. ನಾನು ಮುಂದುವರೆದು ಒಂದು ಮಾತನ್ನು ಹೇಳಬಯಸುತ್ತೇನೆ, ಕೃಷಿಕರು ಸಮಾಜದ ಹೊರೆಯಲ್ಲ, ಕೃಷಿಕರು ಸಮಾಜದ ಹೊರೆಯನ್ನು ಹೊತ್ತುಕೊಂಡಿರುವವರು. ಏಕೆಂದರೆ ನಮ್ಮಲ್ಲಿ ಫಿಜಿಯೊ ಫೇಸ್ ಎನ್ನುವ ತಜ್ಞರ ತಂಡ ಮೊದಲು ಇತ್ತು, ಅವರು ಹೇಳುವ ಪ್ರಕಾರ ನಿಮ್ಮಲ್ಲಿ ಎಷ್ಟೇ ರತ್ನಗಳಿರಬಹುದು, ಮುತ್ತುಗಳಿರಬಹುದು, ಬಂಗಾರವಿರಬಹುದು ಅವುಗಳನ್ನು ತಿನ್ನಲಾಗುವುದಿಲ್ಲ. ನಾವು ಏನೇ ತಿನ್ನಬೇಕಾದರೂ ಅದನ್ನು ಮಣ್ಣಿನಿಂದಲೇ ಬೆಳೆಯಬೇಕು, ಅವನು ಪ್ರಧಾನ ಮಂತ್ರಿಯಿರಲಿ, ರಾಜಾ ಇರಲಿ ಮಂತ್ರಿ ಇರಲಿ ಅವರು ರೈತರು ಬೆಳೆದ ಬೆಳೆಯನ್ನೇ ತಿನ್ನಬೇಕು. ಸಮಾಜದ ಅಭಿವೃದ್ಧಿಯಾಗಿರಬಹುದು, ರಾಜ್ಯದ ಅಭಿವೃದ್ಧಿಯಾಗಿರಬಹುದು ರಾಷ್ಟ್ರದ ಅಭಿವೃದ್ಧಿಯಾಗಿರಬಹುದು, ಅಂತರಾಷ್ಟ್ರೀಯ ಅಭಿವೃದ್ಧಿಯಾಗಿರಬಹುದು ಅದಕ್ಕೆ ಕೊಡಗೆಯ ವಿಷಯ ಬಂದಾಗ ಮೊಟ್ಟಮೊದಲು ನಾವು ಹೇಳಬೇಕಾಗಿದ್ದು ನಮ್ಮ ರೈತರ ಕೊಡುಗೆಗಳನ್ನು ಮತ್ತು ಅವರ ಕೊಡುಗೆಗಳನ್ನು ನಾವೆಲ್ಲಾ ಸ್ಮರಿಸಬೇಕು. ಇವತ್ತು ನಮ್ಮ ರಾಷ್ಟ್ರದ ಒಟ್ಟು ಆದಾಯದಲ್ಲಿ ಶೇ 15 ರಿಂದ 16 ರಷ್ಟು ಪಾಲು ಕೃಷಿ ಕ್ಷೇತ್ರದ್ದಿದೆ. ನಾವು ವಿದ್ಯಾರ್ಥಿಗಳಾಗಿದ್ದಾಗ ಇದು ಶೇ 50 ರಷ್ಟಿತ್ತು, ಈಗ ಕಡಿಮೆಯಾಗಿದೆ ಎಂದ ಮಾತ್ರಕ್ಕೆ ಕೃಷಿಯ ಮಹತ್ವವು ಕಡಿಮೆಯಾಗುವದಿಲ್ಲ. ರಾಷ್ಟ್ರದ ಆದಾಯದಲ್ಲಿ ಕೃಷಿಯ ಕೊಡುಗೆ ಹೆಚ್ಚಾಗುತ್ತಲಿದೆ. ನಾವು ಯಾವುದೇ ವಿಚಾರ ಮಾಡದೇ ನಮ್ಮ ಕೃಷಿಯ ಮತ್ತು ರೈತರ ಅಭಿವೃದ್ಧಿ ಮತ್ತು ಸ್ಥಿರತೆಗಾಗಿ ಪ್ರಯತ್ನವನ್ನು ಮಾಡಲೇಬೇಕು. ಆದರೆ ನನ್ನ ಒಂದು ವೈಯಕ್ತಿಕ ವಿಚಾರ ಎಂದರೆ ಡಾ. ಕುಲಕರ್ಣಿಯವರು ಹೇಳಿದಂತೆ ನಮ್ಮಲ್ಲಿ 1990 ರಲ್ಲಿ ಮೊಟ್ಟ ಮೊದಲನೇ ಬಾರಿಗೆ ಶ್ರೀ ವಿ.ಪಿ.ಸಿಂಗ್ ಅವರು ಪ್ರಧಾನಿಯಿದ್ದಾಗ ಸುಮಾರು ಹತ್ತು ಸಾವಿರ ಕೋಟಿಗಳಷ್ಟು ಸಾಲ ಮನ್ನಾ ಆಯಿತು. 2000ರಲ್ಲಿ ಸಣ್ಣ ಪ್ರಮಾಣದಲ್ಲಿ ಹರಿಯಾಣಾ ರಾಜ್ಯದಲ್ಲಿ ಆಯಿತು. 2008 ರಲ್ಲಿ ರಾಷ್ಟ್ರಮಟ್ಟದಲ್ಲಿ ಸುಮಾರು 52 ಸಾವಿರ ಕೋಟಿಯಷ್ಟು ಸಾಲ ಮನ್ನಾ ಆಯಿತು. ಮುಂದೆ ಅದನ್ನು ಪರಿಶೀಲಿಸಿದಾಗ ಆಗ ಕೇವಲ ಬೆಳೆ ಸಾಲವಷ್ಟೆ ಅಲ್ಲದೇ ಹೂಡಿಕೆಯ ಸಾಲವನ್ನು ಲೆಕ್ಕಕ್ಕೆ ತೆಗೆದುಕೊಂಡಾಗ ಅದು ಸುಮಾರು 70 ಸಾವಿರ ಕೋಟಿಯಷ್ಟು ಸಾಲ ಮನ್ನಾ ಆಗಿತ್ತು. ಇಷ್ಟೆಲ್ಲಾ ಮಾಡಿದರೂ ಸಹಿತ ರೈತ ಬಾಂಧವರಿಗೆ ಗೊತ್ತಿದ್ದಹಾಗೆ, ವಿಜ್ಞಾನಿಗಳಿಗೆ ಗೊತ್ತಿದ್ದಹಾಗೆ ಮತ್ತು ಎಲ್ಲರಿಗೂ ಗೊತ್ತಿದ್ದಹಾಗೆ ರೈತರ ಬವಣೆ ನಿಜವಾದ ಅರ್ಥದಲ್ಲಿ ಸಂಪೂರ್ಣವಾಗಿ ಹೋಗಿಲ್ಲ. ಅದಕ್ಕೆ ಕಾರಣಗಳು ಹಲವಾರು ಇವೆ. ಮೊದಲನೆಯದಾಗಿ ಉತ್ಪಾದನೆಯ ವೆಚ್ಚ, ನಮ್ಮ ರಾಷ್ಟ್ರದ ಆಹಾರದ ಉತ್ಪಾದನೆ ಹೆಚ್ಚಾಗುತ್ತಿದೆ, ಸುಮಾರು 270 ಮಿಲಿಯನ್ ಟನ್ ಗಳಷ್ಟಿವೆ. ಸ್ವಾತಂತ್ರ್ಯದ ಸಮಯದಲ್ಲಿ ಅತ್ಯಂತ ಕಡಿಮೆಯಿದ್ದಂತಹ ಉತ್ಪಾದನೆಯು ಇವತ್ತಿನ ಸಮಯದಲ್ಲಿ ಸಾಕಷ್ಟು ಪ್ರಮಾಣದಲ್ಲಿದ್ದರೂ ಸಹಿತ ರೈತರಿಗೆ ಹೊರೆ ಏಕೆ ಜಾಸ್ತಿಯಾಗುತ್ತಿದೆಯೆಂದರೆ ಕೃಷಿ ವೆಚ್ಚ ಅಥವಾ ಕೃಷಿ ಉತ್ಪಾದನೆ ಹೆಚ್ಚಾಗುತ್ತಿದೆ ಎಂಬುದು ಒಂದು ಭಾಗ. ಎರಡನೇಯದಾಗಿ ರೈತರು ತಮ್ಮ ಬೆಳೆಯನ್ನು ತೆಗೆದುಕೊಂಡು ಮಾರುಕಟ್ಟೆಗೆ ಬಂದಾಗ ರೈತರ ಪರಿಶ್ರಮಕ್ಕೆ ತಕ್ಕಂತೆ ಸರಿಯಾದ ರೀತಿಯಲ್ಲಿ ಪ್ರತಿಫಲವನ್ನು ನೀಡುವ ಬೆಲೆಯು ಸಿಗುತ್ತಿಲ್ಲ. ಇವೆರೆಡು ಮುಖ್ಯ ಕಾರಣಗಳನ್ನು ತೆಗೆದುಕೊಂಡು ನಾವು ವಿಚಾರ ಮಾಡಿದಾಗ ನಮಗೆ ಅನಿಸಿದ್ದೇನೆಂದರೆ ತಾತ್ಕಾಲಿಕವಾಗಿ ಕಣ್ಣೀರನ್ನು ಒರೆಸಿಕೊಳ್ಳುತ್ತಿರುವಂತಹ ರೈತರಿಗೆ ಸಾಲ ಮನ್ನಾ ಎಂಬ ಪ್ರಕ್ರಿಯೆಗಳಿಂದ ಅವರನ್ನು ತಾತ್ಕಾಲಿಕವಾಗಿ ಶಾಂತಗೊಳಿಸುವದು ಒಳ್ಳೆಯದೊ ಅಥವಾ ಧೀರ್ಘ ಕಾಲದಲ್ಲಿ ರೈತರ ಬದಕು ಸ್ಥಿರವಾಗುವದು ಮತ್ತು ಅವರ ಕೃಷಿ ಆದಾಯ ಸ್ಥಿರವಾಗುವದು ಒಳ್ಳೆಯದೊ ಎನ್ನುವ ವಿವೇಚನೆಯನ್ನು ನಾವು ಮಾಡಬೇಕು. ಏಕೆಂದರೆ 2014 ರಲ್ಲಿ ತೆಲಂಗಾಣದಲ್ಲಿ ಸುಮಾರು 20 ಸಾವಿರ ಕೋಟಿಯಷ್ಟು ಸಾಲವು ಮನ್ನಾ ಆಯಿತು, ಆಂಧ್ರ ಪ್ರದೇಶದಲ್ಲಿ 40 ಸಾವಿರ ಕೋಟಿಯಷ್ಟು ಸಾಲ ಮನ್ನಾ ಆಯಿತು. ಆದರೆ 2014-15 ರ

ಅವಧಿಯಲ್ಲಿ ಒಂದು ವಿಶ್ಲೇಷಣೆಯನ್ನು ಮಾಡಿದಾಗ ಆಂಧ್ರಪ್ರದೇಶದಲ್ಲಿ ಶೇ30 ರಷ್ಟು ಮತ್ತು ತೆಲಂಗಾಣದಲ್ಲಿ ಶೇ 50 ರಷ್ಟು ರೈತರ ಆತ್ಮಹತ್ಯೆ ಪ್ರಕರಣಗಳು ಆದವು. ರೈತರ ಸಾಲ ಮನ್ನಾ ಮಾಡುವದರ ಮೂಲಕ ರೈತರ ಹೊರೆಯನ್ನು ಇಳಿಸಲು ಸಾಧ್ಯವಾಗಿದೆ ಎಂಬ ಭ್ರಮೆಯಲ್ಲಿಯೇ ಇರಬೇಕೊ ಅಥವಾ ರೈತರ ಜೀವನವನ್ನು ಸುಭದ್ರಗೊಳಿಸುವತ್ತ ಕೆಲವು ಕ್ರಮಗಳನ್ನು ಕೈಗೊಳ್ಳುವದರ ಕಡೆಗೆ ಗಮನವನ್ನು ಹರಿಸಬೇಕೋ ಎನ್ನುವದನ್ನು ನಾವೆಲ್ಲ ವಿಚಾರ ಮಾಡಬೇಕಾಗಿದೆ. ನಾನು ವೈಯಕ್ತಿಕವಾಗಿ ಹೇಳುವುದೇನೆಂದರೆ ಅಂತಹ ಗಂಭೀರವಾದ ಪರಸ್ಥಿತಿ ಬಂದಾಗ ತಾತ್ಕಾಲಿಕವಾಗಿ ಸಾಲ ಮನ್ನಾ ಅನ್ನುವ ಪ್ರಕ್ರಿಯೆಯನ್ನು ಸರ್ಕಾರ ಮಾಡಲಿ ಆದರೆ ಸರ್ಕಾರ ಮಾಡಬೇಕಾದಂತಹ ಅತ್ಯಂತ ಮಹತ್ತರವಾದ ಕಾರ್ಯಗಳು ಹಲವಾರು ಇವೆ. ಉದಾಹರಣೆಗೆ : ನಮ್ಮ ಭಾರತ ಸರ್ಕಾರ ಪ್ರತಿವರ್ಷ 23 ಮಹತ್ವದ ಬೆಳೆಗಳಿಗೆ ಸಿಏಸಿಪಿಯ ಶಿಫಾರಸ್ಸಿನೊಂದಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಘೋಷಣೆ ಮಾಡುತ್ತದೆ. ಅದನ್ನು ಈ ಭಾರಿ ಕೃಷಿ ವೆಚ್ಚದ 1.5 ಬಾರಿ ಹೆಚ್ಚು ಮಾಡಿದೆ, ಇದು ಅತ್ಯಂತ ಉತ್ತಮವಾದ ಹೆಜ್ಜೆ. ಎಮ್.ಎಸ್.ಪಿ.ಯು ಎರೆಡು ಪ್ರಮುಖವಾದ ಆಯಾಮಗಳನ್ನು ಹೊಂದಿದೆ. ಮೊದಲನೆಯದು ಬೀಜ ಬಿತ್ತನೆ ಕಾಲದಲ್ಲಿ ಕನಿಷ್ಠ ಬೆಂಬಲ ಬೆಲೆಯನ್ನು ಘೋಷಣೆ ಮಾಡುವದು ಅಷ್ಟೇ ಅಲ್ಲದೆ ಇದರ ಕಾರ್ಯ ಸಂಪೂರ್ಣವಾಗಬೇಕಾದರೆ ಮಾರುಕಟ್ಟೆ ಬೆಲೆಗಳು ಕನಿಷ್ಠ ಬೆಂಬಲ ಬೆಲೆಗಳಿಗಿಂತ ಕಡಿಮೆಯಾದಾಗ ಸರ್ಕಾರವು ತತಕ್ಷಣ ಮಾರುಕಟ್ಟೆಗೆ ಪ್ರವೇಶಮಾಡಬೇಕು ಮತ್ತು ಬೆಳೆಗಳನ್ನು ಖರೀದಿಸುವ ಪ್ರಕ್ರಿಯೆಗಳನ್ನು ಕೈಗೊಳ್ಳಬೇಕು, ಆದರೆ ದುರದೃಷ್ಟಕರ, ಇದು ಸಾಧ್ಯವಾಗಿಲ್ಲ. ಅದು ನೀವು 1.5, 2 ಅಥವಾ 10 ಬಾರಿ ಹೆಚ್ಚುಮಾಡಿ ಅದರ ಪ್ರತಿಫಲವು ರೈತರಿಗೆ ದೊರೆಯದೆ ರೈತರ ಸಂಕಷ್ಟ ಕೊನೆಯಾಗುವುದಿಲ್ಲ. ಅದಕ್ಕಾಗಿ ನಾನು ಸುಮಾರು ನೂರು ಸಭೆಗಳಲ್ಲಿ ಹೇಳಿದ್ದೇನೆ ಮಾರುಕಟ್ಟೆಯ ಬೆಲೆಗಳು ಬೆಂಬಲ ಬೆಲೆಗಿಂತ ಕಡಿಮೆಯಾದಾಗ ಮುಷ್ಕರಕ್ಕೆ ಹೋಗಬೇಕಾಗಿಲ್ಲ, ಘೋಷಣೆ ಕೂಗಬೇಕಾಗಿಲ್ಲ. ಇವೆಲ್ಲ ಒಂದಕ್ಕೊಂದು ಪೂರಕ ಪ್ರಕ್ರಿಯೆಗಳಾಗಬೇಕು. ಎ.ಪಿ.ಎಮ್.ಸಿ. ಯಲ್ಲಾಗಲಿ ಅಥವಾ ಹೋಬಳಿ ಮಟ್ಟದಲ್ಲಾಗಲಿ ಒಂದು ಖರೀದಿ ಕೇಂದ್ರವನ್ನು ನಿರಂತರವಾಗಿ ತೆಗೆದಿರಬೇಕು. ಯಾವಾಗ ಮಾರುಕಟ್ಟೆ ಬೆಲೆಗಳು ಎಮ್.ಎಸ್.ಪಿ. ಬೆಲೆಗಳಿಗಿಂತ ಕಡಿಮೆಯಾಗುತ್ತದೆಯೋ ಆವಾಗ ಎ.ಪಿ.ಎಮ್.ಸಿ ತಕ್ಷಣವೇ ನಿರಂತರವಾಗಿ ಬೆಳೆಗಳನ್ನು ಖರೀದಿಸಲು ಪ್ರಾರಂಭಿಸಬೇಕು. ಇನ್ನೊಂದು ಮುಖ್ಯವಾದುದೆಂದರೆ ಅಂದರೆ ಗಿರವಿ ಸಾಲ ಯೋಜನೆ ಇದೆ ಎ.ಪಿ.ಎಮ್.ಸಿ.ಯಲ್ಲಿ ಬ್ಯಾಂಕ್ ಸಾಲವನ್ನು ಕೊಡುತ್ತಾರೆ ಆದರೆ ಎ.ಪಿ.ಎಮ್.ಸಿ.ಯಲ್ಲಿ ಗಿರವಿ ಸಾಲ ಯೋಜನೆ ಅತ್ಯಂತ ಅದ್ಭುತವಾದ ಅರ್ಥಪೂರ್ಣವಾದ ಯೋಜನೆಯಾಗಿದೆ. ಇದರಲ್ಲಿ ಮಾರುಕಟ್ಟೆಯ ಬೆಲೆಗಳು ಅತ್ಯಂತ ಕಡಿಮೆಯಾಗಿವೆ, ನಮ್ಮ ಕೃಷಿ ವೆಚ್ಚ ನಮಗೆ ಬರುವುದಿಲ್ಲ, ಹೀಗಾಗಿ ನಮಗೆ ಹಣದ ಅವಶ್ಯಕತೆ ಇದೆ, ಆದರೆ ಹಣದ ಅವಶ್ಯಕತೆಯ ಸಲುವಾಗಿ ಇದನ್ನು ನಾವು ಮಾರಾಟ ಮಾಡಿದರೆ ನಮಗೆ ನಷ್ಟವಾಗುತ್ತದೆ. ಏನು ಮಾಡಬೇಕು ಎಂಬ ಸಂದಿಗ್ಧತೆಯಲ್ಲಿದ್ದಾಗ ರೈತರು ಎ.ಪಿ.ಎಮ್.ಸಿಯಲ್ಲಿ ತಮ್ಮ ಬೆಳೆಯನ್ನು ಅಡವಿಟ್ಟು ತಮ್ಮ ಉತ್ಪನ್ನದ ಪ್ರತಿಶತ 60 ರಷ್ಟು ಮೌಲ್ಯವನ್ನು ಅಥವಾ 2ಲಕ್ಷ ರೂಪಾಯಿಗಳಲ್ಲಿ ಯಾವುದು ಕಡಿಮೆ ಬೆಲೆಯಾಗುತ್ತದೆಯೋ ಆ ಮೊತ್ತವನ್ನು ಬಡ್ಡಿರಹಿತವಾಗಿ ಮೂರು ತಿಂಗಳವರೆಗೆ ನೀಡುತ್ತಾರೆ ಮತ್ತು ಈ ಸಾಲದ ಅವಧಿ ಆರು ತಿಂಗಳುಗಳು ಇರುತ್ತದೆ. ಈ ಯೋಜನೆ 1992 ರಿಂದ ನಮ್ಮ ರಾಜ್ಯದ ಎಲ್ಲಾ ಎ.ಪಿ.ಎಮ್.ಸಿ.ಗಳಲ್ಲಿ ಪ್ರಾರಂಭವಾಗಿದೆ. ಈಗ ನಮ್ಮ ರಾಜ್ಯದ 162 ಎ.ಪಿ.ಎಮ್.ಸಿ.ಗಳಲ್ಲಿ ಈ ಯೋಜನೆ ಎಷ್ಟರಮಟ್ಟಿಗೆ ಚಾಲ್ತಿ ಇದೆ ಎಂದು ಅಧ್ಯಯನವನ್ನು ಕೈಗೊಂಡಾಗ ಸುಮಾರು ಅರ್ಧಕ್ಕಿಂತ ಹೆಚ್ಚು ಎ.ಪಿ.ಎಮ್.ಸಿ.ಗಳಲ್ಲಿ ಈ ಯೋಜನೆಯನ್ನು ರೈತರಿಗೆ ಒದಗಿಸಿಲ್ಲದಿರುವದು ನಮಗೆ ಕಂಡು ಬಂದಿತು. ರೈತರಿಗೆ ಈ ಯೋಜನೆ ಎಷ್ಟರಮಟ್ಟಿಗೆ ಗೊತ್ತಿದೆ ಎಂದು ವಿಶ್ಲೇಷಣೆ ಮಾಡಿದಾಗ ನಮಗೆ ಕಂಡು ಬಂದ ವಿಷಯವೇನೆಂದರೆ ಶೇ 10ರಷ್ಟು ರೈತರಿಗೂ ಸಹ ಈ ಯೊಜನೆಯ ಬಗ್ಗೆ ಮಾಹಿತಿ ಇಲ್ಲ ಎಂಬುದು. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ ಇಂತಹ ವಿಷಯಗಳಿಗೆ ನಾವು ಹೆಚ್ಚು ಒತ್ತು ಕೊಟ್ಟು ರೈತರಿಗೆ ಅತ್ಯಂತ ಸಂಕಷ್ಟದ ದಿನಗಳು ಬಂದಾಗ ಯಾವ ರೀತಿಯಲ್ಲಿ ತಕ್ಷಣಕ್ಕೆ ನಾವು ಬೆಂಬಲಕ್ಕೆ ಬರಬಹುದು ಎಂದು ಧೀರ್ಘಕಾಲದ ಗಮನವಿಟ್ಟುಕೊಂಡು ನಾವು ವಿಚಾರಮಾಡಿ ಕ್ರಮಗಳನ್ನು ತೆಗೆದುಕೊಂಡರೆ ರೈತರಿಗೆ ಅನುಕೂಲವಾಗಬಹುದು. ಸಾಲ ಮನ್ನಾ ಮಾಡಿ ಎಂದು ಮತ್ತೆ ನಾವು ಮುಂದಿನ ವರ್ಷ ಕೇಳಲಾಗುವದಿಲ್ಲ ಆದರೆ ಈ ಯೋಜನೆಯಡಿಯಲ್ಲಿ ಸಾಲವನ್ನು ನಾವು ಮತ್ತೆ ಕೇಳಬಹುದು. ಬ್ಯಾಂಕಿನಲ್ಲಿ ನಮ್ಮ ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಕೆಲಸ ಮಾಡುತ್ತಿದ್ದಾರೆ. ಅವರು ಹೇಳುವ ಪ್ರಕಾರ 2004 ರ ಯು.ಪಿ.ಎ. ಮೊದಲನೆ ಅವಧಿಯ ಸರ್ಕಾರದಲ್ಲಿ ಸಾಲ ಮನ್ನಾ ಮಾಡಿದಾಗ ಸರ್ಕಾರದಿಂದ 5-6

ವರ್ಷಗಳಾದರೂ ಹಣ ಬ್ಯಾಂಕುಗಳಿಗೆ ಬರಲಿಲ್ಲ. ಈ ಪರಿಸ್ಥಿತಿ ಮುಂದುವರೆದರೆ ಬ್ಯಾಂಕುಗಳು ತುಂಬಾ ಕಷ್ಟಕರವಾದ ಪರಿಸ್ಥಿತಿಯನ್ನು ಎದುರಿಸುವ ದುಸ್ಥಿತಿ ಬರಬಹುದು. ರೈತರಿಗೆ ಸಹಾಯ ಮಾಡಬೇಕು ಆದರೆ ಸಾಲ ಮನ್ನಾ ಒಂದೇ ಮಾರ್ಗವನ್ನಾಗಿಸದೇ ಬೇರೆ ಹಲವಾರು ಕ್ರಮಗಳನ್ನು ಗಮನದಲ್ಲಿಟ್ಟುಕೊಂಡು ರೈತರ ಒಂದು ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಬೇಕು.

**ಪ್ರೊ. ಆರ್.ವ್ಹಿ. ದಾಡಿಭಾವಿ,** *ನಿವೃತ್ತ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ*

ಮಹನೀಯರೇ, ರೈತರ ದುರಂತ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಸದುದ್ದೇಶದಿಂದ ಇಂತಹ ಚರ್ಚಾಗೋಷ್ಠಿಗಳನ್ನು ಸಂಘಟಿಸಿರುವದಕ್ಕಾಗಿ ನಾನು ಸದರಿ ಸಂಸ್ಥೆಯನ್ನು ಅಭಿನಂದಿಸುತ್ತೇನೆ. ಈಗಾಗಲೇ ತಜ್ಞರು ಹಲವಾರು ಪ್ರಮುಖ ಅಂಶಗಳನ್ನು ಮಂಡಿಸಿದ್ದು ನಿರ್ದಿಷ್ಟ ಸಮಸ್ಯೆಯನ್ನು ರಾಜಕೀಯ ಮತ್ತು ಆರ್ಥಿಕ ಎರಡೂ ದೃಷ್ಟಿಕೋನದಿಂದ ನೋಡಬೇಕಾಗಿದೆ. ಸ್ವಾತಂತ್ರ್ಯ ನಂತರದಿಂದ ಇತಿಹಾಸವನ್ನು ನೋಡುವದಾದರೆ ರೈತರನ್ನು ಲೇವಾದೇವಿಗಾರರ ಸಾಲದ ಶೂಲದಿಂದ ಪಾರು ಮಾಡಲು ವಿವಿಧ ಕ್ರಮಗಳನ್ನು ಕೈಗೊಳ್ಳಲಾಗಿದೆ. ಉದಾ: ಬ್ಯಾಂಕುಗಳ ರಾಷ್ಟ್ರೀಕರಣ, ಪ್ರಾದೇಶಿಕ ಬ್ಯಾಂಕುಗಳ ಸ್ಥಾಪನೆ, ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕ್ (ನಬಾರ್ಡ) ಸ್ಥಾಪನೆ, ಆದ್ಯತಾ ವಲಯದಲ್ಲಿ ಸಾಲಗಳು ಮತ್ತು ಕಿಸಾನ್‌ಕಾರ್ಡ ಯೋಜನೆ ಇತ್ಯಾದಿಗಳು. ಇವುಗಳ ಪರಿಣಾಮವಾಗಿ ಸಾಂಸ್ಥಿಕ ಸಾಲಗಳು ದೇಶಿಯ ಒಟ್ಟು ಉತ್ಪನ್ನ (ಜಿಡಿಪಿಯ) ಪ್ರಮಾಣವು ಶೇಕಡಾವಾರು ಹೆಚ್ಚಳವಾಗಿದೆ. ಅಂಕಿಅಂಶಗಳನ್ನು ನೋಡುವದಾದರೆ ಕ್ರಿ.ಶ.1999-2000 ದಲ್ಲಿ ಒಟ್ಟಾರೆ ಕೃಷಿ ದೇಶಿಯ ಉತ್ಪನ್ನದ ಶೇ.10 ರಷ್ಟು ಇದ್ದದ್ದು ಈಗ ಶೇ.43ಕ್ಕೆ ಏರಿಕೆಯಾಗಿದೆ ಅಂದರೆ ಸಾಂಸ್ಥಿಕ ಸಾಲದ ಪ್ರಮಾಣವು ಹೆಚ್ಚಳವಾಗಿದೆ. ಆದರೆ ಇಲ್ಲಿರುವ ಪ್ರಶ್ನೆ ಏನೆಂದರೆ ಸಾಂಸ್ಥಿಕ ಸಾಲದ ಪ್ರಮಾಣದ ಹೆಚ್ಚಳವು ಕೃಷಿ ಕ್ಷೇತ್ರದ ಉತ್ಪಾದಕತೆಗೆ ಕಾರಣವಾಗಿದೆಯೇ? ಇಂತಹ ವಿಷಯಗಳು ಇತರೆ ದೇಶದಲ್ಲಿ ದಾಖಲಾಗಿರುವಂತೆ ನಮ್ಮ ದೇಶದಲ್ಲಿ ದಾಖಲಾಗಿರುವದಿಲ್ಲ. ಉತ್ಪಾದಕತೆಗೆ ಹೆಚ್ಚಳವಾಗಿದೆ ಆದರೆ ಈ ಕುರಿತು ಕೃಷಿ ವಿಶ್ವವಿಧ್ಯಾಲಯಗಳಿಂದ ಹೆಚ್ಚಿನ ಸಂಶೋಧನೆಗಳ ಅಗತ್ಯವಿರುತ್ತದೆ. ಸಾಂಸ್ಥಿಕ ಸಾಲವು ಬಂಡವಾಳ ಹೂಡಿಕೆಯ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಸಹ ಕಂಡುಬರುತ್ತದೆ. ಆದಾಯವು ಹೆಚ್ಚಾಗುತ್ತದೆ ಮತ್ತು ಬಳಕೆಯ ವೆಚ್ಚವು ಹೆಚ್ಚಾಗುತ್ತದೆ ಹಾಗೂ ಅದು ಕೃಷಿ ಕ್ಷೇತ್ರದ ಬೆಳವಣಿಗೆಗೆ ಸಹಾಯವಾಗುತ್ತದೆ. ಒಟ್ಟು ರೈತರಲ್ಲಿ ಶೇ.52 ರಷ್ಟು ಕುಟುಂಬಗಳು ಮಾತ್ರ ಸಾಲವನ್ನು ಪಡೆದಿದ್ದು ಅವರಲ್ಲಿ ಶೇ.36 ರಷ್ಟು ಕುಟುಂಬಗಳು ಈಗಲೂ ಅನೌಪಚಾರಿಕ ವಲಯವನ್ನೇ ಅವಲಂಬಿಸಿವೆ ಮತ್ತು ಸಾಲ ಪಡೆದ ಕುಟುಂಬಗಳಲ್ಲಿ ಶೇ.82 ರಷ್ಟು ಸಣ್ಣ ಮತ್ತು ಅಂಚಿನ ಹಿಡುವಳಿದಾರರಾಗಿದ್ದಾರೆ. ಸಾಲಮನ್ನಾ ಯೋಜನೆಯು ಈಗ ಗಂಭೀರ ಸಮಸ್ಯೆಯಾಗಿದೆ, 2008ರ ನಂತರ ನೋಡುವದಾದರೆ ಉತ್ತರಪ್ರದೇಶ, ಮಹಾರಾಷ್ಟ್ರ, ಪಂಜಾಬ ಮತ್ತು ತಮಿಳುನಾಡು ರಾಜ್ಯಗಳು ಸಾಲಮನ್ನಾ ಯೋಜನೆಯನ್ನು ಘೋಷಿಸಿವೆ. ಕರ್ನಾಟಕ ಸರಕಾರವು 34000 ಕೋಟಿ ರೂ.ಗಳನ್ನು ಸಾಲಮನ್ನಾ ಘೋಷಿಸಿದ್ದು, 22 ಲಕ್ಷ ರೈತರಿಗೆ ಲಾಭದಾಯಕವೆಂದು ಘೋಷಿಸಿದೆ ಅದರಂತೆ ಮುಂಗಡಪತ್ರ ಮಂಡಿಸುವ ಮುನ್ನ ಸಿದ್ದರಾಮಯ್ಯನವರ ಸರಕಾರವು ಸಹಕಾರಿ ಬ್ಯಾಕುಗಳಲ್ಲಿರುವ 50,000 ರೂ.ಗಳ ವರೆಗಿನ ಸಾಲಮನ್ನಾ ಘೋಷಿಸಿದ್ದು ಇದರ ಮೊತ್ತ 8000 ಕೋಟಿ ರೂ. ಆಗುತ್ತದೆ. ಅಂತಿಮವಾಗಿ ಇದು ಯಾರಿಗೆ ಪ್ರಯೋಜನಕಾರಿಯಾಗಲಿದೆ ಎಂಬುದೇ ಪ್ರಮುಖ ಪ್ರಶ್ನೆಯಾಗಿದೆ. ಶ್ರೀ ಕುಮಾರಸ್ವಾಮಿಯವರ ಸರಕಾರವು ಮುಂಗಡಪತ್ರ ಮಂಡಿಸುವಾಗ ಸಹಕಾರಿ ಸಂಘಗಳಿಂದ ಪಡೆದ ಒಂದು ಲಕ್ಷ ರೂ.ವರೆಗಿನ ಸಾಲಮನ್ನಾವನ್ನು ಘೋಷಿಸಿದೆ ಇದರ ಮೊತ್ತ ಒಟ್ಟು 53000 ಕೋಟಿ ರೂ.ಗಳಾಗುತ್ತವೆ. ಈಗಿರುವ ಪ್ರಶ್ನೆ ಏನೆಂದರೆ ಇಂತಹ ದೊಡ್ಡ ಮೊತ್ತವನ್ನು ಕ್ರೋಢೀಕರಿಸುವದಾದರೂ ಹೇಗೆ? ಹಾಗೂ ಇಂತಹ ಸಂಧಿಗ್ಧ ಪರಿಸ್ಥಿತಿಯನ್ನು ನಿಭಾಯಿಸುವದಾದರೂ ಹೇಗೆ? ಬಹುಶಃ ಕುಮಾರಸ್ವಾಮಿಯವರು ಚುನಾವಣಾ ಪ್ರಣಾಳಿಕೆಯಲ್ಲಿ ಎಲ್ಲ ಸಾಲವನ್ನುಮನ್ನಾ ಮಾಡುವ ಭರವಸೆಯನ್ನು ನೀಡುವಾಗ ಈ ಬಗ್ಗೆ ಊಹಿಸಿರಲಿಕ್ಕಿಲ್ಲಾ ಆದರೆ ಅವರ ಒಕ್ಕೂಟ ಸರಕಾರದಲ್ಲಿ ತಾವು ಕಿರಿಯ ಪಾಲುದಾರರಾಗುತ್ತೇವೆಂದು ನಿರೀಕ್ಷಿಸಿದ್ದು, ಅದೃಷ್ಟವಶಾತ್ ತಮ್ಮ ಕೈಗೆ ಅಧಿಕಾರ ಬಂದಿತು. ಆದರೆ ಈಗಿರುವ ಪ್ರಶ್ನೆ ಏನೆಂದರೆ ಈ ಸಮಸ್ಯೆಯನ್ನು ನಿಭಾಯಿಸುವದು ಹೇಗೆ ಎಂಬುದಾಗಿದೆ. ಸೈದ್ಧಾಂತಿಕವಾಗಿ ಹೇಳುವದಾದರೆ, ಈ ನಿರ್ದಿಷ್ಟ ಸಮಸ್ಯೆಯಿಂದ ಹೊರಬರಲು ಕೆಲವು ಸಂಗತಿಗಳನ್ನು ವಿಮರ್ಶಿಸಬೇಕಾಗುತ್ತದೆ. ಯಾವಾಗ ಸಾಲ ಮರುಪಾವತಿ ಮಾಡುವದು, ಈಗಿರುವ ರಾಜಕೀಯ ಪರಿಸ್ಥಿತಿ

ಏನು, ವಾಣಿಜ್ಯ ಬ್ಯಾಂಕುಗಳ ಒಟ್ಟಾರೆ ಪರಿಸ್ಥಿತಿಯನ್ನು ಅಭ್ಯಸಿಸಬೇಕಾಗುತ್ತದೆ. ಕೈಗಾರಿಕಾ ವಲಯ ಅಪ್ರಯೋಜಕ ಆಸ್ತಿಯ ಪ್ರಮಾಣವು ಕೈಗಾರಿಕಾ ವಲಯದಲ್ಲಿ ಶೇ.21 ರಷ್ಟು ಮತ್ತು ಕೃಷಿ ವಲಯದಲ್ಲಿ ಶೇ.6 ರಷ್ಟು ಹೊಂದಿದೆ. ಆದ್ದರಿಂದ ಕೃಷಿ ಕ್ಷೇತ್ರವು ಕೈಗಾರಿಕಾ ಕ್ಷೇತ್ರಗಳಿಗೆ ಹೋಲಿಸಿದರೆ ಉದ್ದೇಶಪೂರ್ವಕವಾಗಿ ಡಿಫಾರ್ಟರ್ಸಗಳನ್ನು ಹೊಂದಿಲ್ಲ. ಕೈಗಾರಿಕೆಗಳು ದಿವಾಳಿಯಾದಾಗ ಇರುವ ಯೋಜನೆಗಳು ಕೃಷಿ ಕ್ಷೇತ್ರಕ್ಕೆ ಇರುವದಿಲ್ಲ. ಇದು ರೈತರು ತೊಂದರೆಗೊಳಗಾದಾಗ ಸಾಲವನ್ನು ಮರುಪಾವತಿಸಲು ಸಹಾಯಕವಾಗುತ್ತದೆ. ಇತ್ತೀಚಿಗೆ ಪ್ರಕಟಗೊಂಡ ಉರ್ಜಿತ್ ಪಟೇಲ್ ಸಮೀತಿಯ ವರದಿಯ ಪ್ರಕಾರ ಎಲ್ಲ ರಾಜ್ಯಗಳು ಸಾಲಮನ್ನಾ ಯೋಜನೆ ಜಾರಿಗೆ ತಂದಲ್ಲಿ ಇದರ ಪರಿಣಾಮವು ಜಿಡಿಪಿಯ ಶೇ.2 ರಷ್ಟರ ಮಟ್ಟಗೆ ಕಾರಣವಾಗಬಹುದು. ಒಟ್ಟು ಸಾಲಮನ್ನಾ ಮೊತ್ತವು ಶೇ.2 ರಷ್ಟು ಇರುತ್ತದೆ. ಇದರ ಅರ್ಥ ಒಟ್ಟು ದೇಶಿಯ ಉತ್ಪನ್ನದ ಶೇ.2 ರಷ್ಟರ ಮೊತ್ತದ ಮೇಲೆ ಪರಿಣಾಮ ಬೀರುತ್ತದೆ. ಇದಕ್ಕಾಗಿ ರಾಜ್ಯ ಸರಕಾರವು ಸಾಲ ಪಡೆಯಬೇಕಾಗುತ್ತದೆ. ತತ್ಪರಿಣಾಮವಾಗಿ ರಾಜ್ಯದಲ್ಲಿ ಮತ್ತು ದೇಶದಲ್ಲಿ ಹಣದುಬ್ಬರದ ಪ್ರಮಾಣ ಹೆಚ್ಚುತ್ತದೆ . ಇದರಿಂದಾಗಿ ರೈತರ ಕಲ್ಯಾಣವನ್ನು ಸಾಧಿಸುವದು ತುಂಬಾ ಕಷ್ಟಕರವಾಗುತ್ತದೆ ಏಕೆಂದರೆ ರೈತರು ಕೃಷಿ ಮತ್ತು ಕೃಷಿಯೇತರ ಎರಡೂ ಉದ್ದೇಶಗಳಿಗಾಗಿ ಸಾಲವನ್ನು ಪಡೆದಿರುತ್ತಾರೆ ಹಾಗೂ ಸಾಲಮನ್ನಾ ಆಗುತ್ತದೆ ಎಂಬ ನೀರಿಕ್ಷೆಯಲ್ಲಿ ಮರುಪಾವತಿ ಮಾಡಬಾರದೆಂಬ ಭಾವನೆ ಮೂಡುತ್ತದೆ. ವಿವಿಧ ರಾಜಕೀಯ ಪಕ್ಷಗಳು ಚುನಾವಣಾ ಪ್ರಣಾಳಿಕೆಗಳಲ್ಲಿ ಸಾಲಮನ್ನಾ ಮಾಡಬಹುದೆಂಬ ನೀರಿಕ್ಷೆಯಿಂದ ಮರುಪಾವತಿಯಾಗುತ್ತಿಲ್ಲ. ಬಹುತೇಕ ರಾಜಕೀಯ ಪಕ್ಷಗಳು ಸಾಲಮನ್ನಾವನ್ನು ರಾಜಕೀಯ ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ಆದರೆ ಇದು ಅಂತಿಮವಾಗಿ ಹಣದುಬ್ಬರದ ಪರಿಸ್ಥಿತಿಗೆ ಕಾರಣವಾಗಬಹುದು ಮತ್ತು ಹಣವು ಸಾಕಾಗುವದಿಲ್ಲ. ಈ ಹೊರೆಯು ತೆರಿಗೆ ಹೆಚ್ಚಳಕ್ಕೆ ಕಾರಣವಗುತ್ತದೆ. ಪೆಟ್ರೋಲ್, ಡಿಸೆಲ್‌ಗಳ ಮೇಲಿನ ತೆರಿಗೆಗಳ ಹೆಚ್ಚಳದಿಂದಾಗಿ ಸರಕು ಸಾಮಗ್ರಿಗಳ ಮೇಲಿನ ಬೆಲೆಯು ಗಗನಕ್ಕೇರುತ್ತಿದೆ. ಈ ಕಾರಣದಿಂದಾಗಿ ಸಾಲಮನ್ನಾ ಯೋಜನೆಯನ್ನು ಮುಂಗಡಪತ್ರ ಅಂದಾಜುಗಳಲ್ಲಿ ಸೇರಿಸಲಾಗಿಲ್ಲ. ಇದು ಮುಂಗಡಪತ್ರದ ಪರಿಮಿತಿಯಿಂದ ಹೊರಗಿದೆ. ಆದ್ದರಿಂದ ವಿವಿಧ ಸಂಪನ್ಮೂಲಗಳನ್ನು ಕಂಡುಹಿಡಿಯಬೇಕಾಗಿದೆ. ಇದು ರಾಜ್ಯ ಸರಕಾರಗಳ ಬೌದ್ಧಿಕ ಸನ್ನಿವೇಶಗಳ ಮೇಲೆ ಪರಿಣಾಮ ಬೀರುತ್ತದೆ. ಈಗಾಗಲೇ ಮುಂಗಡಪತ್ರದ ಕೊರತೆಯು ಶೇ.3.1 ರಷ್ಟು ದಾಟಿದೆ. ಇದರಿಂದಾಗಿ ಸರಕಾರದ ಮೇಲೆ ಹೆಚ್ಚಿನ ಒತ್ತಡ ಬೀಳುತ್ತದೆ. ಆದ್ದರಿಂದ ಸರಕಾರದ ಬೌದ್ಧಿಕ ಸನ್ನಿವೇಶ ಮತ್ತು ಬ್ಯಾಂಕುಗಳ ಹಣಕಾಸಿನ ವ್ಯವಸ್ಥೆಯನ್ನು ಪರಿಗಣಿಸಬೇಕಾಗಿದೆ. ಬ್ಯಾಂಕುಗಳ ಹಣಕಾಸಿನ ವ್ಯವಸ್ಥೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವದರಿಂದ ಬ್ಯಾಂಕುಗಳು ಈ ಯೋಜನೆಯನ್ನು ವಿರೋಧಿಸುತ್ತವೆ. ಹೀಗಿರುವಾಗ ನಿರ್ದಿಷ್ಟ ಸನ್ನಿವೇಶವನ್ನು ಪರಿಹರಿಸುವದಾದರೂ ಹೇಗೆ? ಸರಕಾರಗಳು ಬಡ್ಡಿ ಸಂದಾಯ ಮಾಡುವ ಮೂಲಕ ಸದರಿ ಪರಿಸ್ಥಿತಿಯನ್ನು ಪರಿಹರಿಸಬಹುದಾಗಿದೆ. ಬಡ್ಡಿ ಹಣವನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸಿ ಸಾಲದ ಮರುಪಾವತಿಯನ್ನು ಕಂತುಗಳಲ್ಲಿ ಮರುಪಾವತಿಸಲು ಅನುವು ಮಾಡಿಕೊಡಬಹುದಾಗಿದೆ, ಇದರಿಂದ ಸರಕಾರದ ಹೊರೆ ಕಡಿಮೆಯಾಗುತ್ತದೆ. ಇದಲ್ಲದೇ ಡಾ.ಮಹಾಜನ ಶೆಟ್ಟಿಯವರು ಸೂಚಿಸಿದಂತೆ ರೈತರ ಬೆಳೆಗಳು ವಿಫಲವಾದಾಗ ಮತ್ತು ಬೆಳೆಗಳಿಗೆ ಸರಿಯಾದ ಬೆಲೆ ದೊರಕದಿದ್ದಾಗ ಮಾನಸೂನ್ ಕಾರಣದಿಂದಾಗಿ ರೈತರಿಗೆ ನಷ್ಟಗಳು ಉಂಟಾದ ಸನ್ನಿವೇಶದಲ್ಲಿ ರೈತರ ಹಿತಾಶಕ್ತಿಯನ್ನು ಕಾಪಾಡುವದು ಅಗತ್ಯವಿದೆ. ಆದ್ದರಿಂದ ಸರಿಯಾಗಿ ಯೋಜನೆಗಳನ್ನು ಕೈಕೊಳ್ಳಬೇಕಾಗಿದೆ. ಕನಿಷ್ಠ ಬೆಂಬಲ ಬೆಲೆಯನ್ನು ಸ್ವಾಮಿನಾಥನ್ ಸಮಿತಿ ವರದಿಯಲ್ಲಿ ಶಿಫಾರಸ್ಸು ಮಾಡಿದಂತೆ ಶೇ.50 ರಷ್ಟು ವೆಚ್ಚವನ್ನು ಒದಗಿಸಬೇಕು. ಒಬ್ಬ ಸಾರ್ವಜನಿಕ ಹಣಕಾಸು ಅರ್ಥಶಾಸ್ತ್ರಜ್ಞನಾಗಿ ನಾನು ಕೊಡುವ ಸಲಹೆ ಏನೆಂದರೆ ರೈತರ ಆದಾಯವು ಸ್ಥಿರವಾಗಿರಲು ಪೂರಕವಾಗಿರುವಂತ ಯೋಜನೆಗಳನ್ನು ಸರಕಾರವು ಕೈಗೊಳ್ಳಬೇಕು. ಇವುಗಳ ಜೊತೆಗೆ ವಾಣಿಜ್ಯ ಬ್ಯಾಂಕುಗಳ ಸಾಲದ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುವ ಅಗತ್ಯತೆ ಇದೆ. ಇದರಿಂದಾಗಿ ಸಣ್ಣ ಮತ್ತು ಅಂಚಿನ ರೈತರ ಹೆಚ್ಚಿನ ಒಳಗೊಳ್ಳುವಿಕೆಗೆ ಕಾರಣವಾಗುತ್ತದೆ. ಇಲ್ಲಿಯವರೆಗೆ ಸಾಲಮನ್ನಾ ಯೋಜನೆಗಳು ದೊಡ್ಡ ಪ್ರಮಾಣದ ರೈತರಿಗೆ ಮಾತ್ರ ಅನುಕೂಲಕರವಾಗಿವೆ ಏಕೆಂದರೆ ಸಣ್ಣ ಮತ್ತು ಅಂಚಿನ ರೈತರು ಸಾಂಸ್ಥಿಕ ಹಣಕಾಸಿನ ಸಂಸ್ಥೆಯಿಂದ ದೂರ ಇರುವದೇ ಕಾರಣವಾಗಿದೆ. ಹೀಗಾಗಿ ಈ ಯೋಜನೆಯು ಎಲ್ಲರಿಗೂ ಅನಕೂಲವಾಗುವದಿಲ್ಲ. ಇದರೊಂದಿಗೆ ದೇಶದ ಎಲ್ಲ ಭಾಗಗಳಲ್ಲಿ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕು. ಹಾಗೂ ರಸಗೊಬ್ಬರಗಳು, ಬೀಜಗಳು ಇತರೆ ಅವಶ್ಯಕತೆಗಳನ್ನು ಪೂರೈಸಬೇಕು ಇದರಿಂದಾಗಿ ಕೃಷಿ ವೆಚ್ಚವು

ನಿಯಂತ್ರಣದಲ್ಲಿರುತ್ತದೆ. ಅದರಂತೆ ನೀರಾವರಿ ಯೋಜನೆಗಳಿಗೆ ಒದಗಿಸಿರುವಂತಹ ವಿದ್ಯುತ್ ಶುಲ್ಕವನ್ನು ಕಡಿತಗೊಳಿಸಬೇಕು ಇವುಗಳ ಮೂಲಕ ರೈತರ ಸಮಸ್ಯೆಗಳನ್ನು ಕೆಲಮಟ್ಟಿಗೆ ಪರಿಹರಿಬೇಕಾಗಿದೆ.

**ಪ್ರೊ. ಎಸ್.ಟಿ. ಬಾಗಲಕೋಟ,,** *ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ*

ಎಲ್ಲರಿಗೂ ನನ್ನ ನಮಸ್ಕಾರ. ಅಧ್ಯಕ್ಷರ ಸೂಚನೆಯ ಮೇರೆಗೆ ನಾನು ನೇರವಾಗಿ ವಿಷಯಕ್ಕೆ ಬರುತ್ತೇನೆ. ಈಗಾಗಲೇ ಕುಲಕರ್ಣಿಯವರು, ಮಹಾಜನಶೆಟ್ಟಿಯವರು ಮತ್ತು ದಾಢಿಭಾವಿಯವರು ಸಾಕಷ್ಟು ವಿಷಯಗಳ ಕುರಿತು ಮಾತನಾಡಿದ್ದಾರೆ. ಈಗ ರೈತರ ಪರಸ್ಥಿತಿಯ ಬಗ್ಗೆ ನಮಗೆಲ್ಲಾ ಗೊತ್ತು. ಹಲವಾರು ಸಮಿತಿಗಳು ಅದರಲ್ಲಿ 2007 ರಲ್ಲಿ ವೈದ್ಯನಾಥನ್ ಸಮಿತಿ ಇರಬಹುದು, ಅಥವಾ 2013 ರ ನ್ಯಾಶನಲ್ ಸ್ಯಾಂಪಲ್ ಸರ್ವೆ ಆರ್ಗನೈಸೇಶನ್ ಕೈಗೊಂಡ ಸರ್ವೇಕ್ಷಣ ಇರಬಹುದು ಸೆಂಟರ್ ಫಾರ್ ಸೊಸೈಟಿ ಆಫ್ ಡೆವಲಪಿಂಗ್ ಸ್ಟಡೀಸ್ ಅವರು ಮಾಡಿರುವ ಅಧ್ಯಯನವಿರಬಹುದು ಅಥವಾ ಇತ್ತೀಚಿಗೆ ಪ್ರಕಟಣೆಯಾದ ನಬಾರ್ಡದ ಆಲ್ ಇಂಡಿಯಾ ರೂರಲ್ ಫೈನಾನ್ಸ್ ಇನ್‌ಕ್ಲೂಸನ್ ಸರ್ವೇ ಇರಬಹುದು, ಎಲ್ಲಾ ಸರ್ವೇಗಳಲ್ಲಿ ಕಂಡುಬಂದತಹ ಮೂಲಭೂತವಾದ ಅಂಕಿಅಂಶಗಳ ಪ್ರಕಾರ ರೈತರ ಪರಸ್ಥಿತಿ ಸರಿಯಾಗಿಲ್ಲ. ಇಡೀ ಕೃಷಿ ವ್ಯವಸ್ಥೆ ನಿರ್ಲಕ್ಷವಹಿಸಲ್ಪಟ್ಟಿದೆ. ನಾನು ಎರಡು ವಿಷಯಗಳನ್ನು ಇಲ್ಲಿ ಸ್ಪಷ್ಟಪಡಿಸಲಿಚ್ಚಿಸುತ್ತೇನೆ, ಈ 2013 ರ ಎನ್.ಎಸ್.ಎಸ್.ಓ. ಸರ್ವೆ ಹೇಳುವ ಪ್ರಕಾರ ಶೇ40 ರಷ್ಟು ರೈತರಿಗೆ ಕೃಷಿ ಎಂದರೆ ಇಷ್ಟವಿಲ್ಲ. ಆಯ್ಕೆಗಳಲ್ಲಿ ಕೃಷಿ ಬಿಟ್ಟು ಉಳಿದವುಗಳನ್ನು ಆಯ್ಕೆ ಮಾಡುತ್ತಾರೆ. ಅಷ್ಟೆ ಅಲ್ಲ ಈ ಸೆಂಟರ್ ಫಾರ್ ಸ್ಟಡೀಸ್ ಮತ್ತು ಡೆವಲಪಿಂಗ್ ಸೋಸಾಯಿಟಿ (ಸಿ.ಎಸ್.ಡಿ.ಎಸ್.) ಮಾಡಿದ ಸರ್ವೆ ಪ್ರಕಾರ 2018 ರಲ್ಲಿ ಇದರ ಪ್ರಮಾಣ 76 ಕ್ಕೆ ಏರಿದೆ. ಅಂದರೆ 3/4 ರಷ್ಟು ರೈತರಿಗೆ ಕೃಷಿ ಮಾಡಲು ಮನಸ್ಸಿಲ್ಲ. ಅದಕ್ಕಿಂತ ಹೆಚ್ಚಾಗಿ ಶೇ80 ರಷ್ಟು ರೈತರು ತಮ್ಮ ಮಕ್ಕಳಿಗೆ ಕೃಷಿಯನ್ನು ಮಾಡಬೇಡಿರಿ ಎನ್ನುವ ಪರಿಸ್ಥಿತಿ ಬಂದಿದೆ. ಇದು ಏಕೆ ಎನ್ನುವದಕ್ಕೆ ನಬಾರ್ಡ ಅವರು 2017 ರಲ್ಲಿ ಮಾಡಿರುವ ಆಲ್ ಇಂಡಿಯಾ ರೂರಲ್ ಫೈನಾನ್ಸ್ ಇನ್‌ಕ್ಲೂಸನ್ ಸರ್ವೇಯ ಅಂಕಿಅಂಶಗಳ ಪ್ರಕಾರ ಈ ರೈತ ಕುಟುಂಬಗಳ ಆದಾಯ 2017 ರಲ್ಲಿ ಸುಮಾರು 8931 ರೂಪಾಯಿ ಇತ್ತು, ಆದರೆ ಅವರು ಮಾಡಿರುವ ಸಾಲದ ಪ್ರಮಾಣ 59053 ರೂಪಾಯಿಗಳು. ಅಂದರೆ ಅವರ ಆದಾಯಕ್ಕಿಂತ 61/2 ರಷ್ಟು ಹೆಚ್ಚು ಸಾಲವನ್ನು ಮಾಡಿದ್ದಾರೆ. ಅವರು ಸಾಲವನ್ನು ಏಕೆ ಮಾಡಿದ್ದಾರೆ ಎಂದು ಕೇಳಿದಾಗ, ಅಲ್ಲಿ ಹಲವಾರು ಉತ್ತರಗಳು ಕಂಡುಬಂದವು. ಹೂಡಿಕೆ ಇರಹಬಹುದು, ಕೃಷಿ ಸಂಬಂಧಿತ ಚಟುವಟಿಕೆಗಳಿರಬಹುದು, ಇವುಗಳನ್ನು ಬಿಟ್ಟರೆ ಶೇ50 ರಷ್ಟು ಕೃಷಿ ಸಂಬಂಧಿಸಿದಂತೆ ಸಾಲವನ್ನು ಮಾಡಿದರೆ ಉಳಿದ 50% ಸಾಲ ಬೇರೆ ಕಾರಣಗಳಿಗಾಗಿ ಮಾಡಿರುತ್ತಾರೆ. ಅವರ ದೈನಂದಿನ ಚಟುವಟಿಕೆಗಳ ಅವಶ್ಯಕತೆಗಳಿಗಿರಬಹುದು, ಮುಖ್ಯವಾಗಿ ಅವರ ಆರೋಗ್ಯ, ಶಿಕ್ಷಣ, ಮನೆ ರಿಪೇರಿ, ಮನೆ ಕಟ್ಟುವದು ಇಂತಹವುಗಳಿಗೆ ಸಾಲವನ್ನು ಪಡೆದಿರುವಂತಹ ಉದಾಹರಣೆಗಳಿವೆ. ಈ ವಿಷಯವನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ ನಾವು ಒಟ್ಟಾಗಿ ತೆಗೆದುಕೊಂಡಂತಹ ವಿಷಯ ರೈತರ ಸಾಲ ಮನ್ನಾ ಎಂದಾಗ ನಾವು ಕೃಷಿಗಾಗಿ ಮಾಡಿದ ಸಾಲವನ್ನು ಗಮನಿಸುತ್ತಿದ್ದೇವಾ ಅಥವಾ ಒಟ್ಟಾರ ಮಾಡಿರುವ ಸಾಲವನ್ನು ಗಮನಿಸುತ್ತಿದ್ದೇವಾ ? ಎನ್ನುವದು ಪ್ರಶ್ನೆ. ಏಕೆಂದರೆ ಈ ಒಟ್ಟಾರೆ ಸಾಲದಲ್ಲಿ ಕೃಷಿಯೇತರ ಸಾಲವು ಬೃಹತ್ ಪ್ರಮಾಣದಲ್ಲಿರುವದನ್ನು ನಾವು ಕಾಣಬಹುದು. ನಾವು ಒಟ್ಟಾರೆಯಾಗಿ ರೈತರ ಕಲ್ಯಾಣವನ್ನು ಗಮನಿಸಬೇಕಾಗುತ್ತದೆ. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಈ ಹಿಂದಿನ ರೈತರ ಸಾಲ ಮನ್ನಾ ನೀತಿಗಳೇನಿದ್ದವು ಅವುಗಳು ಸಂಪೂರ್ಣವಾಗಿ ರೈತರಿಗೆ ತಲುಪಿಲ್ಲ ಎನ್ನುವದನ್ನು ಹಲವಾರು ಸಮಿತಿಗಳು ಹಾಗು ಅಧ್ಯಯನಗಳು ಹೇಳುತ್ತವೆ. ಅಷ್ಟೇ ಅಲ್ಲ ಕಳೆದ ವರ್ಷ 2017 ರಲ್ಲಿ ರಾಜಸ್ಥಾನದಲ್ಲಿ ಸಾಲ ಮನ್ನಾ ಮಾಡಿದರು ಅದನ್ನು ಗಮನದಲ್ಲಿಟ್ಟುಕೊಂಡು ಇಬ್ಬರು ವ್ಯಕ್ತಿಗಳು ಒಂದು ಅಧ್ಯಯನವನ್ನು ಮಾಡುತ್ತಾರೆ. ಈ ಸಾಲ ಮನ್ನಾದ ಯೋಜನೆಯ ಪ್ರಯೋಜನ ಏನು ಎಂದು . ಅವರ ಪ್ರಕಾರ ಪ್ರತಿ ಒಂದು ರೂಪಾಯಿ ಸಾಲವನ್ನು ಮನ್ನಾ ಮಾಡಿದಾಗ ಒಟ್ಟಾರೆ ಪ್ರಯೋಜನ ಸಿಕ್ಕಿದ್ದು 0.8 ರಷ್ಟು ಮಾತ್ರ. ಅಂದರೆ ಸಾಲ ಮನ್ನಾ ಮಾಡಿದ ವೆಚ್ಚ ಮತ್ತು ಆದ ಪ್ರಯೋಜನ ನೋಡಿದಾಗ ಪ್ರಯೋಜನ ಕಡಿಮೆ ಹಾಗೂ ವೆಚ್ಚ ಜಾಸ್ತಿ ಎಂದು. ಅಂದರೆ ಮುಖ್ಯವಾಗಿ ಸಾಲ ಮನ್ನಾ ಮಾಡುವದರಿಂದ ನಿಜವಾಗಿಯೂ ರೈತರಿಗೆ ಉಪಯೋಗವಾಗುತ್ತದೆಯಾ? ಎನ್ನುವ ಪ್ರಶ್ನೆಯನ್ನು ಎತ್ತುತ್ತಾರೆ. ಮತ್ತು ಇದಕ್ಕೆ ಪರ್ಯಾಯ ಮಾರ್ಗಗಳು ಏನು ಎಂದು ಹೇಳಿದಾಗ ಅವರು ಎರಡು ವಿಷಯಗಳನ್ನು ಗಮನಿಸುತ್ತಾರೆ. ಒಂದು, ಇ-ಮಂಡಿಗಳನ್ನು ಸ್ಥಾಪಿಸುವದು, ಇನ್ನೊಂದು

ಶೈತ್ಯಾಗಾರ ನಿರ್ಮಿಸಿ ಅವುಗಳಿಂದ ರೈತರಿಗೆ ಉಪಯೋಗವಾಗುತ್ತದೆಯೋ ಹೇಗೆ ಎನ್ನುವದು. ಅದರ ವೆಚ್ಚವನ್ನು ನೋಡಿದಾಗ ಈ ಶೈತ್ಯಾಗಾರವನ್ನು ನಿರ್ಮಿಸಿ ಪರ್ಯಾಯ ಯೋಜನೆಗೆ ಅದರ ವೆಚ್ಚ ಪ್ರಯೋಜನ ಅನುಪಾತವನ್ನು ನೋಡಿದಾಗ ಪ್ರತಿ ಒಂದು ರೂಪಾಯಿ ಹೂಡಿಕೆಗೆ ಅಲ್ಲಿ ಸಿಗುವ ಪ್ರಯೋಜನ 16.5 ರೂಪಾಯಿಗಳು ಎಂದು ರಾಜಸ್ಥಾನದಲ್ಲಿ ಲೆಕ್ಕ ಹಾಕುತ್ತಾರೆ. ಅಂದರೆ ಪ್ರತಿ ಒಂದು ರೂಪಾಯಿಯ ಹೂಡಿಕೆಗೆ ಶೈತ್ಯಾಗಾರದಲ್ಲಿ ಸಿಗುವ ಲಾಭ 16.5. ಇನ್ನೊಂದು ಅವರು ಹೇಳುವದು ಒಟ್ಟಾರೆ ಮೂಲಸೌಕರ್ಯ ಅಂದರೆ ಅದು ರಸ್ತೆ ಇರಬಹುದು, ಸಂಶೋಧನೆ ಇರಬಹುದು ಹಾಗು ರೈತರಿಗೆ ಸಿಗಲಿರುವ ಮೂಲಭೂತ ಸೌಕರ್ಯಗಳಿರಬಹುದು, ಅಲ್ಲಿ ಪ್ರತಿ ಒಂದು ರೂಪಾಯಿ ಹೂಡಿಕೆಗೆ 65 ರೂಪಾಯಿಗಳಷ್ಟು ಪ್ರಯೋಜನವನ್ನು ಲೆಕ್ಕಾ ಹಾಕುತ್ತಾರೆ. ನಾನು ಇಲ್ಲಿ ಯಾವ ವಿಷಯವನ್ನು ಗಮನಕ್ಕೆತರಲು ಬಯಸುತ್ತೇನೆಂದರೆ, ಸಾಲ ಮನ್ನಾದಿಂದ ಆಗುವ ಪ್ರಯೋಜನೆ ವೆಚ್ಚಕ್ಕಿಂತ ಕಡಿಮೆ. ಅದೇ ಹಣವನ್ನು ನಾವು ಮೂಲಭೂತ ಸೌಕರ್ಯಕ್ಕೆ ಹಾಕಿದಾಗ ಮುಖ್ಯವಾಗಿ ಶೈತಾಗಾರಗಳನ್ನು ನಿರ್ಮಿಸಲು ಹಾಕಿದಾಗ ಬರುವಂತಹ ಪ್ರಯೋಜನ ಹೆಚ್ಚು ಎಂದು ಅವರು ಹೇಳುತ್ತಾರೆ. ಈ ವಿಷಯವನ್ನು ನಾನು ನಿಮ್ಮ ಮುಂದೆ ಏಕೆ ಹೇಳಲು ಇಚ್ಛೆ ಪಡುತ್ತೇನೆಂದರೆ, ಹಲವಾರು ಅಕಾಡಿಮಿಶಿಯನ್ಸ್ ಮಾಡಿರುವ ಅಧ್ಯಯನಗಳ ಮೂಲಕ ಅವರು ಹೇಳುವ ವಿಷಯ ಏನೆಂದರೆ ಇತ್ತಿತ್ತಲಾಗಿ ನಾವು ನಮ್ಮ ಸಾಂಸ್ಥಿಕ ಚೌಕಟ್ಟನ್ನು ಬಹಳ ಶಿಥಿಲಗೊಳಿಸುತ್ತಿದ್ದೇವೆ ಎಂದು. ಈ ಸಾಂಸ್ಥಿಕ ಚೌಕಟ್ಟು ಎಂದಾಗ ಅದು ಪತ್ತು ವ್ಯವಸ್ಥೆ ಇರಬಹುದು, ಸಾಲ ಕೊಡುವ ವ್ಯವಸ್ಥೆ ಇರಬಹುದು ಅಥವಾ ಮಾರುಕಟ್ಟೆ ವ್ಯವಸ್ಥೆ ಇರಬಹುದು, ಬೆಲೆ ನಿರ್ಮಾಣ ಮಾಡಿ ನಾವು ಒಳ್ಳೆಯ ಪ್ರತಿಫಲವನ್ನು ನೀಡುವ ವ್ಯವಸ್ಥೆ ಇರಬಹುದು. ಮಾರ್ಕೆಂಟಿಗ್ ಮತ್ತು ಬೆಲೆ ಸಂಸ್ಥೆಗಳು ಬಹಳ ಶಿದಿಲಗೊಳ್ಳುತ್ತಿವೆ, ಈ ಸಂಸ್ಥೆಗಳನ್ನು ನಾವು ಬಲಪಡಿಸಬೇಕು ಎನ್ನುವದು ವಿಷಯ. ಸಾಲ ಮನ್ನಾ ಮಾಡಬೇಕೊ ಅಥವಾ ಬೇಡವೋ ಎನ್ನುವ ಪ್ರಶ್ನೆ ಬಂದಾಗ, ನಮ್ಮ ಕೃಷಿಯು ಸುಮಾರು ಶೇ50 ರಷ್ಟು ಒಣ ಬೇಸಾಯ ಅಂದರೆ ಮಳೆಯ ಮೇಲೆ ಅವಲಂಬಿತವಾಗಿದೆ. ಸ್ವಾಭಾವಿಕವಾಗಿ ಇಲ್ಲಿ ಇಳುವರಿ ಇರಬಹುದು ಅಥವಾ ರೈತರ ಆದಾಯವಿರಬಹುದು ಹಲವಾರು ಇಳುವರಿಗಳಿಗೆ ಕಾರಣವಾಗಿವೆ. ಯಾವುದೋ ಒಂದು ಕಾರಣಕ್ಕಾಗಿ ಅಲ್ಲಿ ಬಂಪರ್ ಬೆಳೆ ಬಂದಾಗ ರೈತರಿಗೆ ಅದರ ಪ್ರಯೋಜನ ಸಿಗುವುದಿಲ್ಲ. ಬೆಲೆ ಕುಸಿಯುತ್ತದೆ. ಬೆಲೆ ಕುಸಿದಾಗ ರೈತರು ಹೆಚ್ಚುವರಿ ಬೆಳೆದ ಬೆಳೆಗೆ ಸಂತಸವಿರುವುದಿಲ್ಲ. ಅಂದರೆ ಬೆಲೆ ಕುಸಿತದಿಂದ ರೈತರಿಗೆ ಬರಬೇಕಾದ ಬೆಲೆ ಸಿಗುವುದಿಲ್ಲ. ಇಂತಹ ಸಂದರ್ಭಗಳಲ್ಲಿ ರೈತರು ಹಾನಿಗೊಳಗಾಗುವದೇ ಜಾಸ್ತಿ ಎನ್ನುವ ಪರಿಸ್ಥಿತಿಯನ್ನು ನಾವು ಗಮನಿಸುತ್ತಿದ್ದೇವೆ. ಅಂದರೆ ಇಂತಹ ಪರಿಸ್ಥಿತಿಗಳಲ್ಲಿ ರೈತರಿಗೆ ತಾತ್ಕಾಲಿಕವಾಗಿ ಅವರ ಬಿಕ್ಕಟ್ಟನ್ನು ಶಮನಗೊಳಿಸುವ ಕ್ರಮಗಳನ್ನು ಕೈಗೊಳ್ಳಬೇಕು. ಅದರಲ್ಲಿ ಮೊದಲನೆಯದು ಅಲ್ಪಾವಧಿ ಸಾಲವನ್ನು ಮಧ್ಯಾಮವಧಿ ಮತ್ತು ಧೀರ್ಘಾವಧಿ ಸಾಲವನ್ನಾಗಿ ಪರಿವರ್ತಿಸುವದು, ಎರಡನೆಯದು ಡಾ.ದಾಡಿಭಾವಿಯವರು ಹೇಳಿರುವ ಹಾಗೆ ಸಾಲದ ಬಡ್ಡಿಯನ್ನು ಮನ್ನಾ ಮಾಡುವದು ಮತ್ತು ಸಾಲ ಮನ್ನಾ ಮಾಡುವಂತಹದಿರಬಹುದು. ತಾತ್ಕಾಲಿಕವಾಗಿ ಬಿಕ್ಕಟ್ಟನ್ನು ಪರಿಹರಿಸುವದು ರೈತರಿಗೆ ಬೇಕೇ ಬೇಕು ಆದರೆ ಮೇಲಿಂದಮೇಲೆ ಮಾಡಲು ಸಾಧ್ಯವಿಲ್ಲ. ಈಗ ಸಾಕಷ್ಟು ಕೃಷಿಯೇತರ ವಲಯದಲ್ಲಿರುವವರು ಹೇಳುವಂತಹದೇನು ಎಂದರೆ ರೈತರಿಗೆ ಸಾಲ ಮನ್ನಾ ಎನ್ನುವದು ಚಟವಾಗಿಬಿಟ್ಟಿದೆ. ಆದರೆ ನಿಜವಾಗಿ ಹಾಗಲ್ಲ, ರೈತರಿಗೆ ಬಿಕ್ಕಟ್ಟು ಇರುವುದರಿಂದಲೇ ಅವರು ಅಪೇಕ್ಷಿಸುತ್ತಿದ್ದಾರೆ. ರೈತರನ್ನು ನಿರ್ಲಕ್ಷ ಮಾಡುತ್ತಿರುವುದರಿಂದ ಅವರು ಕೇಳುತ್ತಿದ್ದಾರೆ. ರೈತರಿಗೆ ಮಾಡುವ ಹೂಡಿಕೆ ಪ್ರಮಾಣ ಕಡಿಮೆಯಾಗಿರುವದರಿಂದ ಅವರು ಕೇಳುತ್ತಿದ್ದಾರೆ. ಈ ವ್ಯವಸ್ಥೆಗಳನ್ನೆಲ್ಲಾ ಗಮನಿಸಿದಾಗ ರೈತರಿಗೆ ಅಲ್ಪಾವಧಿಯಲ್ಲಿ ಸಾಲ ಮನ್ನಾ ಮಾಡುವದು ತುಂಬಾ ಅವಶ್ಯಕ, ಆದರೆ ಇದನ್ನು ಮಾಡುವಾಗ ಸರಿಯಾದ ಯೋಜನೆಯನ್ನು ಮಾಡುವದು ತುಂಬಾ ಅವಶ್ಯಕ. ಸಾಲ ಮನ್ನಾ ಮಾಡುವಾಗ ಯಾವ ರೈತರಿಗೆ ಮನ್ನಾ ಮಾಡಬೇಕು, ಎಷ್ಟರ ಮಟ್ಟಿಗೆ ಸಾಲ ಮನ್ನಾ ಮಾಡಬೇಕು, ಎಲ್ಲಾ ರೈತರಿಗೆ ಮಾಡಬೇಕಾ ಅಥವಾ ಕೆಲವು ರೈತರಿಗೆ ಮಾತ್ರ ಮಾಡಬೇಕಾ? ಯಾವ ಬೆಳೆಗಳಿಗೆ ಸಾಲ ಮನ್ನಾ ಮಾಡಬೇಕು? ಇಂತಹ ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಮತ್ತೆ ಯಾವ ಸಮಯಾವಧಿಯೊಳಗೆ ಆಗಬೇಕು ಎನ್ನುವದು. ಮತ್ತೆ ಡಾ. ಮಹಾಜನಶೆಟ್ಟಿಯವರು ಹೇಳಿದಂತೆ 2014 ರಲ್ಲಿ ಮಾಡಿದಂತಹ ಸಾಲ ಮನ್ನಾ ಪ್ರಯೋಜನೆಯನ್ನು 2018 ರ ವರೆಗೂ ಕೂಡಾ ಕೊಡುತ್ತಾ ಬಂದರು. ಹೀಗಾದಾಗ ಅದರ ಉದ್ದೇಶವೇ ವಿಫಲವಾಗುತ್ತದೆ. ಆದ್ದರಿಂದ ಎಷ್ಟು ಸಮಯಾವಧಿಯಲ್ಲಿ ಈ ಯೋಜನೆಯು ತಲುಪಬೇಕು ಎನ್ನುವದರ ಕುರಿತು ಒಂದು ಸರಿಯಾದ ಯೋಜನೆ ಮಾಡಬೇಕಾಗುತ್ತದೆ. ಸರಿಯಾದ ಯೋಜನೆ ಮಾಡಿದಾಗ ಅದರ ಲಾಭ ಸಿಗುತ್ತದೆ ಎನ್ನುವದು ಒಂದು ವಿಷಯ.

ಇನ್ನು ದೀರ್ಘಾವಧಿಯಲ್ಲಿ ಸಾಲ ಮನ್ನಾ ವಿಚಾರದಲ್ಲಿ ಸರ್ಕಾರ ರೈತರಿಗೆ ಮಾಡುವ ಹೂಡಿಕೆ ವಿಚಾರದಲ್ಲಿ ಹೆಚ್ಚಳಮಾಡಬೇಕು. ಇತ್ತಿತ್ತಲಾಗಿ 1990 ರ ನಂತರ ಸರ್ಕಾರದ ಹೂಡಿಕೆ ಪ್ರಮಾಣ ತುಂಬಾ ಕಡಿಮೆಯಾಗುತ್ತಿದೆ. ಮುಖ್ಯವಾಗಿ ಸರ್ಕಾರ ನೀರಾವರಿ ವಿಸ್ತರಣೆ ಇರಬಹುದು, ಸಂಶೋಧನೆ ಇರಬಹುದು, ವಿಸ್ತೀರ್ಣವಿರಬಹುದು, ಇತರೆ ಅಭಿವೃದ್ಧಿ ಕಾರ್ಯದಲ್ಲಿ ಹೂಡಿಕೆ ಕಡಿಮೆಯಾಗುತ್ತಿದೆ. ನಾವು ರಾಷ್ಟ್ರೀಯ ಆದಾಯವನ್ನು ಲೆಕ್ಕಾಚಾರ ಮಾಡಿದಾಗ ಕೃಷಿಯಲ್ಲಿ ಒಟ್ಟಾರೆ ಬಂಡವಾಳ ಸಂಚಯನ ಕಡಿಮೆಯಾಗುತ್ತಿದೆ. ಇದನ್ನು ಯಾವರೀತಿಯಲ್ಲಿ ಹೆಚ್ಚಳ ಮಾಡಬಹುದು ಎಂಬುದನ್ನು ವಿಚಾರ ಮಾಡಬೇಕು. ಹಾಗಾದಾಗ ರೈತರ ಇಳುವರಿ ದೀರ್ಘಾವಧಿಯಲ್ಲಿ ಹೆಚ್ಚಳವಾಗುವದು. ಆ ಸಂದರ್ಭದಲ್ಲಿ ಸಾಲ ಮನ್ನಾ ಮಾಡುವಂತೆ ಒತ್ತಾಯ ಬರುವ ಸಾಧ್ಯತೆಗೆಳು ಕಡಿಮೆಯಾಗುತ್ತವೆ. ರೈತರ ವೈದ್ಯಕೀಯ ವೆಚ್ಚ, ಮಕ್ಕಳ ಶಿಕ್ಷಣದ ವೆಚ್ಚ ಇರಬಹುದು ಅಥವಾ ತಮ್ಮ ಸುರಕ್ಷತೆಗೆ ಹೆಚ್ಚು ವೆಚ್ಚ ಮಾಡುತ್ತಿರಬಹುದು, ಇದು ಸರ್ಕಾರದ ಜವಾಬ್ದಾರಿ. ಅರ್ಥಶಾಸ್ತ್ರದಲ್ಲಿ ಇದನ್ನು ನಾವು ಪಬ್ಲಿಕ್ ಗೂಡ್ಸ್ ಎಂದು ಕರೆಯುತ್ತೇವೆ. ಅದ್ದರಿಂದ ಸರ್ಕಾರ ಇಂತಹ ಸಾರ್ವಜನಿಕ ಸರಕುಗಳನ್ನು ಮಾಡಲು ಹೆಚ್ಚು ಹೆಚ್ಚು ಹಣವನ್ನು ವ್ಯಯಮಾಡಬೇಕು. ಅದು ಆರೋಗ್ಯ ವ್ಯವಸ್ಥೆ ಇರಬಹುದು, ಶಿಕ್ಷಣ ವ್ಯವಸ್ಥೆ ಇರಬಹುದು ಮತ್ತು ಸಾಮಾಜಿಕ ಸುರಕ್ಷತೆ ಇರಬಹುದು ಇದನ್ನು ಸರ್ಕಾರ ಮಾಡಿದಾಗ ರೈತರಿರಬಹುದು ಹಾಗೂ ಸಮಾನ್ಯ ಬಡಜನರಿರಬಹುದು ಆಗ ಅವರು ಇವುಗಳ ಮೇಲೆ ಖರ್ಚು ಮಾಡುವ ವ್ಯವಧಾನ ಕಡಿಮೆಯಾಗಿ ತಮಗೆ ದೊರಿಕಿದಂತಹ ಆದಾಯವನ್ನು ಸಂಪೂರ್ಣವಾಗಿ ಅನುಭವಿಸಲು ಅನುಕೂಲವಾಗುತ್ತದೆ. ಈಗ ಮುಖ್ಯವಾಗಿ ನಾವು ಈ ಮೂಲಭೂತ ಸೌಕರ್ಯವೆಂದಾಗ, ನಾವು ರೈತರಿಗೆ ಸರಿಯಾದಂತಹ ಸೌಲಭ್ಯವನ್ನು ಕೊಡುತ್ತಿಲ್ಲ. ಉದಾಹರಣೆಗೆ, ವಿದ್ಯುಚ್ಛಕ್ತಿಯನ್ನು ಗಮನಿಸೋಣ, ವಿದ್ಯುಚ್ಛಕ್ತಿಯನ್ನು ರೈತರಿಗೆ ನಾವು ಎಷ್ಟು ಸಮಯ ಕೊಡುತ್ತೇವೆ? 5 ರಿಂದ 6 ಘಂಟೆಗಳ ಕಾಲ ಕೊಡುತ್ತೇವೆ ಅದರಲ್ಲಿಯೂ ಎರೆಡು ಫೇಸ್ ಮತ್ತು ಸಿಂಗಲ್ ಫೇಸ್ ಎಂದಾಗ ರೈತರಿಗೆ ನೀರಾವರಿ ಸರಿಯಾಗಿ ಮಾಡಲಾಗುವುದಿಲ್ಲ. ಮೊನ್ನೆ ಹೀಗೆ ನಾನು ಒಬ್ಬ ರೈತ ಮಿತ್ರರನ್ನು ಭೇಟಿಯಾದಗ, ಅವರು ಹೇಳಿದರು ಸುಮಾರು 20 ಎಕರೆ ಕಬ್ಬಿನ ಹೊಲವಿದೆ, ಅವರು ಪ್ರತಿ ವರ್ಷ ಬೇಸಿಗೆಯಲ್ಲಿ ಸುಮಾರು 2ಲಕ್ಷದ 50 ಸಾವಿರ ರೂಪಾಯಿಗಳನ್ನು ಡಿಸೆಲ್‌ಗೆ ಖರ್ಚು ಮಾಡುತ್ತಾರೆ. ಇದರ ಬದಲಾಗಿ ಸರ್ಕಾರ ವಿದ್ಯುಚ್ಛಕ್ತಿಯನ್ನು ಒದಗಿಸಿದಲ್ಲಿ ಅಷ್ಟು ಪ್ರಮಾಣದ ಹಣವನ್ನು ಉಳಿಸಬಹುದಾಗಿತ್ತು. ವಿದ್ಯುಚ್ಛಕ್ತಿಯನ್ನು ಸರ್ಕಾರ ಒದಗಿಸುವದು ಹೊರೆಯೇ, ಆದರೆ ಅದನ್ನೆ ಕಡಿಮೆ ವೆಚ್ಚದಲ್ಲಿ ಸರ್ಕಾರ ಪೂರೈಕೆ ಮಾಡಿದರೆ ಸಾಕಷ್ಟು ಹಣ ಉಳಿತಾಯವಾಗುತ್ತದೆ. ನಾವು ಬೈಲಹೊಂಗಲ್ ಕಡೆಯವರು, ಈ ಭಾಗದಲ್ಲಿ ಬಟಾಣೆಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ಈ ಬಟಾಣೆಯ ಬೆಲೆಯು ಎಷ್ಟು ತೀವ್ರಗತಿಯಲ್ಲಿ ಏರುಪೇರಾಗುತ್ತದೆಯೆಂದರೆ, ಇವತ್ತು 10 ಕಿ.ಗ್ರಾಂ ಗೆ ಸುಮಾರು 130 ರೂಪಾಯಿಗಳಿದ್ದದ್ದು, ನಾಳೆಗೆ ಅದು 115 ಕ್ಕೆ ಇಳಿಯುತ್ತದೆ, ಮಾರನೆಯ ದಿನ ಅದು 95ಕ್ಕೆ ಇಳಿಯುತ್ತದೆ. ಹೀಗೆ ರೈತರಿಗೆ ಸಿಗವ ಬೆಲೆಯಲ್ಲಿ ಏರಿಳಿತವಾಗುವದನ್ನು ನಾವು ಗಮನಿಸಿಬಹುದು. ಇವೆಲ್ಲ ಸಮಸ್ಯೆಗಳನ್ನು ನಿಭಾಯಿಸಲು ಸರ್ಕಾರವು ಒಟ್ಟಾರೆ ಮೂಲಭೂತ ಸೌಕರ್ಯದಲ್ಲಿ ಹೂಡಿಕೆ ಮಾಡಬೇಕು. ಆಗ ಮಾತ್ರ ಇದು ಉಪಯೋಗವಾಗುತ್ತದೆ. ಇನ್ನೊಂದು ವಿಷಯವನ್ನು ಗಮನಿಸುವದೆಂದರೆ ಮೇಲಿಂದ ಮೇಲೆ ಸಾಲವನ್ನುಮನ್ನಾ ಮಾಡುವದರಿಂದ ದೇಶದ ಹಣಕಾಸಿನ ವ್ಯವಸ್ಥೆಯ ಮೇಲೆ ವ್ಯತರಿಕ್ತವಾದ ಪರಿಣಾಮವಾಗುತ್ತದೆ. ಇದಕ್ಕೆ ಕೃಷಿ ಒಂದೇ ಕಾರಣವಲ್ಲ. ಕೃಷಿಯೇತರ ವಲಯದಲ್ಲಿ ಅದು ವ್ಯಾಪಾರಿಗಳಿರಬಹುದು ಅಥವಾ ಬೇರೆ ಬೇರೆ ಸಾಲಗಾರಗಿರಬಹುದು ಅವರು ಸಹ ಸಾಲವನ್ನು ವಾಪಸ್ಸು ಕೊಟ್ಟಿಲ್ಲ. ಇದನ್ನು ನಾವು ಗಮನದಲ್ಲಿಟ್ಟುಕೊಂಡು, ಕೃಷಿಯು ನಮ್ಮ ದೈನಂದಿನ ಆಹಾರ ಬದ್ದತೆಯನ್ನು ಪೂರೈಸುವದರಿಂದ ನಮಗೆ ಹಲವಾರು ವಿವಿಧ ಸೌಲಭ್ಯಗಳನ್ನು ಕೊಡುತ್ತಿರುವದರಿಂದ ನಾವು ರೈತರ ಸಮಸ್ಯೆಗಳನ್ನು ಅಲ್ಪಾವಧಿಯಲ್ಲಿ ಪರಿಹರಿಸಲು ಸಾಲ ಮನ್ನಾ ಮಾಡಬೇಕು ಆದರೆ ಸರಿಯಾದಂತಹ ಯೋಜನೆ ಬರಬೇಕು. ಎರಡನೆಯದು ದೀರ್ಘಾವದಿಯಲ್ಲಿ ಅವರ ಇಳುವರಿ ಹೆಚ್ಚಾಗಿ ಅವರ ಆದಾಯ ಹೆಚ್ಚಳಕ್ಕೆ ನಾವು ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವ ವಿಚಾರವನ್ನು ಹೇಳುತ್ತೇನೆ. ಸಾಲ ಮನ್ನಾ ಅಲ್ಪಾವಧಿಗೆ ಮಾತ್ರ. ದೀರ್ಘಾವಧಿಯಲ್ಲಿ ಒಟ್ಟಾರೆಯಾಗಿ ನಾವು ಮೂಲಭೂತ ಸೌಕರ್ಯಗಳನ್ನು ಒದಗಿಸುವದರ ಮೂಲಕ ರೈತರ ಆದಾಯವನ್ನು ಹೆಚ್ಚಿಸಿ ಅವರ ಬದುಕನ್ನು ನಿರಾಳವಾಗಿಸೋಣ ಎಂದು ಹೇಳಿ ವಂದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

**ಪ್ರೊ. ಬಿ.ಎಚ್. ನಾಗೂರ,** *ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ*

ಮಾನ್ಯ ಅಧ್ಯಕ್ಷರ ಸಲಹೆಯ ಮೇರೆಗೆ ನಾನು ನೇರವಾಗಿ ವಿಷಯಕ್ಕೆ ಬರುತ್ತೇನೆ. ಈಗಾಗಲೆ ನಮ್ಮ ಹಲವು ಪರಿಣಿತರು ಸಾಕಷ್ಟು ವಿಷಯಗಳನ್ನು ಸಮಗ್ರವಾಗಿ ಚರ್ಚಿಸಿದ್ದಾರೆ. ಈ ಎಲ್ಲಾ ಸಮಸ್ಯೆಗಳಿಗೆ ಮೂಲ ಕಾರಣ ನಮ್ಮ ಕೃಷಿ ಸರಿಯಾಗಿ ಬೆಳವಣಿಗೆ ಆಗುತ್ತಿಲ್ಲ. 1991 ರಿಂದ ಇತ್ತೀಚಿಗೆ ನೋಡಿದರೆ, 1991 ರಲ್ಲಿ ಆರ್ಥಿಕ ಉದಾರೀಕರಣವನ್ನು ಏನು ಸರ್ಕಾರವು ಅಳವಡಿಸಿಕೊಂಡಿತೊ ಇದರಿಂದ ನಾವು ಬಹಳಷ್ಟು ನಿರೀಕ್ಷೆ ಮಾಡಿದ್ದೆವು, ದೇಶದ ಒಳ್ಳೊಳ್ಳೆ ಆರ್ಥಿಕ ತಜ್ಞರು ಹೇಳಿದ್ದರು, ಆರ್ಥಿಕ ಉದಾರೀಕರಣವು ಹೇಗೆ ಚೀನಾ ದೇಶದಲ್ಲಿ ಕೃಷಿಗೆ ಒಂದು ಲಾಭವು ತಂದುಕೊಟ್ಟಿತ್ತು, ಅದೇ ರೀತಿಯಲ್ಲಿ ಭಾರತ ದೇಶದಲ್ಲಿಯೂ ಕೂಡ ನಮ್ಮ ಕೃಷಿಗೆ ಮತ್ತು ಕೃಷಿ ಉತ್ಪನ್ನಕ್ಕೆ ಹೆಚ್ಚಿನ ಲಾಭವು ಬರಬಹುದೆಂಬ ಭರವಸೆ ಇದೆ ಎಂದು ಹೇಳಿದ್ದರು. ಇದರಿಂದ ರೈತರು ಹೆಚ್ಚು ಉತ್ಸಾಹಗೊಂಡು ಹೆಚ್ಚೆಚ್ಚು ಕೃಷಿಯಲ್ಲಿ ತೊಡಗಿಕೊಂಡು ಹೆಚ್ಚೆಚ್ಚು ಬೆಳೆಯನ್ನು ಬೆಳೆಯುತ್ತಾರೆ ಎಂದು ತಿಳಿದುಕೊಂಡಿದ್ದೆವು. ಇದರಿಂದ ನಮ್ಮ ಬೆಳೆಗಳನ್ನು ಬೇರೆ ಬೇರೆ ರಾಷ್ಟ್ರಗಳಿಗೆ ರಫ್ತು ಮಾಡಬಹುದು ಎಂದು 1991 ರಿಂದ 1995 ರ ಅವಧಿಯಲ್ಲಿ ತಿಳಿದುಕೊಂಡಿದ್ದರು. ಆದರೆ ಇದು ಇಲ್ಲಿ ಆಗಲಿಲ್ಲ. ಚೀನಾದಲ್ಲಿ ಈ ಪ್ರಕ್ರಿಯೆ ಚೆನ್ನಾಗಿ ಆಗಿದೆ. ನಾನು ಚೀನಾದ ಕೃಷಿಯ ಅಭಿವೃದ್ಧಿ ಗಮನಿಸುತ್ತಿದ್ದೆ. ಚೀನಾದವರು ಆರ್ಥಿಕ ಸುಧಾರಣೆಯನ್ನು 1970ರಲ್ಲಿ ಜಾರಿಗೆ ತಂದರು. 1971 ರಲ್ಲಿ ಚೀನಾ ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನದಲ್ಲಿ ಕೃಷಿ ಉತ್ಪನ್ನವು ಶೇ30 ರಷ್ಟಿತ್ತು. ಅದು ಮುಂದೆ ಶೇ35 ರವರೆಗೆ ಆಯಿತು. ಪ್ರಾರಂಭದ 7-8 ವರ್ಷಗಳಲ್ಲಿ ಹೆಚ್ಚಾಯಿತು. ಮುಂದೆ ಅವರು ದೊಡ್ಡ ಪ್ರಮಾಣದಲ್ಲಿ ಕೈಗಾರಿಕೆಗೆ ಹೆಚ್ಚು ಒತ್ತನ್ನು ಕೊಟ್ಟರು. ಆದರೆ ಈಗಲೂ ಸಹಿತ ಕೃಷಿ ಉತ್ಪನ್ನವು ಶೇ10 ರಷ್ಟಿದೆ. ಚೀನಾದ ಒಟ್ಟು ಜಿಡಿಪಿಯು 12 ಟ್ರಲಿಯನ್ ಡಾಲರ್ಸ್‌ಗಳಿವೆ. ಅಂದರೆ ನಮ್ಮ ದೇಶದ ನಾಲ್ಕುಪಟ್ಟು ಹೆಚ್ಚು ಇದೆ. 12 ಟ್ರಿಲಯನ್ ಡಾಲರ್ಸ್ ನ ಶೇ10 ರಷ್ಟು ಕೃಷಿಇದೆ ಅಂದರೆ ಅದು ಜಾಸ್ತಿಯೇ. ಏಕೆಂದರೆ ಅಲ್ಲಿ ಕೃಷಿಕರು ಕಡಿಮೆಯಿದ್ದಾರೆ. ಆದರೆ ನಮ್ಮ ದೇಶದಲ್ಲಿ ಇದು ಸಾಧ್ಯವಾಗುತ್ತಿಲ್ಲ. ಏಕೆಂದರೆ ಆರ್ಥಿಕ ಸುಧಾರಣೆಯು ನಮ್ಮಲ್ಲಿ ಆ ರೀತಿಯ ಬದಲಾವಣೆಯನ್ನು ತರಲಿಲ್ಲ. 1991 ರ ಅಂಕಿಅಂಶಗಳನ್ನು ನೋಡಿದರೆ ಕೃಷಿಯ ಬೆಳವಣಿಗೆ ದರ ಶೇಕಡಾ 2.5 ರಷ್ಟಿದೆ, ಆದರೆ ಒಟ್ಟಾರೆ ಬೆಳವಣಿಗೆಯ ದರ ಶೇಕಡಾ 7ಕ್ಕಿಂತ ಹೆಚ್ಚಿದೆ. ಈ ಎರಡರ ನಡುವಿನ ಅಂತರ ಶೇಕಡಾ4.5 ರಷ್ಟಿದೆ. ಅದನ್ನೆ 1981 ರಿಂದ 1990ರ ಒಳಗೆ ನೋಡಿದರೆ ಕೃಷಿ ದರ ಶೇಕಡಾ 2.9 ರಷ್ಟು ಪ್ರತಿ ವರ್ಷ ಇದೆ. 1991 ಕ್ಕಿಂತ ಹಿಂದೆ ಜಾಸ್ತಿ ಇತ್ತು. ಅವಾಗ ನಮ್ಮ ಒಟ್ಟಾರೆ ಬೆಳವಣಿಗೆ ದರ ಶೇಕಡಾ 4.7 ಇತ್ತು, ಅಂತರ ಶೇಕಡಾ 1.8 ಇತ್ತು. ಈ ಒಂದು ಅಂತರ ಜಾಸ್ತಿ ಆಗುತ್ತಿರುವುದರಿಂದ, ಈಗಾಗಲೇ ಪ್ರಾರಂಭದಲ್ಲಿ ಡಾ. ಕುಲಕರ್ಣಿಯವರು ಹೇಳಿದಂತೆ ರಾಷ್ಟ್ರೀಯ ಉತ್ಪನ್ನದ ಒಟ್ಟು ಶೇರಿನಲ್ಲಿ ಕೃಷಿಯ ಶೇರು ಗಣನೀಯವಾಗಿ ಕಡಿಮೆಯಾಗುತ್ತ ಬಂದಿದೆ. ಪ್ರಾರಂಭದಲ್ಲಿಯೇ ಗಣನೀಯವಾಗಿ ಕಡಿಮೆಯಾಗುತ್ತಾ ಬಂದಿದೆ, 1980 ರಿಂದ 1990 ರ ನಡುವೆ ಶೇಕಡಾ 29.3 ಇದ್ದದ್ದು, 1990 -2000 ವೇಳೆಯಲ್ಲಿ ಅದು ಶೇಕಡಾ 19 ಕ್ಕೆ ಕಡಿಮೆಯಾಯಿತು. ಈಗ ಅದು ಶೇಕಡಾ 11 ಕ್ಕೆ ಇಳಿದಿದೆ. ಆದರೆ ಡಾ. ಬಾಗಲಕೋಟಿಯವರು ಹೇಳಿದಂತೆ ಕೃಷಿ ಕ್ಷೇತ್ರಕ್ಕೆ ಸರ್ಕಾರದ ಹೂಡಿಕೆಯು ಗಣನೀಯವಾಗಿ ಕಡಿಮೆಯಾಗುತ್ತಾ ಬಂದಿದೆ. 1990- 2000ರ ಬೆಲೆಗಳಲ್ಲಿ ನೋಡಿದಾಗ ಅದು ಹೆಚ್ಚುಕಡಿಮೆ ನಿಂತುಹೋಗಿದೆ. 2006-07ರಲ್ಲಿ ರೂ. 22987 ಕೋಟಿ ಕೃಷಿ ಕ್ಷೇತ್ರಕ್ಕೆ ಇತ್ತು. 2013-14 ರಲ್ಲಿ ಇದು 500 ಕೋಟಿಗಳಿಗೆ ಏರಿ ಅದು 23487 ಕೋಟಿಯಷ್ಟು ಸಾರ್ವಜನಿಕ ಹೂಡಿಕೆಯಾಗಿದೆ. ಈಗ ನಾವು ನೀರಾವರಿಯನ್ನು ನೋಡಿದಾಗ ಆಶ್ಚರ್ಯಕರ ರೀತಿಯಲ್ಲಿ ನೀರಾವರಿಯಿಂದ ಆಗುವ ಲಾಭಗಳು ಕಡಿಮೆಯಾಗುತ್ತಿವೆ. ಆವಾಗ ನೀರಾವರಿಯ ಅಭಿವೃದ್ಧಿ ಧರ 1981-1990 ರಲ್ಲಿ ಪ್ರತಿವರ್ಷ ಶೇಕಡಾ 2 ರಷ್ಟು ಜಾಸ್ತಿಯಾಗುತ್ತಾ ಹೋಯಿತು. ಆದರೆ 1991 ರಿಂದ ಇತ್ತೀಚಿಗೆ ನೋಡಿದಾಗ ಅಂದರೆ 2010 ರ ವರೆಗಿನ ನೀರಾವರಿ ಬೆಳಾವಣಿಗೆಯ ದರ ಕೇವಲ ಶೇಕಡಾ 1.4 ಇದೆ. 2011-14 ರಲ್ಲಿ ನೋಡಿದರೆ ನೀರಾವರಿ ವಿಸ್ತರಣೆಯ ಬೆಳವಣಿಗೆಯ ದರ ವಾರ್ಷಿಕವಾಗಿ ಶೇಕಡಾ 0.66 ರಷ್ಟು ಇದೆ. ಈಗ ಆಹಾರ ಧಾನ್ಯಗಳ ಬೆಳೆಗಳನ್ನು ನೋಡಿದರೆ 1980-90ರ ಬೆಳವಣಿಗೆಯ ದರವನ್ನು ನೋಡಿದರೆ ಶೇಕಡ 2.8 ರಷ್ಟಿತ್ತು, 1991 ರಿಂದ ಇತ್ತೀಚಿಗಿನ ಬೆಳವಣಿಗೆಯ ದರ ನೋಡಿದರೆ ಶೇಕಡಾ 1.5 ರಷ್ಟಿದೆ. ನೀರಾವರಿಯಿಂದಾಗುವ ಲಾಭವನ್ನು ನೋಡಿದರೆ 1981ರಿಂದ 90 ರ ವರೆಗೆ ಜಾಸ್ತಿ ಇತ್ತು, ಈ ಸಾಲಿನಲ್ಲಿ ನೀರಾವರಿಯ ಉತ್ಪಾದಕತೆಯು ವಾರ್ಷಿಕವಾಗಿ ಶೇ 0.70 ಇತ್ತು. 1991 ರ ನಂತರ ಇದು ಋಣಾತ್ಮಕವಾಗಿ ಬೆಳವಣಿಗೆಯಾಗಲ್ಪಟ್ಟಿತು. ನೀರಾವರಿ ಪ್ರದೇಶವಿದ್ದಲ್ಲಿ

ಉತ್ಪಾದಕತೆಯು ಕಡಿಮೆಯಾಗುತ್ತಿದೆ. 1981 ರಲ್ಲಿ ಒಟ್ಟು ಜಿಡಿಪಿಯಲ್ಲಿ ನೀರಾವರಿಯ ಮೇಲೆ ಮಾಡುವ ಖರ್ಚು ಎಂದರೆ ಶೇ 1.4, ಈಗ ಅದು ಶೇ 0.6 ರಷ್ಟಾಗಿದೆ. ಒಟ್ಟು ಬ್ಯಾಂಕುಗಳ ಗ್ರಾಮೀಣ ಶಾಖೆಗಳು 1975 ರಲ್ಲಿ ಶೇಕಡಾ 36.3 ರಷ್ಟಿದ್ದವು, 1990 ರಲ್ಲಿ ಶೇಕಡಾ 59% ರಷ್ಟಾಯಿತು, ಮತ್ತು 2014 ರಲ್ಲಿ ಇದು 38% ಇಳಿದಿದೆ, ಈಗ ಇದು ಶೇಕಡಾ 36 ಇದೆ. ಅದೇ ರೀತಿ ಕೃಷಿ ಮತ್ತು ಸಂಶೋಧನೆಯಲ್ಲಿ ಸಾರ್ವಜನಿಕ ವೆಚ್ಚ. ಕೃಷಿ ಕ್ಷೇತ್ರ ಯಶಸ್ಸಾಗಲು ಕೃಷಿಯಲ್ಲಿರುವ ಸಂಶೋಧನೆಯು ಕಾರಣವಾಗಿದೆ. ಕೃಷಿ ಸಂಶೋಧನೆಯಲ್ಲಿ ಖರ್ಚನ್ನು ಮಾಡುವದೂ ಕೂಡ ಇತ್ತೀಚಿಕೆ ಕಡಿಮೆಯಾಗುತ್ತಿದೆ. ಶಿಕ್ಷಣ ಮತ್ತು ಸಂಶೋಧನೆಯ ಮೇಲೆ ಮಾಡುತ್ತಿರುವ ಖರ್ಚು 1980-82ರಲ್ಲಿ ಒಟ್ಟು ಜಿಡಿಪಿಯ ಶೇ 0.39. ಈಗ ಅದು ಕಡಿಮೆಯಾಗಿದೆ. ಈಗ ಅದು ಜಿಡಿಪಿಯ ಶೇ0.32 ಆಗಿದೆ. ಈಗ ಕೃಷಿ ವಿಸ್ತರಣೆಯ ಸೇವೆಯ ಮೇಲಿನ ಖರ್ಚು ಕೂಡ ಕಡಿಮೆಯಾಗುತ್ತಿದೆ. ಅದು 1982 ರಲ್ಲಿ ನಮ್ಮ ಒಟ್ಟು ಜಿಡಿಪಿಯ ಶೇ.0.11 ರಷ್ಟು ಖರ್ಚು ಮಾಡುತ್ತಿದ್ದರು ಈಗ ಅದು ನಮ್ಮ ಒಟ್ಟು ಜಿಡಿಪಿಯ ಶೇ0.05ರಷ್ಟಾಗಿದೆ. ನಮ್ಮ ಸರಾಸರಿ ಭೂ ಹಿಡುವಳಿ ಬಹಳ ಕಡಿಮೆ ಇದೆ. ಇದೇ ರೀತಿ ನಮ್ಮ ಕರ್ನಾಟಕದಲ್ಲಿ ಕೃಷಿಯಲ್ಲಿ ನೋಡಬಹುದು, ಕರ್ನಾಟಕದಲ್ಲಿ ಕೃಷಿದರದಲ್ಲಿ ಸಾಕಷ್ಟು ಏರಿಳಿತವಾಗಿದೆ. ಕೆಲವೊಮ್ಮೆ ಶೇ10 ರಷ್ಟು ಬೆಳವಣಿಗೆಯಾದರೆ ಕೆಲವೊಮ್ಮೆ ಋಣಾತ್ಮಕವಾಗಿ ಬಂದಿದೆ. ಈ ರೀತಿಯಾದ ದೊಡ್ಡಮಟ್ಟದ ಏರಿಳಿತದಿಂದ ತೊಂದರೆಗಳು ಆಗಿವೆ. ಕರ್ನಾಟಕದಲ್ಲಿ ನೀರಾವರಿ ಪ್ರದೇಶವು ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇದೆ. ನಮ್ಮಲ್ಲಿ ಶೇ 34 ರಷ್ಟು ಇದ್ದರೆ ರಾಷ್ಟ್ರೀಯ ಮಟ್ಟದಲ್ಲಿ ಶೇ 46 ಇದೆ. ಡಾ. ಕುಲಕರ್ಣಿಯವರು ಹೇಳಿದಂತೆ ನಮ್ಮಲ್ಲಿ ಶೇ 75 ಕೃಷಿಕರು 2 ಹೆಕ್ಟರಗಿಂತ ಕಡಿಮೆ ಭೂ ಹಿಡುವಳಿಯನ್ನು ಹೊಂದಿದ್ದಾರೆ. ಇನ್ನೊಂದು ಆಶ್ಚರ್ಯಕರ ಸಂಗತಿ ಎಂದರೆ ಕರ್ನಾಟಕದಲ್ಲಿ 2011 ರ ಸೆನ್ಸಸ್ ಪ್ರಕಾರ ಕೃಷಿಕರ ಸಂಖ್ಯೆ ಹಾಗೂ ಕೃಷಿ ಕಾರ್ಮಿಕರ ಸಂಖ್ಯೆ ಕಡಿಮೆಯಾಗುತ್ತಿದೆ ಮತ್ತು ಸಣ್ಣ ಪ್ರಮಾಣದ ಗುಡಿಕೈಗಾರಿಕೆಗಳು ಸಹ ಸಾಕಷ್ಟು ಪ್ರಮಾಣದಲ್ಲಿ ಕಡಿಮೆಯಾಗುತ್ತಿವೆ. ಕರ್ನಾಟಕದಲ್ಲಿಯ ಕಳೆದ 15 ವರ್ಷಗಳ ಕೃಷಿ ಬೆಳವಣಿಗೆಯನ್ನು ನೋಡಿದರೆ ಆಹಾರಧ್ಯಾನಗಳ ಬೆಳವಣಿಗೆ ಶೇ3.4 ರಷ್ಟಿದೆ, ಎಣ್ಣೆ ಬೀಜಗಳು ಶೇ.0.14 ರಷ್ಟಿದೆ. ಕಬ್ಬಿನ ಬೆಳೆಯು ಸಹ ಹೆಚ್ಚುಕಡಿಮೆ ನಿಶ್ಚಲವಾಗಿದೆ. ಈ ಎಲ್ಲಾ ಬೆಳವಣಿಗೆಯಿಂದ ನಮ್ಮ ಹಿಂದಿನ ಪರಿಣಿತರು ಹೇಳಿದಂತೆ ಇತ್ತೀಚಿನ ವರ್ಷಗಳಲ್ಲಿಯ ನಮ್ಮ ರೈತರ ಸಾಲ ಮನ್ನಾ ಯೋಜನೆಯನ್ನು ನೋಡಿದರೆ ಇದು ರೂ. 1.80 ಲಕ್ಷ ಕೋಟಿಗಳು. ಅಂದರೆ ನಮ್ಮ ದೇಶದ ಜಿಡಿಪಿಯ ಶೇ 1.1. ಕರ್ನಾಟಕದಲ್ಲಿಯೂ ಕೂಡ ಆಯವ್ಯಯದಲ್ಲಿ ರೂ.34 ಸಾವಿರ ಕೋಟಿಯಂತ ಇತ್ತು, ಆನಂತರ ರೂ. 43 ಸಾವಿರ ಕೋಟಿಯೆಂದು ಹೇಳಿದರು. ಇನ್ನೂ ಸರಿಯಾಗಿ ಅಂದಾಜು ಆಗುತ್ತಿಲ್ಲ. ಪ್ರೊ.ದಾಡಿಭಾವಿಯವರು ಹೇಳಿದಹಾಗೆ ರೂ. 53 ಸಾವಿರ ಕೋಟಿಯಷ್ಟು ಎಂದು. ಈಗ ರೈತರ ಸಾಲ ಮನ್ನಾ ರೂ.53 ಸಾವಿರ ಕೋಟಿಯಷ್ಟು ಎಂದರೆ ಅದು ನಮ್ಮ ರಾಜ್ಯದ ಒಟ್ಟು ಜಿಎಸ್‌ಟಿಪಿಯ ಶೇ 3.5 ಆಗುತ್ತದೆ. ಮುಖ್ಯಮಂತ್ರಿಗಳು ಈ ಆಯವ್ಯಯದಲ್ಲಿ ಮಂಡಿಸಿದರೆ ಅದು ಮುಂದೆ 5 ವರ್ಷಗಳ ಕಾಲ ಆಗುತ್ತದೆ. ಈ ವರ್ಷ ಇದು ರೂ. 6400 ಕೋಟಿಗಳು, ಉಳಿದ ಮೊತ್ತ ಮುಂದಿನ 4 ವರ್ಷಗಳಲ್ಲಿ. ಈ 4ವರ್ಷಗಳ ಹಣದ ಮೊತ್ತಕ್ಕೆ ಬಡ್ಡಿಯನ್ನು ಬ್ಯಾಂಕಿಗೆ ಯಾರು ಕಟ್ಟುತ್ತಾರೆ? ಎನ್ನುವ ಪ್ರಶ್ನೆ ಬರುತ್ತದೆ. ಇದನ್ನೆಲ್ಲಾ ಲೆಕ್ಕಾ ಹಾಕಿದರೆ ಅದು ರೂ. 7ರಿಂದ 8 ಸಾವಿರ ಕೋಟಿಗಳಷ್ಟು ಆಗುತ್ತದೆ. ಇದರ ಕುರಿತು ಆಯವ್ಯಯದಲ್ಲಿ ಹೇಳಿಯೇ ಇಲ್ಲ. ಹೀಗೆ ಪ್ರತಿವರ್ಷ ಆದರೆ ಮುಂದೆ ಏನು ಎಂಬುದರ ಕುರಿತು ನಾವು ಗಂಭೀರವಾಗಿ ಯೋಚನೆಯನ್ನು ಮಾಡಬೇಕು. ಈಗ ನಮ್ಮ ರಾಜ್ಯದಲ್ಲಿ ಶ್ರೀ ಯಡಿಯೂರಪ್ಪನವರು ಬಂದರು, ಶ್ರೀ ಸಿದ್ಧರಾಮಯ್ಯನವರು ಬಂದರು, ಈಗ ಶ್ರೀ ಕುಮಾರಸ್ವಾಮಿಯವರು ಬಂದಿದ್ದಾರೆ. ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯನ್ನು ತೆಗೆದುಕೊಳ್ಳುವದು ಸರ್ಕಾರದ ಜವಾಬ್ದಾರಿಯೇ, ಆದರೆ ಈಗ ಬ್ಯಾಂಕುಗಳು ಬಂಡವಾಳದ ಪುನರಾವರ್ತನೆ ಎಂದು ಸರ್ಕಾರವು ಕೆಲವು ವರ್ಷಗಳ ಹಿಂದೆ ರೂ 75 ಸಾವಿರ ಕೋಟಿಯಿಂದ 80 ಸಾವಿರ ಕೋಟಿಯವರೆಗೆ ಮಾಡಿದೆ. ಒಂದು ಅಂದಾಜಿನ ಪ್ರಕಾರ ಈ ಕಾರ್ಪೋರೇಟ್ ಕ್ಷೇತ್ರಕ್ಕೆ ಪ್ರೋತ್ಸಾಹಧನವನ್ನು ಕೊಟ್ಟಿದ್ದು ಸುಮಾರು ರೂ. 8 ಲಕ್ಷ ಕೋಟಿಗಳಷ್ಟು, ಇದನ್ನು ನೋಡಿದರೆ ರೈತರ ಸಾಲ ಮನ್ನಾ ಯೋಜನೆಯು ಏನು ದೊಡ್ಡ ಪ್ರಮಾಣದ್ದು ಎಂದು ಅನಿಸುವದಿಲ್ಲ. ಏಕೆಂದರೆ ಇದು ದುಡಿಯುವ ವರ್ಗ ಬಹಳ ಸಂಕಷ್ಟದಲ್ಲಿದ್ದಾರೆ, ರೈತರ ಆತ್ಮಹತ್ಯೆ ಪ್ರಕರಣಗಳು ಸಾಕಷ್ಟು ಆಗುತ್ತಿವೆ. ಇವನ್ನೆಲ್ಲ ನೋಡಿದರೆ ದೇಶದ ಒಟ್ಟಾರೆ ಸುಮಾರು ರೂ. 2ಲಕ್ಷ ಕೋಟಿ ಸಾಲ ದೊಡ್ಡ ಪ್ರಮಾಣದ್ದಲ್ಲ. ಕಾರ್ಪೋರೇಟ್ ಕ್ಷೇತ್ರಕ್ಕೆ ಪ್ರೋತ್ಸಾಹಧನವನ್ನು ಕೊಟ್ಟಿದ್ದು ಮತ್ತು ಬಂಡವಾಳದ ಪುನರಾವರ್ತನೆ ಇವನ್ನೆಲ್ಲ ನೋಡಿದರೆ ಇದೇನು ದೊಡ್ಡ ಪ್ರಮಾಣದ್ದಲ್ಲ.

ಇತ್ತೀಚಿಗೆ ನಾವು ನೋಡುತ್ತಿರುವ ಹಾಗೆ ಒಬ್ಬೊಬ್ಬರು ರೂ. 10 ಸಾವಿರ ಕೋಟಿಯಿಂದ 20 ಸಾವಿರ ಕೋಟಿಗಳ ಹಣಕ್ಕೆ ಬಾಕಿದಾರರಿದ್ದಾರೆ. ಇವನ್ನೆಲ್ಲ ಮರಳಿಪಡೆಯುವದಕ್ಕೇ ಸರಿಯಾದ ಕಾನೂನು ಚೌಕಟ್ಟಿಲ್ಲ. ಈಗ ನಾವು ನಮ್ಮ ದೇಶ ಮತ್ತು ಚೀನಾವನ್ನು ತುಲನೆಮಾಡಿ ನೋಡೋಣ. ಭಾರತ ಮತ್ತು ಚೀನಾ 1970ರಲ್ಲಿ ಕೃಷಿ ಪದ್ಧತಿ ಒಂದೇರೀತಿಯಲ್ಲಿದ್ದವು. ಈ ಒಂದು 40-45 ವರ್ಷಗಳಲ್ಲಿ ಗಣನೀಯ ಬದಲಾವಣೆ ಆಯಿತು. ಚೀನಾದಲ್ಲಿ 1970 ರಲ್ಲಿಯೇ ಆರ್ಥಿಕ ಸುಧಾರಣೆಯನ್ನು ಜಾರಿಗೆ ತಂದರು. ಚೀನಾದಲ್ಲಿ ಕೃಷಿ ಮಾಡಲು ನಮಗಿಂತ ಕಡಿಮೆ ಪ್ರದೇಶವಿದೆ, ಅಲ್ಲಿ ಸಣ್ಣ ಮತ್ತು ಅತೀ ಸಣ್ಣ ಹಿಡುವಳಿದಾರರು ನಮಗಿಂತ ಅರ್ಧದಷ್ಟಿದ್ದಾರೆ. ಅಲ್ಲಿ ಸರಾಸರಿ ಭೂಹಿಡುವಳಿ ಎಷ್ಟಿದೆ ಎಂದರೆ ಶೇ 0.6 ಹೆಕ್ಟರ್. ಅದರೊಳಗೆ ಅವರು 618 ಮಿಲಿಯನ್ ಟನ್ ಆಹಾರ ಧ್ಯಾನಗಳನ್ನು ಬೆಳೆಯುತ್ತಾರೆ. ನಮಗಿಂತ ಶೇ70 ರಷ್ಟು ಕಡಿಮೆ ಪ್ರದೇಶ ಅವರಿಗಿರಬಹುದು. ಆದರೆ ನಮಗೆ ಇನ್ನೂ ಕೂಡ 300 ಮಿಲಿಯನ್ ಟನ್ ನಷ್ಟು ಆಹಾರಧಾನ್ಯವನ್ನು ಬೆಳೆಯಲು ಸಾಧ್ಯವಾಗುತ್ತಿಲ್ಲ. ಈಗ ಪ್ರಶ್ನೆ ಬರುವದು ಏನೆಂದರೆ 1970ರಲ್ಲಿ ಭಾರತ ಮತ್ತು ಚೀನಾ ದೇಶಗಳು ಕೃಷಿಯಲ್ಲಿ ಒಂದೇ ರೀತಿಯಲ್ಲಿದ್ದವು, ಅಲ್ಲಿಯೂ ಕೂಡ ರೈತಾಪಿ ಜನರೆ ಕೃಷಿಯನ್ನು ಮಾಡುತ್ತಾರೆ. ಮೆಕಾನಿಸಮ್ ಅವರಿಗಿಂತ ನಮ್ಮಲ್ಲಿಯೇ ಜಾಸ್ತಿ ಇದೆ. ರಂಗರಾಜನ್ ತಮ್ಮ ಸಮಿತಿಯ ವರದಿಯಲ್ಲಿ ಕೆಲವೊಂದು ಅಂಶಗಳನ್ನು ಹೇಳಿದ್ದಾರೆ. ಅಲ್ಲಿ ತಾಂತ್ರಿಕವಾಗಿ ಬದಲಾವಣೆಯು ಸಾಕಷ್ಟು ಬಂದಿದೆ. ಚೀನಾದವರು ಆರ್ಥಿಕ ಸುಧಾರಣೆಯನ್ನು ತಂದಕೂಡಲೆ ಅವರು ಮೊದಲ 10-15 ವರ್ಷಗಳು ಕೇವಲ ಕೃಷಿಯಾಧಾರಿತ ಕೈಗಾರಿಕೆಗೆ ಒತ್ತು ಕೊಟ್ಟರು. ನಗರ ಪ್ರದೇಶದಲ್ಲಿರುವ ಕೈಗಾರಿಕೆಗಳಿಗಿರುವ ಮೂಲಭೂತಸೌಕರ್ಯಗಳ ರೀತಿಯಲ್ಲಿಯೇ ಗ್ರಾಮೀಣ ಪ್ರದೇಶದಲ್ಲಿ ಮೂಲಭೂತಸೌಕರ್ಯಗಳನ್ನು ಒದಗಿಸಿದರು. ಚೀನಾದಲ್ಲಿ ಎಸ್.ಇ.ಜಡ್. ಗ್ರಾಮೀಣ ಭಾಗದಲ್ಲಿವೆ. ಚೀನಾದಲ್ಲಿ ಆಹಾರಧಾನ್ಯಗಳ ಬೆಲೆ ಮತ್ತು ವೆಚ್ಚಗಳಿಗೆ ಸಾಕಷ್ಟು ಅಂತರವಿದೆ ಮತ್ತು ಸಾಕಷ್ಟು ಲಾಭದಾಯಕವಿದೆ. ಇಲ್ಲಿ ಆಹಾರಧಾನ್ಯಗಳ ಬೆಲೆಗಳು ಮಾರುಕಟ್ಟೆಯಾಧಾರಿತವಾಗಿವೆ. ಈ ರೀತಿಯಾದ ನೀತಿಗಳನ್ನು ನಮ್ಮ ದೇಶದಲ್ಲಿ ಜಾರಿಗೆ ತರಬೇಕು. ಸ್ವಾಮಿನಾಥನ್ ಸಮಿತಿಯ ವರದಿಯ ಕುರಿತು ಇತ್ತೀಚಿಗೆ ಚರ್ಚೆಯಾಗುತ್ತಿದೆ. ಇದನ್ನು ಸರ್ಕಾರವು ಯಥಾವತ್ತಾಗಿ ಜಾರಿಗೆ ತಂದರೆ ಕೃಷಿಯಲ್ಲಿ ಸಾಕಷ್ಟು ಬದಲಾವಣೆಯು ಆಗಬಹುದು. ಈ ಸಾಲ ಮನ್ನಾ ಯೋಜನೆಯು ಕೆಟ್ಟ ರಾಜಕೀಯ ಮತ್ತು ಕೆಟ್ಟ ಆರ್ಥಿಕತೆ ಆಗುವ ಸಾಧ್ಯತೆಗಳಿವೆ ಮತ್ತು ಇದಕ್ಕೆ ಪ್ರತಿಕೂಲತೆಗಳು ಬರಬಹುದು ಎಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ. ಕೆ. ಈಶ್ವರ,** *ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ಹುಬ್ಬಳ್ಳಿ*

ರೈತರ ಸಾಲ ಮನ್ನಾದ ಈ ಸಧ್ಯದ ಪರಿಸ್ಥಿತಿಯಲ್ಲಿ ರೈತರು, ಸರ್ಕಾರ ಮತ್ತು ಬ್ಯಾಂಕಗಳಲ್ಲಿ ನಾವು ಒಂದು ಪಾರ್ಟಿಯಾಗಿದ್ದೇವೆ. ಈಗ ನಾನು ಈ ಸ್ಕೀಂ ಕುರಿತಂತೆ ಟಿಪ್ಪಣಿ ಮಾಡಲು ಸಾಧ್ಯವಾಗುವದಿಲ್ಲ, ಇದು ಇನ್ನೂ ಪ್ರಕ್ರಿಯೆಯಲ್ಲಿದೆ. ಈಗ 2008 ರಿಂದ ಚರ್ಚೆ ಶುರು ಮಾಡೋಣ, 2008 ರಲ್ಲಿ ಸಾಲ ಮನ್ನಾ ಯೋಜನೆಯು ರೂ.54 ಸಾವಿರ ಕೋಟಿ ಯಿಂದ ರೂ. 72 ಸಾವಿರ ಕೋಟಿಯ ವರೆಗೆ ಹೋಗಿತ್ತು. ಕೇಂದ್ರ ಸರ್ಕಾರ ಒಂದು ಪ್ರಮಾಣದಲ್ಲಿ ಅಂದರೆ ರೂ. 50 ಸಾವಿರ ವರೆಗೆ ಸಣ್ಣ ರೈತರು, ದೊಡ್ಡ ರೈತರಿಗೆ ಒಂದು ಪ್ರಮಾಣ ನಿಗದಿಪಡಿಸಿ ಶೇ60 ರಷ್ಟು ರೈತರು ಸಂದಾಯ ಮಾಡಿದರೆ ಬ್ಯಾಂಕುಗಳು ಶೇ40 ರಷ್ಟು ಪಾವತಿಸುತ್ತವೆ ಎಂದು. 2014 ರಿಂದ ವಿವಿಧ 5 ರಾಜ್ಯಗಳಲ್ಲಿ ಈ ಸಾಲ ಮನ್ನಾ ಯೋಜನೆಯು ಘೋಷಣೆಯಾಗಿದೆ. ಕೇಂದ್ರ ಸರ್ಕಾರವು ಈ ಯೋಜನೆಗೆ ಸಹಾಯ ಮಾಡಲು ಮುಂದೆ ಬಂದಿಲ್ಲ ಆದರೆ ರಾಜ್ಯ ಸರ್ಕಾರದಿಂದ ಒಂದೊಂದೆ ಯೋಜನೆಗಳು ಬರುತ್ತಿವೆ. ಆದರೆ ಕರ್ನಾಟಕದ ರೈತರ ಸಾಲದ ಪ್ರಕರಣವು ಒಂದು ವಿಚಿತ್ರ ಪ್ರಕರಣವಾಗಿದೆ. ಇದು ಪಂಜಾಬ್, ಮಹರಾಷ್ಟ್ರ, ತೆಲಂಗಾಣ ಅಥವಾ ಆಂಧ್ರಪ್ರದೇಶ ಈ ರಾಜ್ಯಗಳಿಗಿಂತ ಭಿನ್ನವಾಗಿದೆ. 2008 ರಿಂದ 2010 ರ ವರೆಗೆ ಬ್ಯಾಂಕುಗಳು ಸಾಕಷ್ಟು ಕ್ರೆಡಿಟ್ ಕ್ಯಾಂಪ್ ಯೋಜನೆಗಳನ್ನು ಮಾಡಿದವು. ಅದು ಟ್ರಾಕ್ಟರ್ ಸಾಲವಿರಬಹುದು, ನೀರಾವರಿ ಪೈಪಲೈನಗಳ ಸಾಲವಿರಬಹುದು, ಬೆಳೆ ಸಾಲಗಳ ವರ್ಧನೆ ಮಾಡುವಂತಹದಿರಬಹುದು ಇದು 2010 ರ ವರೆಗೆ ಸಾಕಷ್ಟು ಮಾಡಿದ್ದೇವೆ. 2010 ನಂತರ ಕೂಡಲೆ ಬರಗಾಲ ಶುರುವಾಯಿತು. ಈ ಬರಗಾಲ ಪರಿಸ್ಥಿತಿಯಲ್ಲಿ ಬ್ಯಾಂಕುಗಳಿಗೆ ಅಕೌಂಟ್ಸಗಳನ್ನು ಪುನರ್‌ರಚನೆ ಮಾಡುವಂತೆ ಮಾರ್ಗಸೂಚಿಗಳು ಬರುತ್ತವೆ. ಬೆಳೆ ಸಾಲವನ್ನು ಪುನರ್‌ರಚನೆ ಮಾಡಿದರೆ ರೈತರಿಗೆ ಬರಗಾಲವಿದೆ ಎಂದು ಬಡ್ಡಿ ಸಮೇತ ಸಾಲವನ್ನು ಮುಂದಿನ ಒಂದುವರ್ಷದ ವರೆಗೆ ವಿಸ್ತರಿಸಿದೆವು.

ಇದೇ ರೀತಿ ನಾವು 5 ವರ್ಷಗಳ ಕಾಲ ಸತತವಾಗಿ ಈಗಾಗಲೇ ಮಾಡಿದ್ದೇವೆ. ಅಸಲು ಮತ್ತು ಬಡ್ಡಿಯನ್ನು ಕಳೆದ 5ವರ್ಷಗಳಿಂದ ವಿಲೀನಮಾಡಿ ಮಾಡಿ ಈಗ ರೂ. 3ಲಕ್ಷ ಬೆಳೆಸಾಲ ತೆಗೆದುಕೊಂಡಿದ್ದರೆ ಅದು ಈಗ ರೂ.4.20 ಲಕ್ಷ ದಿಂದ ರೂ.4.30 ಲಕ್ಷದವರೆಗೆ ಆಗಿದೆ. ಈಗ ಅದನ್ನು ಚಾಲ್ತಿ ಖಾತೆ ಎಂದು ಪರಿಗಣಿಸಲಾಗುತ್ತಿದೆ. ಸರ್ಕಾರ ಸಾಲ ಮನ್ನಾ ಯೋಜನೆಯನ್ನು ಜಾರಿಗೆ ತರಬೇಕೆಂದರೆ ಈ ಎಲ್ಲಾ ಮೊತ್ತಕ್ಕೆ ತರಬೇಕು ಏಕೆಂದರೆ ಅಸಲು ಮತ್ತು ಬಡ್ಡಿಗಳನ್ನು ವಿಲೀನಗೊಳಿಸಲಾಗಿದೆ. ಬೇರೆ ರಾಜ್ಯಗಳಲ್ಲಿ ಬರಗಾಲ ಪರಿಸ್ಥಿತಿ ಈ ರೀತಿ ಬರಲಿಲ್ಲ, ಅಲ್ಲಿ ಸಾಲ ಮನ್ನಾದ ಬಗ್ಗೆ ರೈತರ ಬೇಡಿಕೆ ಇತ್ತು, ಹಾಗಾಗಿ ಸರ್ಕಾರವು ಈ ಪ್ರಕ್ರಿಯೆಯನ್ನು ಪ್ರಾರಂಭಿಸಿತು. ಕರ್ನಾಟಕದ ಸಾಲ ಮನ್ನಾ ಯೋಜನೆಗಾಗಿ ಈಗಾಗಲೆ ಸಮಿತಿ ಮತ್ತು ಉಪ-ಸಮಿತಿಯನ್ನು ಈಗಾಗಲೇ ರಚಿಸಲಾಗಿದೆ. ಈಗ ಈ ಸಮಿತಿಗಳ ಮುಂದಿರುವ ಪ್ರಶ್ನೆ ಎಂದರೆ ಅಸಲನ್ನು ಮನ್ನಾ ಮಾಡಬಹುದು ಆದರೆ ಬಡ್ಡಿಯನ್ನು ಯಾರು ಮನ್ನಾ ಮಾಡುವರು? ಇದೇ ಈಗ ತೊಂದರೆ ಇದೆ. ಎರಡನೆ ಭಾಗವೆಂದರೆ, ಆರ್ಥಿಕ ಬೆಂಬಲ ಸಾಲವನ್ನು ಮಾಡಬೇಕೆಂದು ಈಗ ಕೆಲವರು ಮಾತನಾಡಿದರು, ಆದರೆ ಕಳೆದ ಹತ್ತು ವರ್ಷಗಳಿಂದ ರೂ.3ಲಕ್ಷದ ವರೆಗೆ ಈ ಸಾಲದ ಯೋಜನೆ ಕೊಡಲಾಗುತ್ತಿದೆ, ಆದರೆ ಈ ಸಾಲದ ಮೊತ್ತವನ್ನು ಇನ್ನು ಸ್ವಲ್ಪ ಏರಿಕೆ ಮಾಡಿದರೆ ಒಳ್ಳೆಯದು. ಮುಂದೆ ಸಾಲ ಮನ್ನಾದ ಯೋಜನೆಗಳನ್ನು ತರವುದಕ್ಕಿಂತ ಕಂತು ಸಾಲಕ್ಕೆ, ಟ್ರ್ಯಾಕ್ಟರ್ ಸಾಲ ಮತ್ತು ನೀರಾವರಿಯ ಸಾಲಕ್ಕೆ ಸಬ್‌ವೆನ್ಷನ್ ಕೊಟ್ಟರೆ ರೈತರಿಗೆ ಉಪಯೋಗವಾಗುತ್ತದೆ. ಈಗ ಎಸ್.ಎಲ್.ಬಿ.ಸಿ.ಯಲ್ಲಿ ಅಕೌಂಟ್ಸ್‌ಗಳ ಪುನರ್‌ರಚನೆ ಮಾಡುವಾಗ ರಾಷ್ಟ್ರೀಯ ಬ್ಯಾಂಕುಗಳಲ್ಲಿ ರೂ. 3ಲಕ್ಷ ಸಾಲವಿದೆಯೆಂದರೆ ಅವರದು ಸಹಕಾರಿ ಬ್ಯಾಂಕುಗಳಲ್ಲಿಯೂ ಸಹ ರೂ. 50 ಸಾವಿರ ಸಾಲವಿರುತ್ತದೆ. ಈಗ ಸಹಕಾರಿ ಬ್ಯಾಂಕುಗಳಲ್ಲಿ ಸಾಲ ಮನ್ನಾ ಆಗಿದ್ದರೆ ಅವರಿಗೆ ಹಲವು ಕಂಡಿಶನಗಳನ್ನು ಹಾಕಿದ್ದರು. ಈಗ ಅವುಗಳನ್ನು ಹಿಂದೆ ಪಡೆದಿದ್ದಾರೊ ಹೇಗೆ ಎನ್ನುವದು ಸರಿಯಾಗಿ ಗೊತ್ತಿಲ್ಲ. ಹಿಂದಿನ ಸರ್ಕಾರದಲ್ಲಿ ಶ್ರೀ ಸಿದ್ಧರಾಮಯ್ಯನವರು ಸಹಕಾರಿ ಬ್ಯಾಂಕುಗಳ ಸಾಲವನ್ನು ಮನ್ನಾ ಮಾಡಿದ್ದರು. ಅವರೇ ಈಗ ಫಲಾನುಭವಿಗಳು ಆಗಿದ್ದಾರೋ ಇಲ್ಲವೋ ಇನ್ನು ಸರಿಯಾಗಿ ಗೋತ್ತಾಗಿಲ್ಲ. ಎಸ್.ಎಲ್.ಬಿ.ಸಿ. ಯವರು ಸಹ ಇದನ್ನೇ ಕೇಳುತ್ತಿದ್ದಾರೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಓಟಿಎಸ್ ಸ್ಕೀಂಗಳು ಸಾಕಷ್ಟು ಇರುತ್ತವೆ (One time settlement scheme) ಈ ಯೋಜನೆಯಲ್ಲಿ ರೈತರ 4 ಖಾತೆಗಳನ್ನು ತೆಗೆದುಕೊಂಡು ಒಂದು ಸ್ಕೀಂ ತಯಾರು ಮಾಡಿರುತ್ತೇವೆ. ಈಗ ರೈತ ನನ್ನ ಹತ್ತಿರ ಬಂದಿದ್ದಾನೆ ಎಂದರೆ ಅವನ ಬೆಳೆಸಾಲವಿರಬಹುದು, ಡೈರಿ ಸಾಲವಿರಬಹುದು, ಸಣ್ಣ ನೀರಾವರಿ ಮತ್ತು ಟ್ರ್ಯಾಕ್ಟರ್ ಸಾಲವಿರಬಹುದು ಈ ನಾಲ್ಕು ಖಾತೆಗಳು ಕಟ್‌ಬಾಕಿ ಆಗಿವೆ ಎಂದು ಕೊಳ್ಳೊಣ, ಆಗ ನಾವು ಈ ನಾಲ್ಕು ಖಾತೆಗಳನ್ನು ಸೇರಿಸಿ ಒಂದು ಖಾತೆಯನ್ನಾಗಿ ಮಾಡುತ್ತೇವೆ. ಈ ಓಟಿಎಸ್ ಸ್ಕೀಂಲ್ಲಿ ಸಾಲ ಮನ್ನಾ ಯೋಜನೆಯು ಇಲ್ಲ. ಈಗ ಈ ಸಾಲಗಳು ರೂ.20ಲಕ್ಷಗಳಷ್ಟಿವೆ ಎಂದುಕೊಳ್ಳೊಣ ಮತ್ತು ಈಗ ರೂ.10ಲಕ್ಷ ಸಾಲವನ್ನು ಮರುಪಾವತಿ ಮಾಡಿದ್ದಾರೆ ಎಂದುಕೊಳ್ಳೊಣ, ಈ ಸಂದರ್ಭದಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳಬೇಕು ಅದು ಹೇಗಿರಬೇಕೆಂದರೆ ಎಲ್ಲರಿಗೂ ಸಮಾಧಾನವಾಗಿರಬೇಕು ಇದು ಬ್ಯಾಂಕುಗಳ ಕಂಡಿಶನ್. ಈಗ ಸಾಲಮನ್ನಾ ಕೇವಲ ಬೆಳೆಸಾಲಕ್ಕೆ ಮಾತ್ರ ಸಂಬಂಧಿಸಿದೆ. ಅದೇ ಟ್ರ್ಯಾಕ್ಟರ ಸಾಲದ ಕಟ್ ಬಾಕಿ ಇದೆ, ಡೈರಿ ಸಾಲ ಕಟ್ ಬಾಕಿ ಇದೆ, ಬೇರೆ ಕಂತು ಸಾಲ ಕಟ್ ಬಾಕಿ ಇದೆ, ಈ ವಿಷಯದಲ್ಲಿ ಏನು ಯೋಚನೆಯಿದೆ?. ಆರ್.ಬಿ.ಐ. ಮಾರ್ಗಸೂಚಿಯ ಪ್ರಕಾರ ಕಟ್‌ಬಾಕಿ ಸಾಲವನ್ನು ಚಾಲ್ತಿ ಸಾಲವನ್ನಾಗಿ ಮಾಡಲು ಸಾಧ್ಯವಿಲ್ಲ. ಮರುಪಾವತಿಯಾಗಲಿ ಅಥವಾ ಓಡಿ ಮೊತ್ತ ಕಟ್ಟುವವರೆಗೂ ಖಾತೆಯನ್ನು ಉನ್ನತೀಕರಿಸಲು ಸಾಧ್ಯವಿಲ್ಲ. ನಾವು ಬ್ಯಾಂಕುಗಳಲ್ಲಿ ಓಟಿಎಸ್‌ನ್ನು ಪ್ರತಿಯೊಬ್ಬರನ್ನು ವ್ಯಯಕ್ತಿಕವಾಗಿ ಅವರ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಮಾಡುತ್ತಿದ್ದೇವೆ. ಈಗ ನಮ್ಮ ಧಾರವಾಡ ಜಿಲ್ಲೆಯಲ್ಲಿ ಬಾಕಿ ಉಳಿದಿರುವದು ರೂ. 8ಸಾವಿರ ಕೋಟಿ ಇದೆ. ನಮ್ಮ ರಾಜ್ಯದಲ್ಲಿ 30ಜಿಲ್ಲೆಗಳಿವೆ. ಒಟ್ಟಾರೆ ಹೆಚ್ಚುಕಡಿಮೆ ನಮ್ಮ ರಾಜ್ಯದಲ್ಲಿ ರೂ. 1 ಲಕ್ಷದಾ 60 ಸಾವಿರ ಕೋಟಿ ಸಾಲ ರೈತರ ಸಾಲವೇ ಇದೆ. ಸೆಂಟ್ರಲ್ ವೇರ್ ಹೌಸನಲ್ಲಿ ಬಡ್ಡಿರಹಿತವಾಗಿ ರೂ. 2ಲಕ್ಷದವರೆಗೆ ತೆಗೆದುಕೊಳ್ಳಬಹುದು ಎಂದು ಹೇಳುತ್ತಾರೆ, ಅದೇ ರೀತಿಯಲ್ಲಿ ಬ್ಯಾಂಕುಗಳು ಸಹ ವೇರ್ ಹೌಸ್ ರಿಸೀಪ್ಟ್ ಲೋನ್ ಸ್ಕೀಂಗಳನ್ನು ಹೊಂದಿವೆ, ಬೆಳೆಸಾಲದ ಹಾಗೆಯೇ ಶೇ3 ಬಡ್ಡಿಯೊಂದಿಗೆ 6 ತಿಂಗಳ ಅವಧಿಗೆ ಕೊಟ್ಟಿರುತ್ತೇವೆ. ಈ ಯೋಜನೆಯು ಗುಲ್ಬರ್ಗಾ ಮತ್ತು ಗದಗ ಜಿಲ್ಲೆಗಳಲ್ಲಿ ತಲಾ ರೂ.100 ಕೋಟಿಗಳಷ್ಟು ಬಂಡವಾಳವನ್ನು ಹೊಂದಿದೆ. ಈಗ ರಾಜ್ಯ ಸರ್ಕಾರವು 4-5 ಅಂಶಗಳನ್ನು ಕೇಳಿದೆ, ಅದು ತಮಗೆಲ್ಲ ಗೊತ್ತಿರಬಹುದು. ಪುನರ್‌ರಚನೆಯಾದ ಖಾತೆಗೂ ಸಹ

ಅಸಲಿನ (ಎಮ್.ಪಿ.ಎ.) ಸಂಪೂರ್ಣ ಬಡ್ಡಿಯನ್ನು ಮನ್ನಾ ಮಾಡಲು ಕೇಳಿದೆ. 31/12/2017 ನಂತರ ತೆಗೆದುಕೊಂಡ ಸಾಲವನ್ನು ಮನ್ನಾ ಮಾಡುತ್ತೇವೆಂದು ಸರ್ಕಾರ ಘೋಷಿಸಿದೆ. ಡಿಸೆಂಬರ್ 2017 ರಿಂದ ಸೆಪ್ಟಂಬರ್ 2018 ರ ವರೆಗಿನ ಬಡ್ಡಿಯ ಕುರಿತು ಯಾರು ನಿರ್ಧಾರ ಮಾಡಿಲ್ಲ. ಇದು ನಮ್ಮ ಬ್ಯಾಂಕರ್ಸಗಳಿಗೆ ದೊಡ್ಡ ವಿಷಯವಾಗಿದೆ. ಎರಡನೆಯದಾಗಿ, ಬೆಳೆಸಾಲಕ್ಕೆ ಸೆಟ್ಲಮೆಂಟ್ ಇದೆ, ಆದರೆ ಉಳಿದ ಟರ್ಮ್ ಲೋನ್‌ಗೆ ಶೇ50 ರಷ್ಟು ಸಡಿಲಗೊಳಿಸಬೇಕೆಂದರೆ, ಚಾಲ್ತಿ ಮಾಡಬೇಕೆಂದರೆ ಬ್ಯಾಂಕುಗಳಿಗೆ ಯಾವುದೇ ಆಸರೆ ಇಲ್ಲ. ಬ್ಯಾಂಕುಗಳೆಲ್ಲಾ ಕುಸಿಯತೊಡಗುತ್ತವೆ. ಬಾಕಿದಾರರ ಕುರಿತು ನಾವು ಚರ್ಚೆ ಮಾಡುತ್ತೇವೆ, 13 ದೊಡ್ಡ ದೊಡ್ಡ ಕಾರ್ಪೋರೇಟ್ ಕಂಪನಿಗಳ ಕಟ್ ಬಾಕಿಯೇ ಸುಮಾರು 9ಲಕ್ಷ ಕೋಟಿಗಳಷ್ಟಿದೆ, ಇದನ್ನು ಕಾರ್ಪೋರೇಟ್ ಸಾಲವೆನ್ನುವರು, ಇದು 15-20 ವರ್ಷಗಳಿಂದ ಇದೆ, ಇದಕ್ಕೆ ಬೇರೆ ಬೇರೆ ನಿಯಮಗಳಿವೆ. ಆದರೆ ಈ ಸಾಲ ಮನ್ನಾದಲ್ಲಿ ಒಟ್ಟು ಬಾಕಿ ಇರುವ ಸಾಲದಲ್ಲಿ ಶೇ50 ರಷ್ಟು ಸಾಲವನ್ನು ಮನ್ನಾ ಮಾಡಲು ಹೊರಟರೆ ಬ್ಯಾಂಕುಗಳು ಮುಳುಗಿಯೇ ಹೋಗುತ್ತದೆ. ರಾಷ್ಟ್ರೀಕೃತ ಬ್ಯಾಂಕುಗಳನ್ನು ಮುಚ್ಚಬೇಕಾಗುತ್ತದೆ. ಇದಲ್ಲದೇ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು (ಆರ್.ಆರ್.ಬಿ.) ಎಂದು ಇರುತ್ತವೆ, ಕೆ.ವಿ.ಜಿ. ಬ್ಯಾಂಕ ಕೂಡ ಒಂದು ಆರ್.ಆರ್.ಬಿ.ಗೆ ಸಂಬಂಧಿಸಿದ ಬ್ಯಾಂಕಾಗಿದೆ. ನಮಗೆ ಕೃಷಿ ಕ್ಷೇತ್ರದ ಅದ್ಯತೆಯ ಮೇರೆಗೆ ಶೇ18 ರಷ್ಟು ಬಂಡವಾಳದ ಸೆಟರ್ಯೆಟ್ ಕೊಟ್ಟಿದ್ದಾರೆ, ಆರ್.ಆರ್.ಬಿ.ಯದು ಶೇ90 ರಷ್ಟು ಕೃಷಿ ಸಾಲ ಇದೆ. ಸಾಲಮನ್ನಾ ಯೋಜನೆಯಲ್ಲಿ ಭಾಗಿಯಾದರೆ ಕೆ.ವಿ.ಜಿ. ಬ್ಯಾಂಕ್ ಸಂಪೂರ್ಣವಾಗಿ ಮುಳುಗಿಹೋಗುತ್ತದೆ, ಏಕೆಂದರೆ ಶೇ90 ರಷ್ಟು ಕೃಷಿ ಸಾಲ ಇದೆ. ಇದರಲ್ಲಿ ಶೇ50 ರಷ್ಟು ಸಾಲ ಮನ್ನಾ ಮಾಡಿದರೆ, ಬ್ಯಾಂಕು ಕುಸಿದುಹೋಗುತ್ತವೆ. ಈ ಆರ್.ಆರ್.ಬಿ.ಯ ಕುರಿತು ಹೇಳುವುದಾದರೆ, ಈ ಧಾರವಾಡ ಜಿಲ್ಲೆಯ ಸಾಮಾಜಿಕ ಭದ್ರತೆಯ ಯೋಜನೆಯಾದ ಜೀವನ್ ಸುರಕ್ಷಾ ಯೋಜನೆಯಲ್ಲಿ ಶೇ50 ರಷ್ಟು ಹಣವನ್ನು ಆರ್.ಆರ್.ಬಿ.ಯು ನೀಡುತ್ತದೆ. ದೊಡ್ಡ ಪ್ರಮಾಣದಲ್ಲಿ ಗ್ರಾಮೀಣ ಪ್ರದೇಶವನ್ನು ಕವರ್ ಮಾಡಿರುವುದೇ ಆರ್.ಆರ್.ಬಿ. ಯೊಂದಿಗೆ ಸಂಪೂರ್ಣ ಗ್ರಾಮೀಣ ಆರ್ಥಿಕತೆಯು ಈ ಸಾಲ ಮನ್ನಾದಿಂದ ಕುಸಿದುಹೋಗುತ್ತದೆ. ಇದು ಕೇವಲ ಶೇ50 ರಷ್ಟು ಸಾಲ ಮನ್ನಾದಲ್ಲಿ ಭಾಗಿಯಾದರೆ ಆಗುವ ತೊಂದರೆ ಇದು. ಆರ್.ಆರ್.ಬಿ.ಗಳು, ಕೆ.ವಿ.ಜಿ. ಬ್ಯಾಂಕುಗಳು ಸಂಪೂರ್ಣವಾಗಿ ಮುಚ್ಚಿಹೋಗುತ್ತವೆ. ಸಹಕಾರಿ ಬ್ಯಾಂಕುಗಳದು ಬೇರೆ, ಏಕೆಂದರೆ ಅವುಗಳಿಗೆ ರಾಜ್ಯ ಸರ್ಕಾರ ಸಹಾಯ ಮಾಡುತ್ತದೆ. ಕ್ಯಾಪಿಟಲ್ ಇನ್‌ಫ್ಯೂಸನ್ ಏಕೆ ಮಾಡುತ್ತಿದ್ದಾರೆ ಎಂದರೆ, ನಮ್ಮ ಉಳಿಯುವಿಕೆಗಾಗಿ. ಈ ಕ್ಯಾಪಿಟಲ್ ಇನ್‌ಫ್ಯೂಸನ್ ನ್ನು ಕೇಂದ್ರ ಸರ್ಕಾರದವರು ಉಚಿತವಾಗಿ ಮಾಡುತ್ತಿಲ್ಲ, ಅವರಿಗೆ ಇದರಲ್ಲಿ ಸ್ವಲ್ಪ ಪಾಲನ್ನು ಕೊಡಬೇಕು. ಆ ಶೇರು ಸಹ ಶೇಕಡಾದಂತೆ ಏರುತ್ತಾ ಹೋಗುತ್ತದೆ. ಅವರು ನಮಗೆ ಕ್ಯಾಪಿಟಲ್ ಇನ್‌ಫ್ಯೂಸನ್‌ನ್ನು ವ್ಯಾಪರವನ್ನು ಮುಂದುವರೆಸಿಕೊಂಡು ಹೋಗಲು ಮಾಡುತ್ತಿದ್ದಾರೆ. ಆದರೆ ಈ ಸಾಲ ಮನ್ನಾ ನಾವು ಮಾಡಬೇಕಾದರೆ ನಾವು ನಮ್ಮ ಬಂಡವಾಳವನ್ನೇ ಉಪಯೋಗಿಸಬೇಕಾಗುತ್ತದೆ. ಇದರಿಂದ ಬ್ಯಾಂಕುಗಳ ಸ್ಥಿತಿ ಚಿಂತಾಜನಕವಾಗುತ್ತದೆ. ಇದರ ಕುರಿತು ಸರ್ಕಾರವು ಆದಷ್ಟು ಬೇಗನೆ ನಿರ್ಧಾರವನ್ನು ಮಾಡಬೇಕು. ಈಗ ಮುಂಗಾರಿನ ಬೆಳೆ ವಿಮಾದ ಸಮಯ ಮುಗಿದು ಹೋಗಿದೆ, ಪ್ರತಿ ವರ್ಷ ಧಾರವಾಡ ಜಿಲ್ಲೆಯಲ್ಲಿ ಸರಾಸರಿ ವಿಮಾದಲ್ಲಿಯೇ 3ಲಕ್ಷದಷ್ಟು ನೊಂದಣಿಯಾಗುತ್ತದೆ, ಈ ವರ್ಷ ನಾವು 1ಲಕ್ಷ ಪಾಲಿಸಿಗಳ ನೊಂದಣಿಯನ್ನು ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿಯಲ್ಲಿ ಮಾಡಿದ್ದೇವೆ. ಈ ಒಂದು ಲಕ್ಷ ನೊಂದಣಿಯಲ್ಲಿ ಸಾಲ ಮಾಡಿದವರು ಮತ್ತು ಸಾಲ ಮಾಡದಿರವವರು ಎಂಬ ಎರೆಡು ಭಾಗವಿದೆ. ಇದರಲ್ಲಿ ಸಾಲಗಾರ ರೈತರು ಕೇವಲ 17ಸಾವಿರ. ಅಂದರೆ ಒಂದು ಖಾತೆಯು ಚಾಲ್ತಿಯಿಲ್ಲ ಈ ವರ್ಷ. ಮೂರು ಋತುವಿನಲ್ಲಿ ಮುಂಗಾರು ಮುಖ್ಯವಾದ ಋತು, ಆದರೆ ಈ ಬಾರಿ ಒಂದು ಖಾತೆಯು ಚಾಲ್ತಿಇಲ್ಲ. ಸರಾಸರಿ ಒಂದು ಶಾಖೆಯಲ್ಲಿ 300 ಖಾತೆಗಳು ನವೀಕರಣಗೊಳ್ಳಬೇಕು, ಆದರೆ 30 ಖಾತೆಗಳೂ ಸಹ ನವೀಕರಣಗೊಂಡಿಲ್ಲ. ಏಕೆಂದರೆ ರೈತರ ಮನದಲ್ಲಿ ಈಗ ನಾನು ನವೀಕರಣ ಮಾಡಿದರೆ ನನಗೆ ಬರುವುದಿಲ್ಲ. ನಮ್ಮ ಬ್ಯಾಂಕುಗಳ ಕಾಳಜಿ ಎಂದರೆ ನಾವು ರೈತರ ಜೊತೆಗೆ ಇರುತ್ತೇವೆ, ನಾವು ಬಡಜನರ ಸಲುವಾಗಿ ಇದ್ದೇವೆ, ಗ್ರಾಮೀಣ ಜನರಿಗಾಗಿ ಇದ್ದೇವೆ. ಆದರೆ, ಇದು ರಾಜಕೀಯ ವಿಷಯವಾಗಿರುವದರಿಂದ ನಾವು ಬಹಳ ಚರ್ಚೆಯನ್ನು ಮಾಡುವಂತಿಲ್ಲ. ಮೊದಲು ಗ್ರಾಮೀಣ ಭಾಗದಲ್ಲಿ ಟ್ರ್ಯಾಕ್ಟರ್ಸಗಳು ಅಷ್ಟಾಗಿ ಕಂಡುಬರುತ್ತಿಲ್ಲ. ಬ್ಯಾಂಕುಗಳು ಹಳ್ಳಿ ಹಳ್ಳಿಗೆ ಹೋಗಿ ರೈತರಿಗೆ ಪ್ರಚಾರ ಮಾಡಿ ಯೋಜನೆಗಳನ್ನು ಮುಟ್ಟಿಸಿರುವದರಿಂದ ಈಗ ಪ್ರತಿ ನಾಲ್ಕು ಮನೆಗಳಲ್ಲಿ ಒಂದು ಮನೆಯಲ್ಲಿ ಟ್ರ್ಯಾಕ್ಟರ್ ಇದೆ. ಗಂಗಾವತಿಯೊಂದರಲ್ಲಿಯೇ ಒಂದೇ ಸಾರಿ 250 ಟ್ರ್ಯಾಕ್ಟರ್‌ಗಳನ್ನು ಕೊಟ್ಟಿದ್ದೇವೆ. ಬಳ್ಳಾರಿಯಲ್ಲಿ

ಗಣಿಗಾರಿಕೆಯು ನಿಂತ ಮೇಲೆ ಟ್ರ್ಯಾಕ್ಟರಗಳು ಎಲ್ಲಾ ರೈತರ ಮನೆ ಮುಂದೆ ಹಾಗೆ ಖಾಲಿ ನಿಂತಿವೆ. ಅವುಗಳ ಸವಕಳಿ ಬೆಲೆಯು ತುಂಬಾ ಕಡಿಮೆಯಾಗಿರುವುದರಿಂದ ಅವುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಸಹ ಬ್ಯಾಂಕುಗಳಿಗೆ ಆಗುತ್ತಿಲ್ಲ. ಇವೆಲ್ಲವು ಸಹ ವಾಸ್ತವಿಕ ಸಮಸ್ಯೆಗಳಾಗಿವೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ದೇಶದ ಎಲ್ಲಾ ಜನರಿಗಾಗಿ, ರೈತರಿಗಾಗಿ ಒಂದು ಒಳ್ಳೆಯ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಇದರಿಂದ ಎಲ್ಲರಿಗೂ ಒಳ್ಳೆಯದಾಗಬೇಕು. ಧನ್ಯವಾದಗಳು.

**ಪ್ರೊ. ರಾಜೇಂದ್ರ ಪೋತದಾರ,** *ನಿರ್ದೇಶಕರು, ವಾಲ್ಮಿ, ಧಾರವಾಡ*

ಸಭೆಯ ಅಧ್ಯಕ್ಷತೆಯನ್ನು ವಹಿಸಿರುವ ಗೌರವಾನ್ವಿತ ಶ್ರೀ ಎಸ್.ವಿ. ಪಾಟೀಲ ಸಾಹೇಬರೆ, ಸಿ.ಎಮ್.ಡಿ.ಆರ್. ಸಂಸ್ಥೆಯ ನಿರ್ದೇಶಕರಾದ ಅಣ್ಣಿಗೇರಿಯವರೆ, ಪರಿಣಿತ ತಜ್ಞರೆ, ರೈತಬಾಂಧವರೆ, ನಾನು ಇಲ್ಲಿ ಬಹಳಷ್ಟು ಅಂಕಿ ಸಂಖ್ಯೆಗಳನ್ನು ಹೊತ್ತುಕೊಂಡು ಬಂದಿಲ್ಲ. ಅಂಗೈ ಹುಣ್ಣಿಗೆ ಕನ್ನಡಿ ಏಕೆ ಬೇಕು ಎನ್ನುವ ಮಾತಿದೆ. ನಾನು ಕೃಷಿ ಹಿನ್ನೆಲೆಯಿಂದ ಬಂದಿರುವ ವ್ಯಕ್ತಿ, ಆದ್ದರಿಂದ ನೀವು ನಾನು ರೈತರ ಪರವಾಗಿಯೇ ಮಾತನಾಡುವದನ್ನು ಅಪೇಕ್ಷಿಸಬಹುದು. ಕೃಷಿ ಕ್ಷೇತ್ರದ ಕುರಿತು ಮಾತನಾಡುವದಾದರೆ, ಈ ಒಂದು ಕ್ಷೇತ್ರವು ನಿರ್ಲಕ್ಷಿತ ಕ್ಷೇತ್ರವಾಗಿದೆ. ಈ ಕ್ಷೇತ್ರದ ಪ್ರತಿಕೂಲತೆಯೆಂದರೆ ಇದು ಪ್ರಕೃತಿ ಆಧಾರಿತವಾಗಿರುವದು ಸಹ ಕಾರಣವಾಗಿದೆ. ಈ ಕ್ಷೇತ್ರವನ್ನು ರಾಜಕೀಯ-ಆರ್ಥಿಕ ನೀತಿನಿಯಮಗಳ ಮೂಲಕ ನಿರ್ಲಕ್ಷಿತ ಕ್ಷೇತ್ರವನ್ನಾಗಿ ಮಾಡಲಾಗಿದೆ ಎಂಬುದು ಸ್ಪಷ್ಟವಾಗಿದೆ. ಈಗ ಮಾರುಕಟ್ಟೆಯ ವ್ಯವಸ್ಥೆಯಲ್ಲಿ ವಾಣಿಜ್ಯೀಕರಣವು ಹೆಚ್ಚಾಗುತ್ತಿರುವದರಿಂದ ಈ ಹಿಂದಿನ ಇತಿಹಾಸವನ್ನು ಗಮನಿಸಿದಾಗ ರೈತರು ಬಳಲುತ್ತಿರುವದು ಸಾಬೀತಾಗಿದೆ. ಯಾವಾಗ ಮಾರುಕಟ್ಟೆಯಲ್ಲಿ ಹಿಡಿತ ಹೆಚ್ಚಾಗುತ್ತದೆ ಆಗ ರೈತ ಸಂಕಷ್ಟಗೀಡಾಗಿದ್ದದನ್ನು ನಾವು 200-300 ವರ್ಷಗಳ ಇತಿಹಾಸದಲ್ಲಿ ಗಮನಿಸಿದರೆ ಇದು ಸಾಬೀತಾಗಿದೆ. ಈಗ ನಾವು ಪ್ರಾಥಮಿಕ ವಲಯ, ಮಾಧ್ಯಮಿಕ ವಲಯ, ಉತ್ಪಾದನಾ ವಲಯ ಹಾಗೂ ತೃತೀಯ ವಲಯಗಳಲ್ಲಿ ಯಾವ ದರದಲ್ಲಿ ತೃತೀಯ ವಲಯವು ಬೆಳವಣಿಗೆಯಾಗಿದೆ? ನಾವು ಪ್ಲಾಸ್ಟಿಕ್ ಮತ್ತು ಲಿಪಸ್ಟಿಕ್ ತಯಾರುಮಾಡಲು ಸಾಕಷ್ಟು ಹಣವನ್ನು ವ್ಯಯಮಾಡುತ್ತಿದ್ದೇವೆ, ಮೂಲಭೂತವಾದ ಅನ್ನ, ಹಾಲು ಮತ್ತು ತತ್ತಿ ಉತ್ಪಾದಿಸಲು ನಾವು ಮಹತ್ವವನ್ನು ಕೊಡುತ್ತಿಲ್ಲ. 1960-70 ರ ಸಾಲಿನಲ್ಲಿ ಡಾ. ದಾಂಡೇಕರ್, ಡಾ. ತಮಜಾಕ್ಷಿ ಯಂತಹ ಉತ್ತಮ ನೀತಿ ನಿರೂಪಕರು ಮತ್ತು ಮಾರುಕಟ್ಟೆ ತಜ್ಞರು ಮತ್ತು ಬೆಲೆ ನೀತಿ ತಜ್ಞರು ವ್ಯಾಪಾರದ ನಿಯಮಗಳು ಕೃಷಿ ವಲಯದ ಪರವಾಗಿಲ್ಲವೆಂದು ಅತ್ಯಂತ ಉತ್ಕಟವಾಗಿ ವಾದಿಸಿದರು. ಅಂದರೆ ರೈತ ಏನು ಪಡೆಯಬೇಕೋ ಅದನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಕೈಗಾರಿಕೆಯವರು ಈ ಕ್ಷೇತ್ರದಿಂದ ಖರೀದಿಮಾಡುತ್ತಾರೆ ಆದರೆ ರೈತರಿಗೆ ಏನು ಬರಬೇಕೋ 1990-91 ರ ಹೊಸ ಉದಾರ ನೀತಿಮಾಡಿಯೂ ಅದು ಬರುತ್ತಿಲ್ಲವೆಂಬುದು ಸಹ ಸಾಬೀತಾಗಿದೆ. ಇನ್ನೊಂದು ವಿಷಯವೆಂದರೆ ಪ್ರಾಥಮಿಕ ಕ್ಷೇತ್ರಕ್ಕೆ ಆಗಬೇಕಾಗಿದ್ದ ದೊಡ್ಡಪ್ರಮಾಣದ ಬಂಡವಾಳ ಬರುತ್ತಿಲ್ಲ. ನಾವೆಲ್ಲರು ಹೇಳುತ್ತೇವೆ ಭಾರತವು ಕೃಷಿ ಪ್ರಧಾನವಾದ ದೇಶವೆಂದು ಮತ್ತು ಇನ್ನೂ ಸಾವಿರ ವರ್ಷವಾದರು ನಮ್ಮ ದೇಶವು ಕೃಷಿ ಪ್ರಧಾನವಾದ ದೇಶವಾಗಿಯೇ ಉಳಿಯುವದು. ಎಲ್ಲಿ ದೊಡ್ಡ ಪ್ರಮಾಣದ ಬಂಡವಾಳ ಬರಬೇಕಾಗಿತ್ತೊ ಅಲ್ಲಿ ಬರುತ್ತಿಲ್ಲ, ಮಾಧ್ಯಮಿಕ ವಲಯ ಮತ್ತು ತೃತೀಯವಲಯದಲ್ಲಿ ಹೆಚ್ಚು ಬಂಡವಾಳ ಬರುತ್ತಿದೆ. ಏಕೆಂದರೆ ಅಲ್ಲಿ ಲಾಭ ಹೆಚ್ಚಿನದಿದೆ. ಒಕ್ಕಲುತನದಿಂದ ಲಾಭವಿಲ್ಲ ಆಧರೆ ಇದು ನಮ್ಮ ಜೀವನಕ್ಕೆ ಆಧಾರವಾಗಿದೆ. ಈ ಕಾರಣಕ್ಕಾಗಿ ರೈತರ ಅನುಕೂಲತೆಗೆ ವ್ಯಾಪಾರದ ನೀತಿಗಳ ಅವಶ್ಯಕತೆಯು ಇದೆ. ನಾವು ಅಂಕಿ ಅಂಶಗಳನ್ನು ನೋಡಿದಾಗ ಕೃಷಿ ನೀತಿಗಳು ಬಂದ 1960-70 ರಿಂದ ಮತ್ತು 1990 ರ ಜಾಗತೀಕರಣದ ನಂತರದ ಸ್ಥಿತಿಯನ್ನು ಗಮನಿಸಿದಾಗ ನೀತಿನಿಯಮಗಳು ಕೃಷಿ ಕ್ಷೇತ್ರದ ಪರವಾಗಿ ಇಲ್ಲ, ಬಂಡವಾಳದ ಹರಿವು ಕೂಡ ಇಳಿಮುಖಗೊಳ್ಳುತ್ತಿದೆ. ಆದ್ದರಿಂದ ಕೃಷಿ ಕ್ಷೇತ್ರಕ್ಕೆ ರಕ್ಷಣೆಯ ಅವಶ್ಯಕತೆಯಿದೆ. ಆರ್ಥಿಕ ಕಾರ್ಯಸಾಧ್ಯತೆ, ತಾಂತ್ರಿಕ ಕಾರ್ಯಸಾಧ್ಯತೆ, ಹಣಕಾಸಿನ ಕಾರ್ಯಸಾಧ್ಯತೆ, ಬ್ಯಾಂಕುಗಳ ಕಾರ್ಯಸಾಧ್ಯತೆಗಳನ್ನೆಲ್ಲ ನಾವು ನೋಡುತ್ತೇವೆ. ಇಲ್ಲಿ ನಾವು ಕೇವಲ ಕೃಷಿ ಸಾಲ ಮತ್ತು ಬ್ಯಾಂಕುಗಳನ್ನು ಮುಖಾಮುಖಿಯಾಗಿ ನೋಡಿದಾಗ ಬ್ಯಾಂಕುಗಳನ್ನು ನಷ್ಟಕ್ಕೀಡುಮಾಡಿ ಕೃಷಿ ಕ್ಷೇತ್ರಕ್ಕೆ ಮಹತ್ವ ನೀಡುತ್ತೇವೆ ಎನ್ನುವ ಮಾತು ಬರುತ್ತದೆ. ಆದರೆ ಇದು ಸಮರ್ಥನೀಯವಾದ ವಾದ ಅಲ್ಲ. ನಾವು ಸಂಪೂರ್ಣವಾದ ಆರ್ಥಿಕ ವ್ಯವಸ್ಥೆಯನ್ನು ವಿಶ್ಲೇಷಿಸುತ್ತೇವೆ. ಭಾರತದ ಸಂಪೂರ್ಣವಾದ ಅರ್ಥವ್ಯವಸ್ಥೆಯಲ್ಲಿ ಹಣ ಎಲ್ಲಿ ಪೋಲು ಆಗುತ್ತಿದೆ? ಎಷ್ಟು ಯಾರಿಗೆ ಕೊಡಬಾರದಿತ್ತೋ ಅವರಿಗೆ ಕೊಡುತ್ತಿದ್ದೇವೆ. ಅನುತ್ಪಾದನಾ ವಲಯಕ್ಕೆ ನಾವು ಹಣವನ್ನು ಕೊಡುವದು

ನಿಲ್ಲಿಸಬೇಕು. ಬ್ಯಾಂಕಿಗೆ ಲಾಸ್ ಮಾಡಿ ರೈತರನ್ನು ಉದ್ದಾರ ಮಾಡಿ ಎಂದು ೦ಯಾರು ಹೇಳುತ್ತಿಲ್ಲ. ಆದರೆ ಇಂತಹ ಅನಗತ್ಯ ವೆಚ್ಚಗಳನ್ನು ನಿಲ್ಲಿಸಬೇಕು ಮತ್ತು ಆ ಹಣವನ್ನು ಬ್ಯಾಂಕುಗಳಿಗೆ ವರ್ಗಾವಣೆ ಮಾಡಬೇಕು. 1991 ರ ನಂತರ ಹೊಸ ಆರ್ಥಿಕ ನೀತಿ ಏನು ಬಂದಿದೆ, ಪ್ರಥಮವಾಗಿ ಗುಲಬರ್ಗಾದಲ್ಲಿ ರೈತರ ಆತ್ಮಹತ್ಯೆ೦ಯು ಪ್ರಾರಂಭವಾಯಿತು. ಒಂದು ಪ್ರಕರಣವಾದ ಮೇಲೆ ಒಂದು ಸದನ ಸಮಿತಿ೦ಯನ್ನು ಮಾಡಿ ಅದನ್ನು ನಿರ್ಲಕ್ಷಮಾಡಿ ಅದನ್ನು ಅಲ್ಲಿ೦ಯೇ ಬಿಟ್ಟುಬಿಟ್ಟರು. ಅನಂತರ 2000-2001-2002-2003-2004- 2005ರಲ್ಲಿ ಸತತವಾಗಿ ರೈತರ ಆತ್ಮಹತ್ಯೆ ಆದಾಗ ಸದನ ಸಮಿತಿ೦ಯಾಗಲಿ ಅಥವಾ ದೊಡ್ಡ ದೊಡ್ಡ ವಿಜ್ಞಾನಿಗಳು, ತಜ್ಞರು, ಶಿಕ್ಷಕರು, ರೈತರನ್ನು ನೋಡಿದರು ಆಗ ರೈತರು ಹುಡುಗಾಟಿಕೆಗೆ ಆತ್ಮಹತ್ಯೆ೦ಯನ್ನು ಮಾಡಿಕೊಳ್ಳುತ್ತಾರೆ ಎಂಬ ಹುಚ್ಚುತನದ ಮಾತು ಬಂತು ಎಂದು ಹೇಳಲು ಬಹಳ ಬೇಸರವಾಗುತ್ತದೆ. ನಾನು ಕಳೆದ 20 ವರ್ಷಗಳಿಂದ ವಾದಿಸುತ್ತಿದ್ದೇನೆ, ರೈತ 100 ರೂಪಾಯಿ ಖರ್ಚು ಮಾಡಿದರೆ ಅವನಿಗೆ ದೊರಕುವದು 70, 80, 90 ರೂಪಾಯಿ. ಅವನಿಗೆ 110 ರೂಪಾಯಿ ದೊರಕುವದೇ ಇಲ್ಲ. ಅವನಿಗೆ 110 ರೂಪಾಯಿ ದೊರಕಿದರೆ ಅವನು ಕಾರಿನಲ್ಲಿ ಓಡಾಡುತ್ತಾನೆ. ನಮ್ಮ ಸಾಹೇಬರೇ ಒಂದು ಸಲ ಸವಾಲು ಹಾಕಿದ್ದರು, ಅದು ಏನೆಂದರೆ ಕರ್ನಾಟಕ ಸರ್ಕಾರದ ಹಿರಿ೦ಯ ಅಧಿಕಾರಿಗಳು ಹಳ್ಳಿಗೆ ಹೋಗಿ 2 ವರ್ಷ ಒಕ್ಕಲುತನ ಮಾಡಿ ತೋರಿಸಲಿ ಎಂದು. ಈ ಹೇಳಿಕೆ ಒಂದು ಮಾರ್ಕ್ ಟೆಲ್ಲಿ೦ಯವರು ಬರೆದ ಒಂದು ಐತಿಹಾಸಿಕ ಪುಸ್ತಕ  ಇಂಡಿ೦ಯನ್ ಸ್ಲೋ ಮೋಶನ್  ಲ್ಲಿ ದಾಖಲಾಗಿದೆ. ಆದರೆ ರೈತರ ಆತ್ಮಹತ್ಯೆಗೆ ಕಾರಣ ಕುಡಿ೦ಯುವದು, ಇಸ್ಪೇಟ್ ಆಡುವದು, ಕುದರಿ ಬಾಲಕ್ಕೆ ಹಣ ಆಡುವದು ಎನ್ನುವದು ಅಪಪ್ರಚಾರ ಮತ್ತು ಅವೈಜ್ಞಾನಿಕ. ರೈತರ ಆತ್ಮಹತ್ಯೆಗೆ ಕಾರಣ ಸಾಲ. ರೈತ ತಾನು ಮಾಡುವ 100 ರೂಪಾಯಿ ಖರ್ಚಿಗೆ ಬರುವದು ಅವನಿಗೆ 80ರೂಪಾಯಿವರೆಗೆ ಮಾತ್ರ. ಇದರಲ್ಲಿ೦ಯೇ ಅವನು ಕುಟುಂಬ ಸಾಗಿಸಬೇಕು, ಮಕ್ಕಳ ಶಿಕ್ಷಣ ಮತ್ತು ಮದುವೆ ಮಾಡಿ ಜೀವನವನ್ನು ಸಾಗಿಸಬೇಕು. ಹೀಗಾಗಿ ಅವನು ಸಾಲವನ್ನು ಮಾಡುವ ಪರಿಸ್ಥಿತಿ೦ಯು ಬರುತ್ತದೆ. ಮೊದಲು ಸ್ನೇಹಿತರಲ್ಲಿ ಮತ್ತು ಸಂಬಂಧಿಕರಲ್ಲಿ ಸಾಲ ಮಾಡುತ್ತಾನೆ, ನಂತರ ಸಹಕಾರಿ ಬ್ಯಾಂಕುಗಳಲ್ಲಿ ಮಾಡುತ್ತಾನೆ ನಾನು ಕರ್ನಾಟಕದ ಸುಮಾರು 100 ಕೇಸುಗಳಲ್ಲಿ ಇದನ್ನು ನೋಡಿದ್ದೇನೆ. ಕೆಲವೊಂದು ನಕಲಿ ಕೇಸುಗಳಿವೆ, ಹಾಗಂತ ರೈತರ ಆತ್ಮಹತ್ಯೆ ಪ್ರಕರಣಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಬೇಕೆಂದು ಅಲ್ಲ. 1991 ರ ನಂತರದ ಹೊಸ ಆರ್ಥಿಕ ನೀತಿಗಳು ರೈತ ವಿರೋಧಿ೦ಯಾಗಿ ಮಾರ್ಪಟ್ಟಿವೆ ಎಂದು ಹೇಳಬೇಕಾಗುತ್ತದೆ. ಈ ದೇಶದ ಅನ್ನದಾತನಿಗೆ ರಕ್ಷಣೆ ಮಾಡಬೇಕೆಂದರೆ ಸರ್ಕಾರವು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು. ಆದ್ದರಿಂದ ಸಾಲ ಮನ್ನಾ ಪ್ರಶ್ನೆ ಬಂದಾಗ ಏಕೆ ಮೀನಾಮೇಷವನ್ನು ಮಾಡಬೇಕು ? ನಮ್ಮ ದೇಶದಲ್ಲಿ ಶೇ 70 ರಷ್ಟು ರೈತರು ಸಣ್ಣ ಹಿಡುವಳಿದಾರರಿದ್ದಾರೆ ಇವರನ್ನು ನಾವು ಆಸ್ಟ್ರೇಲಿ೦ಯಾದಲ್ಲಿರುವ ರೈತರ ಜೊತೆ ತುಲನೆ ಮಾಡಬಾರದು. ನಾನು ಆಸ್ಟ್ರೇಲಿ೦ಯಾದಲ್ಲಿ ಹಲವು ವರ್ಷಗಳು ಇದ್ದೆ, ಅಲ್ಲಿ ಹತ್ತು ಸಾವಿರ ಎಕರೆ ಕನಿಷ್ಠ ಹಿಡುವಳಿ ಇದೆ, ಅಲ್ಲಿರುವ ಕಾರ್ಪೊರೇಟ್ ಒಕ್ಕಲುತನದ ಜೊತೆ 1 1/2 ಎಕರೆ ಹೊಲದ ರೈತ ಸ್ಪರ್ಧೆ ಮಾಡಲು ಸಾಧ್ಯವಿಲ್ಲ ಮತ್ತು ಇಲ್ಲಿ೦ಯ ಸಂಪೂರ್ಣ ವ್ಯವಸ್ಥೆ೦ಯು ರೈತರಿಗೆ ಬೆಂಬಲವಾಗಿಲ್ಲ. ಆದ್ದರಿಂದ ರೈತರ ರಕ್ಷಣೆ೦ಯ ಅವಶ್ಯಕತೆ ಇದೆ. ಡಾ. ಸ್ವಾಮಿನಾಥನ್ ಮತ್ತು ಡಾ. ತನುಜಾಕ್ಷಿ ಮತ್ತು ದಾಂಡೆಕರ ಹಾಗೂ ಇತರರು ಹೇಳಿದ ಪ್ರಕಾರ ರೈತರಿಗೆ ಕೊಡಬೇಕಾದದನ್ನು ಕೊಡಬೇಕು. ಇವತ್ತು ಸಂಪೂರ್ಣ ಕೂರ್ಗ್ ನಾಶವಾಗಿದೆ ಅಲ್ಲಿ ಸಾಕಷ್ಟು ರೈತರಿದ್ದಾರೆ, ಅಲ್ಲಿ ಕಾಫಿ, ಮೆಣಸು ಎಲ್ಲಾ ಹಾಳಾಗಿ ಹೋಗಿದೆ. ಈ ಸಂದರ್ಭದಲ್ಲಿ ನಾವು ಬ್ಯಾಂಕಿಗೆ ನಷ್ಟವಾಗಿದೆ ಅವರನ್ನು ರಕ್ಷಿಸುವದು ಬೇಡ ಎಂದರೆ ಹೇಗೆ? ನಾವು ಇದಕ್ಕೆ ಬ್ಯಾಂಕನ್ನು ಜವಾಬ್ದಾರಿ೦ಯನ್ನಾಗಿ ಮಾಡುವದಿಲ್ಲ, ಆದರೆ ಬ್ಯಾಂಕ್ ಕೂಡ ರಕ್ಷಣೆಗೆ ನಿಲ್ಲಬೇಕು. ಈ ಹಿನ್ನೆಲೆ೦ಯಲ್ಲಿ ಸರ್ಕಾರವು ಕೃಷಿ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡುವದರೊಂದಿಗೆ ಎಲ್ಲಾ ಕ್ಷೇತ್ರಗಳನ್ನು ರಕ್ಷಿಸಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಬಸವರಾಜ ಹೊಂಗಲ,** *ಉಪ ಮುಖ್ಯ ವರದಿಗಾರರು, ಉದಯವಾಣಿ*

ಡಾ. ಪಾಟೀಲ್ ಸರ್ ಮತ್ತು ಎಲ್ಲಾ ಹಿರಿ೦ಯರೇ, ಬಹುಶಃ ಈ ಪ್ಯಾನಲ್‌ನಲ್ಲಿ ಅತೀ ಸಣ್ಣ ವಯಸ್ಸಿನವನು ನಾನೇ. ಕುವೆಂಪು ಅವರ ಮಾತು ನೆನಪಾಗುತ್ತಿದೆ, ಅಜ್ಜನ ಹೆಗಲನ್ನೇರಿದ ಮೊಮ್ಮಗ ಎಂದು ಎಲ್ಲಿ೦ಯೋ ಹೇಳಿದ ನೆನಪು. ಅಜ್ಜನಿಗಿರುವ ಅನುಭವ ಮೊಮ್ಮಗನಿಗಿರುವುದಿಲ್ಲ, ಆದರೆ ಅಜ್ಜನ ಹೆಗಲನ್ನೇರಿ ಜಗತ್ತನ್ನು ಮೊಮ್ಮಗ ನೋಡುತ್ತಿರುತ್ತಾನೆ ಎನ್ನುತ್ತಾರೆ, ಈಗ

ಪರಸ್ಥಿತಿ ಹಾಗಾಗಿದೆ. ಸುಮಾರು 18 ವರ್ಷಗಳಲ್ಲಿ ಮಾಧ್ಯಮದಲ್ಲಿ ಕೃಷಿ ಕ್ಷೇತ್ರದಲ್ಲಿರುವ ಸಮಸ್ಯೆಗಳು ಮತ್ತು ಅದಕ್ಕಿರುವ ಪರಿಹಾರಗಳ ಕುರಿತು ಸ್ವಲ್ಪ ಕೆಲಸಮಾಡಿರುವುದರಿಂದ ನನ್ನ ಕೆಲವು ವಿಚಾರಗಳನ್ನು ನಾನು ಇಲ್ಲಿ ಹಂಚಿಕೊಳ್ಳಲು ಬಯಸುತ್ತೇನೆ. ಒಂದು ಜಟಿಲವಾದ ವಿಷಯವನ್ನು ಇಟ್ಟುಕೊಂಡು ನಾನು ನನ್ನ ಮಾತನ್ನು ಪ್ರಾರಂಭಿಸುತ್ತಿದ್ದೇನೆ. ಇಬ್ಬರು ಕಾರು ಚಾಲಕರು ಎದುರುಬದರು ಬರುತ್ತಾರೆ, ರೋಡ ಇರುವದು ಕೇವಲ 10 ಫೂಟು, ಎರೆಡು ಕಾರುಗಳನ್ನು ಸೇರಿಸಿದರೆ ಆಗುವದು 9 ಫೂಟು, ಪಕ್ಕಕ್ಕೆ ಸರಿಯುವುದರ ಕುರಿತು ಅವರಲ್ಲಿ ಒಂದು ಮಾತಿನ ಚಕಮಕಿಯಾಗುತ್ತದೆ, ಹೊಡೆದಾಡುತ್ತಾರೆ, ದೂರು ಆಗುತ್ತದೆ, ನಂತರ ರಾಜಿಯಾಗಿ ಮನೆಗೆ ಹೋಗುತ್ತಾರೆ. ಇಲ್ಲಿ ಜಗಳವಾಗುತ್ತಿರುವದು ಸಾಮನ್ಯರಾದ ಇಬ್ಬರ ನಡುವೆ ಅನ್ನುವದು ಮುಖ್ಯವಾಯಿತೇ ಹೊರತು ರಸ್ತೆ ಅಗಲೀಕರಣದ ಬಗ್ಗೆ ಯಾರು ವಿಚಾರ ಮಾಡಿರಲಿಲ್ಲ. ಇನ್ನು ಕೃಷಿ ನೀತಿಗಳ ಕುರಿತು ನನಗೆ ಅಸಮಾಧಾನವಿದೆ. ಅದು ಸ್ವತಂತ್ರ ಭಾರತದ ನಂತರ ಬಂದತಹ ನೀತಿಗಳ ಬಗ್ಗೆ. ನನಗೆ ಒಂದು ಜೋಕ್ ನೆನಪಾಯಿತು, ಒಬ್ಬ ಲೀಡರ್ ಒಂದು ಹಳ್ಳಿಗೆ ಹೋಗುತ್ತಾನೆ, ಅಲ್ಲಿ ಹಸಿಮೆಣಸಿನಕಾಯಿ ಬೆಳೆದಿರುತ್ತಾರೆ. ಅಲ್ಲಿಗೆ ಹೋಗಿ ನಿಂತು ರೈತರಿಗೆ ಪಶ್ನಿಸುತ್ತಾನೆ, ಒಂದು ಕೆಜಿ ಹಸಿಮೆಣಸಿನ ಬೆಲೆ ಏನು ಎಂದು. ಆಗ ರೈತನು 20 ರೂಪಾಯಿಗೆ ಒಂದು ಕೆ.ಜಿ. ಎಂದು. ಮುಂದಿನ ಊರಿಗೆ ಹೋಗುತ್ತಾನೆ, ಅಲ್ಲಿ ಕೆಂಪು ಮೆಣಸಿನಕಾಯಿಯನ್ನು ಒಣಹಾಕಿರುತ್ತಾರೆ, ಇದು ಹೇಗೆ ಕೆಜಿ ಎಂದು ಪ್ರಶ್ನಿಸುತ್ತಾನೆ, ಆಗ ರೈತನು ಇದು 50 ರೂಪಾಯಿ ಕೆ.ಜಿ ಎಂದು ಉತ್ತರಿಸುತ್ತಾನೆ. ಆಗ ಮುಂದೆ ತನ್ನ ಭಾಷಣದಲ್ಲಿ ಹೇಳುತ್ತಾರೆ ಇನ್ನುಮುಂದೆ ನೀವು ಹಸಿಮೆಣಸಿನಕಾಯಿ ಬೆಳೆಯಬೇಡಿರಿ ಕೇವಲ ಕೆಂಪು ಮೆಣಸಿನಕಾಯಿಯನ್ನು ಮಾತ್ರ ಬೆಳೆಯಿರಿ ಎಂದು. ನೀತಿಗಳನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಮಾಡಿದ ತಪ್ಪುಗಳು ಇಂದು ರೈತರನ್ನು ಪೆಡಂಭೂತವಾಗಿ ಕಾಡುತ್ತಿವೆ. ವಿಜ್ಞಾನಿಗಳು ಅವರ ಕೈಯಲ್ಲಾದ ಸಹಾಯವನ್ನು ಮಾಡಿದ್ದಾರೆ, ಬ್ಯಾಂಕರ್ಸ್‌ಗಳು ಅವರ ಕೈಯಲ್ಲಾದ ಸಹಾಯವನ್ನು ಮಾಡಿದ್ದಾರೆ, ಆಸಕ್ತ ಕೆಲ ರಾಜಕೀಯ ವ್ಯಕ್ತಿಗಳು ತಮಗೆ ಸಿಕ್ಕಂತ ಸಂದರ್ಭದಲ್ಲಿ ತಮ್ಮ ಕೈಲಾದ ಸಹಾಯವನ್ನು ಮಾಡಿದ್ದಾರೆ. ಇವುಗಳನ್ನೆಲ್ಲ ಹೊರತುಪಡಿಸಿಯೂ ಸಹ ರೈತರು ಸಾಲದ ಸುಳಿಯಿಂದ ಹೊರಬರಲು ಏಕೆ ಸಾಧ್ಯವಾಗುತ್ತಿಲ್ಲ ಎನ್ನುವದು ಒಂದು ದೊಡ್ಡ ಯಕ್ಷ ಪ್ರಶ್ನೆಯಾಗಿಯೇ ಉಳಿದಿದೆ. ಬರಗಾಲದ ಸರಣಿ ಬಂದಾಗ 2015 ರಲ್ಲಿ ನಾನು ಆತಂಕ ಗೆದ್ದ ಅನ್ನದಾತರು ಎಂಬು ಸರಣಿ ಲೇಖನವನ್ನು ಬರೆದಿದ್ದೆ. ನಮ್ಮ ಜಿಲ್ಲೆಯ ಸುತ್ತಮುತ್ತಲಿನ ಸುಮಾರು 15-20 ರೈತರನ್ನು ಬರಗಾಲದಲ್ಲಿಯೂ ಸಹ ಯಾರು ಉಳಿದುಕೊಂಡಿದ್ದಾರೆಯೋ ಕಡಿಮೆ ನೀರನ್ನು ಬಳಸಿಕೊಂಡು ಸಾಲವನ್ನು ಮಾಡಿಕೊಳ್ಳದೇ, ಸ್ವಾವಲಂಬತನದಿಂದ ಜೀವನ ಮಾಡಲು ಹೇಗೆ ಸಾಧ್ಯವಾಯಿತು ಎಂದು ಅವರಿಗೆ ಪ್ರಶ್ನಿಸಿದೆ. ಆ ಸಂದರ್ಭದಲ್ಲಿ ನನಗೆ ಅವರು ಹೇಳಿದ ಉತ್ತರವೆಂದರೆ ಇವತ್ತು ನಾವು ಉಳಿದಿರುವದಕ್ಕೆ ಕಾರಣ ಮೊದಲನೆಯದು ನಮ್ಮ ಸಾಂಪ್ರದಾಯಕ ಕೃಷಿ, ಎರಡನೆಯದು ತಕ್ಕಮಟ್ಟಿಗೆ ಕಡಿಮೆ ನೀರನ್ನು ಅಂದರೆ ಮಳೆ ನೀರನ್ನು ಬಳಸಿಕೊಂಡು ಅಥವಾ ತಮ್ಮ ಪರಿಸರಕ್ಕೆ ತಕ್ಕಂತ ವಿಚಾರಗಳನ್ನು ಇಟ್ಟುಕೊಂಡು ಬದುಕಿದವರು ನನಗೆ ಎದುರಾದರು. ಅದರ ಜೊತೆಗೆನೆ ತಾಂತ್ರಿಕವಾಗಿ ಮುಂದುವರೆದವರು ಒಂದಿಬ್ಬರು ಇದ್ದರು. ಈಗ ರೈತರ ಸಾಲದ ವಿಷಯ ಬಂದಾಗ ನಾನು ಏಕೆ ಈ ವಿಷಯ ಹೇಳಿದೆನೆಂದರೆ ಮೊನ್ನೆ ಸಾಲ ಮನ್ನಾ ವಿಷಯಕ್ಕೆ ಕೆಲವು ಶರತ್ತುಗಳನ್ನು ವಿಧಿಸಿದ್ದರು, ಅದರಲ್ಲಿ 20 ಶರತ್ತುಗಳಿದ್ದವು. ಆ ಶರತ್ತುಗಳು ನನಗೆ ಸಮಂಜಸವೆನಿಸಲಿಲ್ಲ. ಅದರಲ್ಲಿ ಒಂದು ಶರತ್ತು ನನಗೂ ಸಹ ಅನ್ವಯವಾಗುವದು ಅದು, ಯಾರು ಆದಾಯ ತೆರಿಗೆ ಪಾವತಿಸುತ್ತಾರೋ ಅವರಿಗೆ ಸಾಲ ಮನ್ನಾ ಇಲ್ಲ ಎನ್ನುವದು. ನಾನು ಹಿರಿಯ ರಾಜಕಾರಣಿಗಳ ಜೊತೆ ದೂರವಾಣಿಯ ಮೂಲಕ ವಿಷಯದ ಕುರಿತು ಮಾತನಾಡಿದೆ. ಸಾಹೇಬರೆ, ಆದಾಯ ತೆರಿಗೆ ಭರಿಸುವವರ ಸಾಲವನ್ನು ಮನ್ನಾ ಮಾಡದೇ ಹೋದರೆ ನಿಮ್ಮ ಕೃಷಿ ಹೇಗೆ ಉಳಿಯುತ್ತದೆ. ಈಗ ಉತ್ತರ ಕರ್ನಾಟಕದಲ್ಲಿ ಕೃಷಿ ಏಕೆ ಉಳಿದಿದೆ ಎಂದರೆ, ಅವರ ಮನೆಯಲ್ಲಿ ಕನಿಷ್ಠ ಒಬ್ಬ ವ್ಯಕ್ತಿ ನೌಕರನಾಗಿದ್ದರೆ ಮಾತ್ರ ಅವರ ಮನೆಯಲ್ಲಿ ಕೃಷಿ ಉಳಿದಿರುತ್ತದೆ. ಬಿತ್ತುವಾಗ 10 ಚೀಲ ಹೆಸರು ಕೊಡಿಸುತ್ತಾನೆ, ಕೀಳುವಾಗ ಆಳಿಗೆ ಹಣ ಕೊಡುತ್ತಾನೆ, ಬೋರವೆಲ್ ಕೆಟ್ಟರೆ ರಿಪೇರಿ ಮಾಡಿಸುತ್ತಾನೆ. ಆ ವ್ಯಕ್ತಿ ಈ ಮೂಲಕ ಸಹಾಯ ಮಾಡುವದರ ಮೂಲಕ ಬ್ಯಾಂಕುಗಳ ಮೇಲೆ ಅವಲಂಬನೆಯಾಗದಂತೆ ಮಾಡಲು ಪ್ರಯತ್ನಿಸುತ್ತಾನೆ. ಇವೆಲ್ಲಕ್ಕಿಂತ ಆ ವ್ಯಕ್ತಿ ಪ್ರಾಮಾಣಿಕವಾಗಿ ಆದಾಯ ತೆರಿಗೆ ಭರಿಸುತ್ತಾನೆ. ನೀವು ಯಾರನ್ನು ಕೃಷಿ ಮಾಡುವವರು ಎಂದು ಪರಿಗಣನೆಗೆ ತೆಗೆದುಕೊಳ್ಳುವಿರಿ ? 10 ಲಕ್ಷ ಕೋಟಿ ಹಣವನ್ನು ಕೇಂದ್ರ ಸರ್ಕಾರವು ಕೃಷಿ ಸಾಲವನ್ನಾಗಿ ನೀಡುತ್ತದೆ, ಅದರಲ್ಲಿ 6 ಲಕ್ಷ ಕೋಟಿಗಳನ್ನು ಮ್ಯಾನೇಜಮೆಂಟ್‌ಗಳಿಗೆ ಕೊಡುತ್ತಾರೆ.

ಕೊತಂಬ್ರಿಯನ್ನು ರಕ್ಷಣೆಮಾಡುವಂತಹ ಫ್ರಿಜ್ ಕಂಪನಿಗಳಿಗೆ ಎಷ್ಟೋ ಲಕ್ಷ ಕೋಟಿ ಹೋಗುತ್ತದೆ. ಇವರು ಕೃಷಿ ಕ್ಷೇತ್ರಕ್ಕೆ ಎಷ್ಟರ ಮಟ್ಟಿಗೆ ಸಹಾಯ ಮಾಡುತ್ತಾರೆ ಎನ್ನುವಂತಹ ಪ್ರಶ್ನೆಗಳು ಉದ್ಭವಾಗುತ್ತದೆ. ರೈತರ ಸಾಲದ ಕುರಿತಾಗಿ ಮಾತನಾಡುವದೆಂದರೆ, ಬ್ಯಾಂಕುಗಳು ಇಷ್ಟು ಉತ್ಪಾದನೆ ಮಾಡುತ್ತವೆ, ಇಷ್ಟು ಲಾಭ ಬರುತ್ತದೆ, ಇಷ್ಟು ನಷ್ಟವಾಗುತ್ತದೆ. ಒಬ್ಬ ವ್ಯಕ್ತಿ 26ಸಾವಿರ ಕೋಟಿ ಸಾಲವನ್ನು ತೆಗೆದುಕೊಂಡು ಹೊರದೇಶಕ್ಕೆ ಹೋಗಿ ಅರಾಮಾಗಿರುತ್ತಾನೆ ಎಂದರೆ ಏನು? ಅವನನ್ನು ನಮ್ಮ ದೇಶಕ್ಕೆ ತರಲು 3ವರ್ಷಗಳಿಂದ ಹೋರಾಡುತ್ತಿದ್ದೇವೆ. ಪಂಜಾಬ್ ಬ್ಯಾಂಕಿನಿಂದ 13 ಸಾವಿರ ಕೋಟಿ ಸಾಲವನ್ನು ನೇರವಾಗಿ ತೆಗೆದುಕೊಂಡು ನೀರವ್ ಮೋದಿ ಹೊರದೇಶಕ್ಕೆ ಹೋಗಿದ್ದಾನೆ, ಅವನನ್ನು ಹಿಡಿಯಲು ಸಾಧ್ಯವಾಗುತ್ತಿಲ್ಲ. ನಮ್ಮ ರೈತರು ಯಾರು ಯಾರಿಂದ ಹಣವನ್ನು ಕಳುವು ಮಾಡಿಲ್ಲ. ಹೌದು, ನಾವು ಸಾಲಗಾರರು, ನಿಮ್ಮಿಂದ ಸಾಲವನ್ನು ತೆಗೆದುಕೊಂಡಿದ್ದೇವೆ, ತಪ್ಪಿದೆ ಎಂದ ಮೇಲೂ ಸಹ ಈ ರೀತಿಯಾಗಿ ಅವರನ್ನು ಪರಿಗಣಿಸುವದು ಇದೆಯಲ್ಲ ಇದೂ ಸಹ ಪ್ರಭುತ್ವಕ್ಕೆ ಒಳ್ಳೆಯದಲ್ಲ. ನಾನು ಇಲ್ಲಿ ಬ್ಯಾಂಕ ಅಧಿಕಾರಿಗಳ ಮೇಲಾಗಲಿ ಅಥವಾ ಸರ್ಕಾರದ ಅಧಿಕಾರಿಗಳ ಮೇಲಾಗಲಿ ಆರೋಪ ಮಾಡುತ್ತಿಲ್ಲ. ನಮಗೆ ಪ್ರಭುತ್ವ ಮಾಡಿದಂತಹ ತಪ್ಪಿದೆ. ಇಲ್ಲಿ ರೈತರು ಬ್ಯಾಂಕುಗಳನ್ನು ಬೈಯುತ್ತಿದ್ದಾರೆ, ಬ್ಯಾಂಕುಗಳು ರೈತರನ್ನು ಬೈಯುತ್ತಿದ್ದಾರೆ. ಆದರೆ ಇಂತಹ ಸಂದರ್ಭದಲ್ಲಿ ಇವನ್ನೆಲ್ಲ ಮಾಡಿದ ಪ್ರಭುತ್ವವನ್ನು ನಾವು ಈಗ ಪ್ರಶ್ನಿಸಬೇಕಾಗಿದೆ. ನನ್ನ ದೃಷ್ಠಿಯಲ್ಲಿ ಕೃಷಿ ಎಂದರೆ ಸರಕು, ಉತ್ಪಾದನೆ ಅಥವಾ ಹಣ ಮತ್ತು ಲಾಭ ಎಂದು ಪರಿಗಣನೆಗೆ ತೆಗೆದುಕೊಂಡಿದ್ದು ದೊಡ್ಡ ತಪ್ಪು. ಹಾಗೆ ಮಾಡುವದಾದರೆ ನಮ್ಮ ದೇಶದಲ್ಲಿಯ ಕೃಷಿಗೆ ಪರಿಹಾರ ಸಿಗಲಿಕ್ಕಿಲ್ಲವೆಂದೆನಿಸುತ್ತದೆ. ಏಕೆಂದರೆ 2010ರಲ್ಲಿ 1 ಡಜನ್ ಆಲ್ಫೋನ್ಸ್ ಗೆ 200 ರೂಪಾಯಿ ಬೆಲೆಯಿತ್ತು, ಇವತ್ತಿಗೂ 1 ಡಜನ್ ಆಲ್ಫೋನ್ಸ್ ಬೆಲೆ 200 ರೂಪಾಯಿಇದೆ. 10 ವರ್ಷಗಳ ಹಿಂದೆ ನಾನು ಆಲ್ಫೋನ್ಸ್ ಬೆಳೆದಾಗ ನನಗೆ ಮುಂದೆ 10 ವರ್ಷಗಳ ನಂತರ ಇದರ ಬೆಲೆ ಜಾಸ್ತಿಯಾಗಬಹುದೆಂಬ ಆಸೆ ಇತ್ತು, ಆದರೆ ಹಾಗೆ ಆಗಿಲ್ಲ. ಅದಕ್ಕೆ ಬೇರೆ ಬೇರೆ ಕಾರಣಗಳಿವೆ. ಆವಾಗ 300 ಗಿಡಗಳಿದ್ದವು, ಇವತ್ತು 3000 ಗಿಡಗಳಿವೆ. ಇಲ್ಲಿಯೂ ಸಹ ನಮ್ಮನ್ನು ಹಾದಿ ತಪ್ಪಿಸಲಾಗುತ್ತಿದೆ. ನಮ್ಮ ನೀತಿಗಳು ನಮ್ಮನ್ನು ಹಾಗೆ ಮಾಡುತ್ತಿವೆ. ಮೂಲ ಸಾಂಪ್ರಾದಾಯಿಕ ಕೃಷಿ ಈ ಎಲ್ಲಾ ಸಮಸ್ಯೆಗಳಿಂದ ಹೊರಗಿತ್ತೇನೋ ಎಂದು ನನಗೆ ಅನಿಸುತ್ತಿದೆ. ಒಂದು ದೊಡ್ಡ ಜೋಳದ ತೆನೆಯಾಯಿತೆಂದರೆ, ಬಹುಶಃ ಇದರಲ್ಲಿ 10 ಜನ ರೊಟ್ಟಿಯನ್ನು ತಿನ್ನುತ್ತಿದ್ದರು. ನಾವು ಇದರಲ್ಲಿ 50 ರೂಪಾಯಿಯ ನೋಟನ್ನು ಕಾಣಬೇಕೆಂದು ತೋರಿಸಲು ಪ್ರಾರಂಭಿಸಿದೆವು. ಇದರಿಂದ ರೈತರಿಗೆ ಹೌದು ಈ ಜೋಳವನ್ನು ಮಾರಿ ಹಣವನ್ನು ಪಡೆಯಬೇಕಲ್ಲಾ, ಹಣ ಮಾಡಬೇಕಲ್ಲಾ ಎಂಬ ಆಸೆ ಬರುವುದು ಸಹಜ. ನಮ್ಮ ಹಳ್ಳಿಯಲ್ಲಿ 2500 ಲೀಟರ ಹಾಲು ಉತ್ಪಾದನೆಯಾಗುತ್ತಿದೆ, 4ಸಾವಿರ ಜನಸಂಖ್ಯೆ ಇರುವಂತಹ ಒಂದು ಹಳ್ಳಿ, 2500 ಲೀಟರ್ ಹಾಲು ಉತ್ಪಾದನೆಯಾಗಿತ್ತದೆ. ಆದರೆ ನಮ್ಮ ಊರಿನಲ್ಲಿಯ 14 ವರ್ಷದ ಕೆಳಗಿನ ಎಲ್ಲಾ ಹೆಣ್ಣುಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಕೃಷಿಯನ್ನು ನಾವು ಕೇವಲ ಸಾಲ ಮತ್ತು ಉತ್ಪಾದನೆಯೆಂದು ನೋಡಲಾಗುವದಿಲ್ಲ, ಹೀಗ್ಯಾಕೆ, ಹಾಗಾದರೆ ರೈತರಿಗೆ ಬದುಕುವ ಹಕ್ಕಿಲ್ಲವಾ? ಅವನಿಗೆ ಮಕ್ಕಳಿಲ್ಲವಾ ? ಅವನ ಮಕ್ಕಳು ದೊಡ್ಡವರಾಗಬಾರದಾ ? ಇವೆಲ್ಲ ಸಮಸ್ಯೆಗಳು ಅದರ ಜೊತೆಯಲ್ಲಿವೆ. ರೈತರಿಗೆ ಪರ್ಯಾಯವಾಗಿ ಆರೋಗ್ಯ, ಶಿಕ್ಷಣದಂತಹ ಮೂಲಭೂತ ವ್ಯವಸ್ಥೆಗಳನ್ನು ಕೊಡಿಸಿದರೆ ಕೃಷಿ ಕ್ಷೇತ್ರ ಇಷ್ಟು ಕೆಟ್ಟದಾಗಿರುತ್ತಿರಲಿಲ್ಲ ಮತ್ತು ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬರುತ್ತಿರಲಿಲ್ಲ. ನನ್ನ ಪ್ರಕಾರ ಅನೇಕ ಕಾರಣಗಳಿಗಾಗಿ ರೈತರ ಸಾಲ ಮನ್ನಾ ಆಗಲೇಬೇಕು. ಮೊದಲನೆಯದು ಈ ದೇಶದ ಆರ್ಥಿಕ ಪರಸ್ಥಿತಿಯನ್ನು ಕಾಪಾಡಿದವ ರೈತ. ಏಕೆ ಇಲ್ಲಿಯವರೆಗೂ ಒಬ್ಬ ಡಾಕ್ಟರನ ಮಗ ರಸ್ತೆಗೆ ಬಂದು ಬಿದ್ದಿಲ್ಲ, ಏಕೆ ಇಲ್ಲಿಯವರೆಗೂ ಒಬ್ಬ ಇಂಜಿನೀಯರ್‌ನ ಮಗ ರಸ್ತೆಗೆ ಬಂದು ಬಿದ್ದಿಲ್ಲ, ಇವೆಲ್ಲವು ಪ್ರಭುತ್ವದ ಪ್ರಶ್ನೆಗಳು. ರೈತನ ಮಗನೇ ಎಲ್ಲದಕ್ಕೂ ಇದಕ್ಕೆ ಹೊಣೆಯಾಗಬೇಕು. ಇಂತಹ ಪ್ರಶ್ನೆಗಳು ಬರುತ್ತವೆ. ದೇಶದ ಆರ್ಥಿಕತೆಯ ಜೊತೆಗೆ ಪರಿಸರ ಸಮತೋಲನವನ್ನು ಮಾಡುತ್ತಿರುವದು ನಮ್ಮ ರೈತನೆ. ಒಂದು ಲೇಖನ ಓದುತ್ತಿದ್ದೆ, ಅದರಲ್ಲಿ ಹೊಲಸು ತೆಗೆಯುವದಕ್ಕೆ ಪುಣೆ ಮಹಾನಗರ ಪಾಲಿಕೆಯು ಹೆಚ್ಚುವರಿಯಾಗಿ 300 ಕೋಟಿಯಿಂದ 600 ಕೋಟಿಯವರೆಗೆ ಖರ್ಚು ಮಾಡಬೇಕಾಗುತ್ತದೆ. ಏಕೆ ಹೀಗಾಯಿತು ಎಂದು ಒಬ್ಬರು ಅಧ್ಯಯನ ಮಾಡುತ್ತಾರೆ, ಪರಿಸರದ ಅಸಮತೋಲನದಿಂದ ಅಲ್ಲಿಯ ಕಾಗೆಗಳು 6-8 ತಿಂಗಳು ಅಲ್ಲಿಂದ ಬೇರೆಡೆ ಹೋಗಿರುತ್ತವೆ. ಆ ಕಾಗೆಗಳು ಅಲ್ಲಿ ಇಲ್ಲದಿರುವದರಿಂದ ಅಲ್ಲಿ ಅಷ್ಟು ಮೊತ್ತದ ಹೊಲಸು ಜಾಸ್ತಿ ಶೇಖರಣೆಯಾಗುತ್ತದೆ. ಈ ಪರಿಸರವನ್ನು ಸಮತೋಲನ ಮಾಡುವವರು ಯಾರು? ಬ್ಯಾಂಕಗಳು ಮಾಡುತ್ತವೆಯಾ? ಪ್ರಭುತ್ವ ಮಾಡಕ್ಕಾಗುತ್ತಾ? ರೈತನೇ ಮಾಡಬೇಕು.

ಒಂದು ವರ್ಷ ನಾವು ನಮ್ಮೂರಿನಲ್ಲಿ ಜೋಳ ಬೆಳೆಯದಿದ್ದರೆ ಗುಬ್ಬಿಹಿಂಡು ಬೇರೆಡೆ ಹೊರಟು ಹೋಗುವವು, ಗಿಳಿಹಿಂಡು ಬೇರೆಡೆ ಹೋಗುವವು, ಹಾವು, ಚೋಳು, ಪಕ್ಷಿ ಬೇರೆಡೆ ಹೋಗುವವು. ಅರಣ್ಯೀಕರಣದ ಕುರಿತು ಮಾತನಾಡುವದಾದರೆ, ಒಂದು ಹೊಲದಲ್ಲಿ 10 ಗಿಡಗಳನ್ನು ರೈತನು ನೆಡಲು ವ್ಯವಸ್ಥೆಯಾದರೆ 2 ವರ್ಷಗಳಲ್ಲಿ ಶೇ9 ರಷ್ಟು ಅರಣ್ಯವು ಬೆಳವಣಿಗೆಯಾಗುತ್ತದೆ. ಇದು ಸರ್ಕಾರಕ್ಕೆ ಏಕೆ ಹೊಳೆಯುತ್ತಿಲ್ಲ ? ಸರ್ಕಾರಕ್ಕೆ ಇದು ಬೇಕಾಗಿಲ್ಲ. ಧಾರವಾಡ ಜಿಲ್ಲೆಯಲ್ಲಿ 8 ವರ್ಷಕ್ಕೆ ಸತ್ತುಹೋಗುವ ಸಿಂಗಾಪೂರ ಚೆರ್ರಿ ಎಂಬ ಗಿಡವನ್ನು ನೆಟ್ಟಿದ್ದಾರೆ, ಇದರ ಆಯುಸ್ಸು ಕೇವಲ 8 ವರ್ಷಗಳು ಮಾತ್ರ, ಗುಬ್ಬಿ ಚೆರ್ರಿ ತಿನ್ನುತ್ತವೆ ಎಂದು ಈ ಗಿಡಗಳನ್ನು ನೆಟ್ಟಿದ್ದಾರೆ, ನನ್ನ ಪ್ರಶ್ನೆ ಗುಬ್ಬಿ ಕೇವಲ ಚೆರ್ರಿಯನ್ನು ತಿನ್ನುತ್ತವೆಯಾ ? ಬೇರೆ ಗಿಡಗಳನ್ನು ನೀವು ಏಕೆ ನೆಡುತ್ತಿಲ್ಲ. ನಾವು ರೈತರ ಸಾಲ ಮನ್ನಾ ಮಾಡಿ ಎಂದರೆ ರೈತರು ಸೋಮಾರಿಗಳಾಗುತ್ತಾರೆ ಎನ್ನುವ ಉತ್ತರ ಬರುತ್ತದೆ, ಅದಕ್ಕೆ ಹೇಳುವದು ಬನ್ನಿ 2 ಎಕರೆ ತೆಗೆದುಕೊಂಡು ಕೃಷಿ ಮಾಡಿ ನೋಡಿ ಆಗ ನೀವೆ ಹೇಳುವಿರಿ ಹೌದಪ್ಪ ರೈತರು ಹೇಳುವದು ಸತ್ಯವೆಂದು. ಸವದತ್ತಿಯಲ್ಲಿ ಒಬ್ಬ ಯುವಕ ಸಾಫ್ಟವೇರ್ ಕಂಪನಿಯ ಹುದ್ದೆ ಬಿಟ್ಟುಬಂದು ಕೃಷಿಯನ್ನು ಮಾಡುತ್ತಿದ್ದಾನೆ, ನಾನು ಆತಂಕ ಗೆದ್ದ ಅನ್ನದಾತ ಕಾರ್ಯಕ್ರಮದಲ್ಲಿ ಅವನ ಸಂದರ್ಶನವನ್ನು ಮಾಡಿದೆ, ಆಗ ಅವನು ಹೇಳಿದ ಸರ್ ನಾನು 80ಸಾವಿರ ರೂಪಾಯಿಗಳ ಪಗಾರ ತೆಗೆದುಕೊಳ್ಳುತ್ತಿದ್ದೆ, ಈಗ ನಾಲ್ಕು ತಿಂಗಳಾಯಿತು ನಾನು ಬದನೆಗಿಡ, ಟೊಮೇಟೊ ಹಚ್ಚಿದ್ದೇನೆ, ಇದಕ್ಕೆ ನಾನು 15-20 ಸಾವಿರರೂಪಾಯಿಗಳ ಖರ್ಚನ್ನು ಮಾಡಿದ್ದೇನೆ, ಊರ ಜನರೊಂದಿಗೆ ಇದೇ ಹೊಲದಲ್ಲಿ ರಾತ್ರಿ ಕಳೆದಿದ್ದೇನೆ, ನನಗೆ ಇದುವರೆಗೆ ಇದರಿಂದ ಬಂದ ಆದಾಯ 2800 ರೂಪಾಯಿಗಳು ಮಾತ್ರ. ಒಬ್ಬ ಪ್ರೊಫೆಸರ್ ಒಂದು ತಿಂಗಳಿಗೆ 1.5 ಲಕ್ಷ ರೂಪಾಯಿಗಳ ಪಗಾರ ತೆಗೆದುಕೊಳ್ಳುವನು, ನನ್ನಂತ ಜರ್ನಲಿಸ್ಟ್ ತಿಂಗಳಿಗೆ 40 ಸಾವಿರ ರೂಪಾಯಿಗಳ ಪಗಾರವನ್ನು ತೆಗೆದುಕೊಳ್ಳುತ್ತೇನೆ. 1 ಎಕರೆ ಜಮೀನಿರುವ ರೈತನ ವಾರ್ಷಿಕ ಆದಾಯ ಗೋವಿನಜೋಳದ್ದು 16 ಸಾವಿರ ರೂಪಾಯಿಗಳು. ಬ್ಯಾಂಕರಗಳ ಶ್ರಮ ಮತ್ತು ರೈತನ ಶ್ರಮವನ್ನು ತುಲನೆ ಮಾಡಿ ನೋಡಿ ಮತ್ತು ಅವರ ಜೀವನ ಮಟ್ಟವನ್ನೂ ಸಹ ತುಲನೆ ಮಾಡಿ ನೋಡಿ, ರೈತರ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ನಾನು ನೇರವಾಗಿ ರೈತರೊಂದಿಗೆ ಮುಖಾಮುಖಿಯಾಗಿರುವದರಿಂದ ಮತ್ತು ನಾನು ಹಳ್ಳಿಯಲ್ಲೇ ಇರುವುದರಿಂದ ನನಗೆ ಇದರ ಬಗ್ಗೆ ಗೊತ್ತಿದೆ. ಮೊನ್ನೆ ಉಸ್ತುವಾರಿ ಸಚಿವರು ಬಂದಾಗ ಮನೆ ಬಿದ್ದಿದೆ ಎಂದಾಗ 10 ಸಾವಿರ ರೂಪಾಯಿಗಳ ಪರಿಹಾರ ಮಾತ್ರ ಸಾಧ್ಯ 10 ಸಾವಿರ ರೂಪಾಯಿಗಳನ್ನು ಕೊಡಿ ಎಂದು ಸೂಚಿಸಿದರು, ಆದರೆ ನಾವು ಹೇಳುವದು ಕೇವಲ 10 ಸಾವಿರ ರೂಪಾಯಿಗಳ ಪರಿಹಾರವನ್ನು ಕೊಟ್ಟು ಕೈತೊಳೆದುಕೊಳ್ಳುವದಕ್ಕಿಂತ ನೀವು ಕೊಡುವ 10 ಸಾವಿರ ರೂಪಾಯಿಗಳಿಂದ ಅವನ ಮನೆ ರಿಪೇರಿ ಸಾಧ್ಯವೇ ಎನ್ನುವದನ್ನು ಸಹ ನೋಡಿ, ನಿಮಗೆ 90 ಸಾವಿರ ರೂಪಾಯಿಗಳ ವರೆಗೆ ಕೊಡುವ ಅವಕಾಶವಿದೆ. ಆದ್ದರಿಂದ ಮಾನವೀಯತೆ ದೃಷ್ಟಿಯಿಂದ ರೈತರನ್ನು ಮತ್ತು ಎಲ್ಲರನ್ನು ನೋಡಿ. ಈ ಹಿನ್ನೆಲೆಯಲ್ಲಿ ಇಲ್ಲಿ ಸಂಪೂರ್ಣವಾಗಿ ವ್ಯವಸ್ಥೆಯನ್ನು ಬದಲಾವಣೆಮಾಡದ ಹೊರತು ಈ ಸಾಲ ಮನ್ನಾ ಏಕೆ ಮಾಡುವಿರಿ ಎಂಬ ಪ್ರಶ್ನೆ ಮಾಡುವ ಹಕ್ಕು ಯಾರಿಗೂ ಇಲ್ಲ ಎಂಬುದು ನನ್ನ ಅನಿಸಿಕೆ. ಡಿಸಿಎಚ್ 32 ಅಂದ ಕ್ಷಣವೇ ನನಗೆ ಪಾಟೀಲ್ ಸರ್ ನೆನಪಾದರು, ಅವರು ಡಿಸಿಎಚ್ 32 ನಮಗೆ ಅವತ್ತು ಕೊಡದೇ ಹೋಗಿದ್ದರೆ ನಾನು ಇಲ್ಲಿ ಕುಳಿತು ಇವತ್ತು ಮಾತನಾಡಲು ಸಾಧ್ಯವಿರುತ್ತಿರಲಿಲ್ಲವೆಂದು ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಈ ತರಹದ ಸಂಶೋಧನೆಗಳನ್ನು ಎಲ್ಲರೂ ಶೇ100 ರಷ್ಟು ಒಪ್ಪಿಕೊಳ್ಳಲು ತಯಾರಿದ್ದಾರೆ. ಆದರೆ ಸಂಶೋಧನೆಯ ಹೆಸರಿನಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಕೀಟನಾಶಕಗಳು ಮತ್ತು ಗೊಬ್ಬರದ ಹೆಸರಿನಲ್ಲಿ ಲೂಟಿ ಮಾಡುವದರ ಕುರಿತು ರೈತರಲ್ಲಿ ಅರಿವು ಮೂಡಿಸದೇ ಹೋದರೆ ರೈತರು ಇದರಿಂದ ಹೊರಬರಲು ಸಾಧ್ಯವಿಲ್ಲ. 1980 ರ ನಂತರ ಯಾರು ಈ ಜಗತ್ತಿಗೆ ಬಂದಿದ್ದಾರೆಯೋ ಅವರಲ್ಲಿ ಬಹಳಷ್ಟು ಜನ ಹೊಲಗಳಿಗೆ ಕಾಲಿಟ್ಟಿಲ್ಲ. ನಾವು ದನಕಾಯಲು ಹೋಗುತ್ತಿದ್ದೆವು, ಮನೆಯಲ್ಲಿ ನಮ್ಮ ಹಿರಿಯರು ಕೃಷಿ, ರೈತರು ಮತ್ತು ಪಕ್ಷಿಗಳ ಕುರಿತು ವಿವರಿಸಿ ಹೇಳುತ್ತಿದ್ದರು. ಈಗ ಎಂತಹ ಪರಿಸ್ಥಿತಿ ಬಂದಿದೆ ಎಂದರೆ ಮುಂದಿನ 10 ವರ್ಷಗಳಲ್ಲಿ ಉಚಿತವಾಗಿ ಗೊಬ್ಬರ ಕೊಡುತ್ತೇನೆ, ಬೀಜಗಳನ್ನು ಕೊಡುತ್ತೇನೆ, ಉಚಿತವಾಗಿ ಸಾಲ ಮಾಡುತ್ತೇನೆಂದರೂ ಸಹ ಕೃಷಿ ಮಾಡಲು ಜನರು ಸಿಗುವದಿಲ್ಲ. ಮುಂದೆ ಕೃಷಿ ಕ್ಷೇತ್ರಕ್ಕೆ ಹಿನ್ನಡೆಯಾದರೆ ನಾವು ಏನು ಬೆಳೆಯುವದು, ಏನು ತಿನ್ನುವದು. ಆದ್ದರಿಂದ ನಾವು ನಮ್ಮ ದೇಶಿ ಜ್ಞಾನ ಪರಂಪರೆ ಇದೆ ಮತ್ತು ನಮ್ಮ ವೈಜ್ಞಾನಿಕ ನಿಲವುಗಳ ಮೂಲಕ ಯಾವರೀತಿಯಲ್ಲಿ ಮುಂದುವರೆಯಬಹುದು ಎಂದು ಸರಿಯಾಗಿ ವಿಚಾರಮಾಡಿದರೆ ರೈತರ ಸಾಲದ ಕುರಿತು ಪರ್ಯಾಯ ಮತ್ತು ಪರಿಹಾರ

ಇವೆರಡಕ್ಕೂ ಉತ್ತರ ಸಿಗಬಹುದು. ಕೃಷಿಯನ್ನು ಉಳಿಸಿಕೊಳ್ಳುವ ಕೊನೆಯ ದಿನಗಳು ಸರ್ಕಾರದ ಮುಂದಿದೆ. ರೈತರ ಸಾಲವಂತೂ ಮನ್ನಾ ಆಗಲೇಬೇಕು. ರೈತರ ಕುಟುಂಬಗಳು ಮತ್ತು ಅವರ ಮಕ್ಕಳು ನಮ್ಮ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ಹೇಳುತ್ತಾ ನಾನು ನನ್ನ ಮಾತನ್ನು ಸಮಾಪ್ತಿಗೊಳಿಸುತ್ತೇನೆ.

**ಶ್ರೀ ಮಾಲತೇಶ ಪರಪ್ಪನವರ,** *ಅಧ್ಯಕ್ಷರು, ರೈತಸಂಘ ಮತ್ತು ಹಸಿರು ಸೇನೆ, ಹಾನಗಲ್ ತಾಲ್ಲೂಕ್*

ಕೃಷಿ ವಿಜ್ಞಾನಿಗಳೇ ಹಾಗೂ ರೈತರೇ, ನನ್ನ ಸುಮಾರು 48 ವರ್ಷಗಳ ಅನುಭವವನ್ನು ನಾನು ದಾಖಲೆ ಸಮೇತವಾಗಿ ಇಲ್ಲಿ ಹೇಳಲು ಬಯಸುತ್ತೇನೆ. ಆದ್ದರಿಂದ ಸಭಾಧ್ಯಕ್ಷರು 5 ನಿಮಿಷಗಳ ಕಾಲ ಹೆಚ್ಚಿನ ಅವಕಾಶವನ್ನು ನನಗೆ ಇಲ್ಲಿ ಒದಗಿಸಿಕೊಡಬೇಕಾಗಿ ಕೋರಿಕೊಳ್ಳುತ್ತೇನೆ. ನಾನು ಕೃಷಿ ಮಾಡುವದೊಂದಿಗೆ ನನ್ನ ಮನೆಯಲ್ಲಿ ನನ್ನ ಮಕ್ಕಳು ಸಹ ಕೃಷಿಯನ್ನೇ ಮಾಡುತ್ತಾರೆ, ಬೇರೆ ಉದ್ಯೋಗವನ್ನು ಮಾಡುವದಿಲ್ಲ. ಇದರಿಂದ ಕೃಷಿಯಲ್ಲಿರುವ ನೋವು ಮತ್ತು ನಲಿವಿನ ಸಂಪೂರ್ಣವಾದ ಅರಿವು ನನ್ನಲ್ಲಿದೆ. ನನ್ನ ಅನಿಸಿಕೆ ಪ್ರಕಾರ ರೈತರನ್ನು ಇಂದಿನ ಈ ಪರಿಸ್ಥಿಗೆ ತಂದಿರುವಂತಹವು ಸರ್ಕಾರದ ಯೋಜನೆಗಳು, ಆದರೆ ಏಕೆ ಎಂಬ ಪ್ರಶ್ನೆ ಬರುತ್ತದೆ. ಸರ್ಕಾರಗಳು ರೈತರಿಗೆ ಉಪಕರಣಗಳನ್ನು ಕೊಡಬೇಕೆಂದು ಹೇಳುತ್ತವೆ, ಉಪಕರಣಗಳನ್ನು ಉತ್ಪಾದಿಸುವ ಉದ್ಯಮಿಗಳನ್ನು ಸರ್ಕಾರಗಳು ಉದ್ಧಾರ ಮಾಡುತ್ತವೆಯೇ ಹೊರತು ರೈತರನ್ನಲ್ಲ. ಉಪಕರಣಗಳನ್ನು ರೂಪಿಸುವ ಬೆಲೆಗಿಂತ ಅರ್ಧದಷ್ಟು ಬೆಲೆ ಮನ್ನಾ ಎಂದು ಹೇಳುತ್ತಾರೆ, ಆದರೆ ಅದು ಯೋಗ್ಯವಾದ ವಸ್ತು ಇರುವುದಿಲ್ಲ. ಒಳ್ಳೆಯ ಅಂದರೆ ಬಹಳದಿನ ಬಾಳಿಕೆ ಬರುವ ವಸ್ತುವನ್ನು ಖರೀದಿ ಮಾಡಬೇಕೆಂದರೆ ರೈತನಿಗೆ ಯೋಗ್ಯವಾದ ಬೆಲೆ ಸಿಗುತ್ತಿಲ್ಲ, ಆದ್ದರಿಂದ ಸರ್ಕಾರವು ರೈತ ಖರೀದಿ ಮಾಡಿದ ರಸೀದಿಯನ್ನು ಹಾಜರುಪಡಿಸಿದಾಗ ನೇರವಾಗಿ ಹಣವು ಆ ರೈತನ ಖಾತೆಗೆ ಹೋಗುವ ವ್ಯವಸ್ಥೆಯನ್ನು ಮಾಡಿದ್ದರೆ ಆಗ ರೈತನಿಗೆ ಲಾಭ ದೊರೆಯುತ್ತಿತ್ತು. ಜೊತೆಗೆ ನಾವು ಇವತ್ತಿನವರೆಗೂ ಸ್ವಾಮಿನಾಥನ್ ವರದಿಯ ಬಗ್ಗೆ ಕೇಳುತ್ತಾಬಂದಿದ್ದೇವೆ, 1 ರೂಪಾಯಿಗೆ 1.50 ರೂಪಾಯಿ ಕೊಡಬೇಕು ಎಂಬುದನ್ನು ಕೇಳುತ್ತಾಬಂದಿದ್ದೇವೆ, ಸರ್ಕಾರವು ಘೋಷಣೆ ಮಾಡಿದೆ ಎಂದು ಸಂತೋಷಪಟ್ಟಿದ್ದೇವೆ. ಸರ್ಕಾರ ಏನು ತಿಳಿಯದ ವ್ಯಕ್ತಿಯನ್ನು ತಂದು ಕುಳ್ಳಿಸಿ ಇದನ್ನು ಘೋಷಣೆ ಮಾಡಿ ಎಂದು ಮಾಡಿಸುವದು ಸಾಮಾನ್ಯವಾಗಿದೆ, ಘೋಷಣೆ ಮಾಡಿದ ಯೋಜನೆಯು ಸತತವಾಗಿ ಅನುಷ್ಠಾನಕ್ಕೆ ಬರಬೇಕು. ಇದನ್ನು ಏಕೆ ಹೇಳುತ್ತೇನೆ ಎಂದರೆ ಇಂದು 1ಕ್ವಿಂಟಲ್ ಭತ್ತವನ್ನು ನಾವು ಅಕ್ಕಿಯಾಗಿ ಪರಿವರ್ತಿಸಿದರೆ ಅದು 70ಕೆಜಿ ಬರುತ್ತದೆ, ಭತ್ತದ ಬೆಲೆ 1600-1800 ರೂಪಾಯಿಗಳು ಕ್ವಿಂಟಲ್‌ಗೆ, ಅಕ್ಕಿಯ ಬೆಲೆ 1 ಕೆಜಿಗೆ 30 ರಿಂದ 40 ರೂಪಾಯಿಗಳು. ಇಲ್ಲಿ ದುಡಿದ ರೈತನಿಗೇನಾದರು ಇದರ ಬೆಲೆ ಸಿಗುತ್ತಾ? ಇಲ್ಲಿ ಲೆಕ್ಕಾಚಾರವನ್ನು ಹಾಕಿದಾಗ ಕಂಡುಬರುವದು ದುಡಿದ ರೈತನಿಗೂ ಲಾಭ ಸಿಗುವದಿಲ್ಲ ಮತ್ತು ಗ್ರಾಹಕನಿಗೂ ಲಾಭ ದೊರೆಯುವುದಿಲ್ಲ. ಪದಾರ್ಥಗಳನ್ನು ಕೂಡಿಟ್ಟು ಮಾರುವ ಉದ್ದಿಮೆದಾರರನ್ನು ಉದ್ಧಾರಮಾಡುವಂತಹ ಈ ಸರ್ಕಾರಗಳ ಯೋಜನೆಗಳು ಯೋಗ್ಯವಾ ? ರೈತ ಬೆಳೆದ ಯಾವುದೇ ಬೆಳೆಯನ್ನು ಸತತವಾಗಿ ಖರೀದಿಮಾಡುವಂತಹ ವ್ಯವಸ್ಥೆಯಾಗಬೇಕು. ವ್ಯಾಪಾರಸ್ಥರು ಯಾವರೀತಿಯಿಂದ ಯೋಜನೆಯನ್ನು ರೂಪಿಸಿಕೊಂಡಿದ್ದಾರೆಯೋ, ಅದೇ ರೀತಿಯಲ್ಲಿ ಹೋಬಳಿ ಮಟ್ಟದಲ್ಲಿ ಖಾಯಂ ಆಗಿ ಖರೀದಿಸುವ ವ್ಯವಸ್ಥೆಯಿರಬೇಕು, ಆ ಬೆಳೆಯನ್ನು ಉದ್ದಿಮೆದಾರರು ಸರ್ಕಾರದಿಂದ ಖರೀದಿಮಾಡಿಕೊಂಡು ಹೋಗಿ ಮಾರುವಂತಹ ವ್ಯವಸ್ಥೆಯನ್ನು ತರಬೇಕು. ಅಂದರೆ ಕಾನೂನು ಭದ್ರವಾಗಬೇಕು ಆಗ ಮಾತ್ರ ರೈತರಿಗೆ ನ್ಯಾಯಯುತವಾದ ಬೆಲೆ ದೊರೆಯುತ್ತದೆ. ಸರ್ಕಾರಗಳು ರೈತರಿಗೆ ಸಮರ್ಪಕವಾದ ಕೃಷಿಮಾಡಲು ಕನಿಷ್ಠ 18 ತಾಸು ವಿದ್ಯುತನ್ನು ಎಲ್ಲಾಅ ರೈತರಿಗೆ ಒದಗಿಸಿ, ಉತ್ತಮವಾದ ನೀರಾವರಿ ಯೋಜನೆಗಳು, ಉತ್ತಮ ಗುಣಮಟ್ಟದ ಬೀಜಗಳು, ಗೊಬ್ಬರ ಒದಗಿಸುವದು ಮತ್ತು ರೈತ ಬೆಳೆದ ಎಲ್ಲಾ ಬೆಳೆಗಳು, ಹಾಲು, ತರಕಾರಿ, ಹಣ್ಣುಗಳಿಗೆ ಸರಿಯಾದ ಬೆಲೆಸಿಗುವ ವ್ಯವಸ್ಥೆಯಾಗಬೇಕು. ಆಗ ಮಾತ್ರ ಬೇಸಾಯ ಮಾಡುವ ರೈತನಿಗೆ ನ್ಯಾಯ ಸಿಗುವ ಸಾಧ್ಯತೆ ಇರುತ್ತದೆ. ಆಗ ಸಾಲ ಮನ್ನಾ ಮಾಡುವ ಪ್ರಮೇಯವೇ ಬರುವುದಿಲ್ಲ. ಆದರೆ ಪ್ರಕೃತಿ ವಿಕೋಪಕ್ಕೊಳಗಾಗಿ ಬೆಳೆಯು ಸಂಪೂರ್ಣವಾಗಿ ನಾಶವಾದಾಗ, ಅಂದರೆ ಅತೀವೃಷ್ಟಿ ಮತ್ತು ಅನಾವೃಷ್ಟಿಯ ಸಂದರ್ಭಗಳಲ್ಲಿ ಮಾತ್ರ ಬೆಲೆ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಲೇಬೇಕಾಗುತ್ತದೆ. ಇದು ರೈತ ಕೇಳುವ ಹಕ್ಕು ಮತ್ತು ಸರ್ಕಾರ ಮಾಡುವ ಕರ್ತವ್ಯವಾಗಿರುತ್ತದೆ ಎನ್ನುವದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಸ್ವಾಮಿನಾಥನ್ ವರದಿಯ ಪ್ರಕಾರ ಸರ್ಕಾರ ಯೋಜನೆಯನ್ನು ಜಾರಿಗೆತರಬೇಕು. ಇದು ನಿರಂತರವಾಗಿ ಹರಿಯುವ ನೀರಿನಂತ ವ್ಯವಹಾರವು ಮತ್ತು ಖರಿದಿ ಆಗುತ್ತಿರಬೇಕು. ಆಗ ಮಾತ್ರ ದೇಶದ ರೈತರಿಗೆ ನಿಜವಾದ ನ್ಯಾಯ ಸಿಗಲು ಸಾಧ್ಯ.

**ಶ್ರೀ ಶಂಕರಪ್ಪಾ ಅಂಬಲಿ,** *ಕಾರ್ಯದರ್ಶಿಗಳು, ರೈತಸೇನಾ, ಕರ್ನಾಟಕ*

ಇಂದಿನ ಸಭೆಯ ಅಧ್ಯಕ್ಷರು, ಸಿ.ಎಮ್.ಡಿ.ಆರ್. ಸಂಸ್ಥೆಯ ಮುಖ್ಯಸ್ಥರು, ತಜ್ಞರು ಮತ್ತು ಎಲ್ಲಾ ರೈತ ಮುಖಂಡರಿಗೆ ವಂದಿಸುತ್ತಾ, ಇಂದಿನ ಪ್ರಮುಖ ವಿಷಯವಾದ ರೈತರ ಸಾಲ ಮನ್ನಾದ ದುಷ್ಪರಿಣಾಮಗಳೇನು ಎನ್ನುವದರ ಕುರಿತು ವಿಚಾರ ಸಂಕಿರಣವನ್ನು ಇಲ್ಲಿ ಏರ್ಪಡಿಸಲಾಗಿದೆ. ಇದಕ್ಕೆ ಪೂರಕವಾಗಿ ನಾನು ಒಂದು ವಿಚಾರವನ್ನು ಹೇಳಬಯಸುತ್ತೇನೆ. ರೈತರು ಸಾಲಗಾರರಾದರು ಏಕೆ ? ಮತ್ತು ಸಾಲ ಮನ್ನಾ ಪ್ರಕ್ರಿಯೆಯು ಯಾವಗಿನಿಂದ ಪ್ರಾರಂಭವಾಯಿತು ? ಎನ್ನುವದರ ಕುರಿತು ಹೇಳಬಯಸುತ್ತೇನೆ. ಸ್ವಾತಂತ್ರ್ಯದ ನಂತರ ಈ ದೇಶದಲ್ಲಿ ಆಹಾರದ ಕೊರತೆ ಬಹಳ ಏರ್ಪಟ್ಟಾಗ ಪಂಚವಾರ್ಷಿಕ ಯೋಜನೆಗಳ ಮೂಲಕ ವೈಜ್ಞಾನಿಕ ಕೃಷಿಯತ್ತ ರಾಜ್ಯಸರ್ಕಾರ ಮತ್ತು ಕೇಂದ್ರ ಸರ್ಕಾರ ರೈತರನ್ನು ಬದಲಾವಣೆಗೊಳಿಸಿದರು. ಆ ವೈಜ್ಞಾನಿಕ ಕೃಷಿಯನ್ನು ಅಳವಡಿಸಿಕೊಳ್ಳುವ ಸಂದರ್ಭದಲ್ಲಿ ರೈತರಿಗೆ ಯಾವುದೇ ತಾಂತ್ರಿಕ ಜ್ಞಾನವು ಇರಲಿಲ್ಲ. ಧಿಡೀರ್ ಎಂದು ಯೋಜನೆಗಳು ಜಾರಿಗೆ ಬಂದವು, ಆಹಾರ ಉತ್ಪಾದನೆಯನ್ನು ಹೆಚ್ಚಿಸಬೇಕಾಗಿತ್ತು ಆ ನಿಟ್ಟಿನಲ್ಲಿ ಹೆಚ್ಚುವರಿಯಾಗಿ ಆಗಿನ ಆ ಯೋಜನೆಗಳನ್ನು ಅಳವಡಿಸಿಕೊಳ್ಳುತ್ತಾ ಬಂದು ಇವತ್ತು ಭೂಮಿಯಲ್ಲಿಯ ಫಲವತ್ತತೆಯು ನಾಶವಾಗಿದೆ, ಇನ್ನೊಂದು ಕಡೆ ನಾವು ಉತ್ಪಾದನೆಗೆ ಮಾಡುವಂತಹ ಖರ್ಚು ಹೆಚ್ಚಾಗಿದೆ, ಈ ಎಲ್ಲಾ ಖರ್ಚಿನಿಂದ ನಾವು ನಿರಂತರವಾಗಿ ಸಾಲಗಾರರಾಗುತ್ತಿದ್ದೇವೆ. ಇದಕ್ಕೆ ತಾಂತ್ರಿಕ ಸಲಹೆಗಳಿಲ್ಲ, ಜನರನ್ನು ಸಂಪೂರ್ಣವಾಗಿ ತರಬೇತಿಗೊಳಿಸುವ ಕಾರ್ಯವಾಗಿಲ್ಲ. ಈ ನಿಟ್ಟಿನಲ್ಲಿ ನಾವು ರೈತರು ಯಾವಮಟ್ಟಕ್ಕೆ ಬಂದಿದ್ದೇವೆಂದರೆ ಇಡೀ ದೇಶದಲ್ಲಿ ಇಂದು ನಿರುದ್ಯೋಗ ಸಮಸ್ಯೆ ತಾವು ಕಾಣಬಹುದು. ಯುವಕರು ನಿರುದ್ಯೋಗರಾಗಿ ಉಳಿಯುತ್ತಾರೆಯೇ ಹೊರತು ಯಾರೂ ಕೂಡ ಕೃಷಿಯ ಕಡೆ ಒಲವನ್ನು ತೋರುವದಿಲ್ಲ, ಇದನ್ನು ನಾವೆಲ್ಲ ಗಮನಿಸಬೇಕು. ಯುವಕರು ಕೃಷಿಕಡೆ ಒಲವು ತೋರದೆ ನಿರುದ್ಯೋಗಿಯಾಗಿಯೇ ಉಳಿಯುವದಕ್ಕೆ ಕಾರಣ ಎಂದರೆ ಕೃಷಿಯಿಂದ ನಾವು ಬದಕಲು ಸಾಧ್ಯವಿಲ್ಲ ಎನ್ನುವದೇ ಆಗಿದೆ. ಇಂದು ರೈತನು ಸಹ ಕೃಷಿ ನಾನು ಮಾಡಿದ್ದೇ ಸಾಕು, ನನ್ನ ಮಗನಿಗೆ ಬೇಡ, ಬೇರೆ ಏನಾದರು ಉದ್ಯೋಗ ಮಾಡಲಿ ಎನ್ನುವ ಮನಸ್ಥಿತಿಗೆ ಬಂದಿದ್ದಾನೆ. ಇದಕ್ಕೆ ಕಾರಣ ಕೃಷಿಯಲ್ಲಿ ಲಾಭವಿಲ್ಲ ಎನ್ನುವದು. ಇಂದು ನಾವೆಲ್ಲರೂ ಲೆಕ್ಕಾಚಾರವನ್ನು ಹಾಕುತ್ತೇವೆ, ಆಹಾರಕ್ಕಿಂತ ಹಣಕ್ಕೆ ಹೆಚ್ಚಿನ ಬೆಲೆಯನ್ನು ಕೊಟ್ಟಿದ್ದೇವೆ, ಅಂದರೆ ಆಹಾರ ಇಲ್ಲದಿದ್ದರೆ ನಡೆಯುತ್ತದ್ದೆ ಆದರೆ ಹಣವಿಲ್ಲದಿದ್ದರೆ ನಡೆಯುವುದಿಲ್ಲ ಎನ್ನುವ ಕಲ್ಪನೆ ಪ್ರತಿಯೊಬ್ಬರಲ್ಲಿದೆ. ಒಂದು ರೂಪಾಯಿಗೆ ಲೆಕ್ಕಾಚಾರ ಹಾಕುತ್ತೇವೆ ಆದರೆ ನಾಳೆ ನಮಗೆ ತಿನ್ನಲು ಆಹಾರ ಸಿಗುತ್ತದೆಯೋ ಇಲ್ಲವೋ ಎನ್ನುವದರ ಕುರಿತು ವಿಚಾರ ಮಾಡುವದಿಲ್ಲ. ಒಂದು ಉದಾಹರಣೆ ಹೇಳುತ್ತೇನೆ, ಎರೆಡು ವರ್ಷಗಳ ಹಿಂದೆ ಮದ್ರಾಸಿನಲ್ಲಿ ಪ್ರವಾಹ ಬಂದಾಗ ಒಬ್ಬ ದೊಡ್ಡ ಕೋಟ್ಯಾಧಿಪತಿ ಒಂದು ಕೊಳಚೆ ಪ್ರದೇಶದ 3 ಮಹಡಿ ಮನೆಯಲ್ಲಿ ಕೋಟ್ಯಾಂತರ ಹಣವು ಸಹ ಇತ್ತು ಅಲ್ಲಿ, ವಜ್ರ ವೈಢೂರ್ಯವಿತ್ತು, ಕೆಳಗೆ 3-4 ಕಾರುಗಳಿದ್ದವು, ಕೆಳಗಿನ ಮಹಡಿ ಮುಳಗಿತ್ತು, ಟಾವರ್‌ಗಳು ಸಿಗುತ್ತಿರಲಿಲ್ಲ, ಗಂಡ-ಹೆಂಡಿತಿ ಮತ್ತು ಒಂದು ಸಣ್ಣ ಮಗು ಇತ್ತು, ಇವನ ಮನೆಯ ಸುತ್ತಮುತ್ತಲಿನ ಗುಡಿಸಲಿನ ಜನ ತಮ್ಮ ಮನೆಯ ಸಾಮಗ್ರಿಗಳು ಹೋದರೆಹೋದವು ಎನ್ನುತ್ತಾ ಈಜುತ್ತಾ ಬಂದರು, ಆದರೆ ಕೋಟ್ಯಾದಿಪತಿ ತನ್ನ ಮೂರು ಮಹಡಿಯ ಸಂಪಾದನೆಯನ್ನು ನೆಚ್ಚಿಕೊಂಡು ಅಲ್ಲಿಯೇ ಕುಳಿತುಕೊಂಡ. ಅಂದಿನ ಸಂದರ್ಭದಲ್ಲಿ 3 ದಿನಗಳ ಕಾಲ ಅವನು ಹಸಿವೆಯನ್ನು ತಡೆದುಕೊಂಡ, ಆದರೆ ಸಣ್ಣ ಕೂಸು ತಡೆದುಕೊಳ್ಳಬೇಕಲ್ಲಾ, ಆಗ ಅವನು ಗುಡಿಸಲು ನಿವಾಸಿಗಳು ಸರ್ಕಾರ ಕೊಟ್ಟ ಆಹಾರದ ಪಾಕೇಟ್‌ಗಳನ್ನು ಹಿಡಿದುಕೊಂಡು ಬರುತ್ತಿದ್ದಾಗ 3ನೇ ಮಹಡಿಯ ಮೇಲಿಂದನೇ ಒದರುತ್ತಿದ್ದ ನನ್ನ ಸಣ್ಣ ಕೂಸಿಗೆ ತಿನ್ನಲು ನೀರಿಲ್ಲ, ಆಹಾರವಿಲ್ಲ ದಯವಿಟ್ಟು ಯಾರಾದರೂ ಕೊಟ್ಟು ಕಾಪಾಡಿರಿ ಎನ್ನುವ ಪರಸ್ಥಿತಿ ಆತನಿಗೆ ಬಂದೊದಗಿತ್ತು. ಅಂದರೆ ಹಣಕ್ಕಿಂತ ಆಹಾರಕ್ಕೆ ಪ್ರಾಮುಖ್ಯತೆ ಹೆಚ್ಚು ಎನ್ನುವದನ್ನು ಇದು ತೋರಿಸುತ್ತದೆ. ಇಂದು ನಾವು ಹಣಕ್ಕಿಂತ ಹೆಚ್ಚು ಆಹಾರ ಉತ್ಪಾದನೆಗೆ ಹೆಚ್ಚು ಒತ್ತು ಕೊಡಬೇಕಾಗಿದೆ. ಇಲ್ಲಿ ಸಾಕಷ್ಟು ತಜ್ಞರು ಇಲ್ಲಿಯವರೆಗೆ ತಮ್ಮ ವಿಷಯಗಳನ್ನು ಮಂಡಿಸಿದ್ದೀರಿ. ಇವತ್ತು ಜಿಡಿಪಿ ಎನ್ನುವದು ಕುಸಿಯುತ್ತಿದೆ, ಏಕೆ ಜಿಡಿಪಿ ಕುಸಿಯುತ್ತಿದೆ ಎನ್ನುವದು ಒಂದು ಪ್ರಶ್ನೆ, ಏಕೆಂದರೆ ಇವತ್ತು ಸರ್ಕಾರದ ಯೋಜನೆಗಳು ಇಂದು ಕೃಷಿ ಆಧಾರಿತ ಯೋಜನೆಗಳನ್ನು

ರೂಪಿಸಿದರೂ ಉದ್ದಿಮೆಗಳಿಗೆ ಹೆಚ್ಚು ಬಂಡವಾಳವು ಬರುತ್ತಿದೆ. ರಾಷ್ಟ್ರದ ಶೇ65 ರಷ್ಟು ಜನ ಕೃಷಿಕರಿದ್ದಾರೆ ಎಂದು ಹೇಳುತ್ತೇವೆ, ಆದರೆ ಶೇ70 ಬಂಡವಾಳವು ಉದ್ದಿಮೆಗಳಿಗೆ ಹೋಗುತ್ತದೆ, ಶೇ30 ರಷ್ಟು ಬಂಡವಾಳ ಮಾತ್ರ ಕೃಷಿಗೆ ಬರುತ್ತದೆ. ಇಲ್ಲಿ ಅಸಮತೋಲನವನ್ನು ನಾವು ಕಾಣಬಹುದು. ಸರ್ಕಾದ ಬಜೆಟ್‌ನಲ್ಲಿಯೂ ಕೂಡ ಕೃಷಿ ಯಾವರೀತಿಯಲ್ಲಿ ಪ್ರಾಮುಖ್ಯತೆಯನ್ನು ಕೊಡಬೇಕೋ ಅದನ್ನು ಕೊಟ್ಟಿಲ್ಲ. ಇವತ್ತು ಹಲವಾರು ಸಂಸ್ಕೃತಿಯೊಳಗೆ ಕೃಷಿಯೂ ಸಹ ಒಂದು ಸಂಸ್ಕೃತಿಯಾಗಿದೆ. ಈ ಸಂಸ್ಕೃತಿಯನ್ನು ಪ್ರಪಂಚಕ್ಕೆ ಹೇಳಿಕೊಟ್ಟ ದೇಶ ನಮ್ಮ ಭಾರತ. ಇಲ್ಲಿ ಒಳ್ಳೆಯ ಭೂಮಿಯಿದೆ, ನೀರಿದೆ, ಒಳ್ಳೆಯ ಹವಾಮಾನವಿದೆ, ಎಲ್ಲವಿದ್ದರೂ ಸಹ ನಾವು ಇಂದು ಸಾಲದ ಸುಳಿಗೆ ಸಿಲುಕುತ್ತಿದ್ದೇವೆ. ನಮ್ಮ ರೈತರ ಮಕ್ಕಳಿಗೆ ಗ್ರಾಮೀಣ ಪ್ರದೇಶದಲ್ಲಿ ಇವತ್ತು ಒಂದು ಕನ್ಯೆ ಸಿಗದ ಪರಿಸ್ಥಿತಿ ನಿರ್ಮಾಣವಾಗಿದೆ ಎಂಬುದು ಇವತ್ತು ಎಲ್ಲರಿಗೂ ಗೊತ್ತಿರುವ ವಿಷಯ. 10 ಕೂರಿಗೆ ಜಮೀನಿದೆ ಎಂದರೂ ಸಹ ಕನ್ಯೆ ಕೊಡಲು ಒಬ್ಬರೂ ಬರುವುದಿಲ್ಲ. ಅದೇ ಒಬ್ಬ ಸಿಪಾಯಿ ಕೆಲಸ ಮಾಡುತ್ತಾನೆಂದರೆ ಅವನಿಗೆ ಕನ್ಯೆಯನ್ನು ಕೊಡಲು ಮುಂದೆಬರುತ್ತಾರೆ, ಆ ಒಂದು ಮಟ್ಟಕ್ಕೆ ಪರಿಸ್ಥಿತಿ ಇಂದು ಬಂದಿದೆ. ಸಾಲ ಮನ್ನಾ ಎಂದಕ್ಷಣ ಏನೋ ಆಕಾಶವೇ ಕಳಚಿಬಿದ್ದಹಾಗೆ ಮಾತಾಡುತ್ತಾರೆ, ಏನೋ ದೊಡ್ಡ ದುರಂತ ಎನ್ನುವ ಹಾಗೆ ಮಾಡುತ್ತಾರೆ. ಒಂದೇ ತರಗತಿಯ ಜನ ಸಾಲಮನ್ನಾಕೆ ಹಣವನ್ನು ಕೊಡುವದಿಲ್ಲ, ಈ ಸಾಲ ಮನ್ನಾದಲ್ಲಿ ನಾವು ಶೇ65 ಕೃಷಿಕ ವರ್ಗವು ಸಹ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ತೆರಿಗೆಯನ್ನು ಸರ್ಕಾರಕ್ಕೆ ಭರಿಸಿರುತ್ತೇವೆ, ಇದರಲ್ಲಿ ನಮ್ಮದೂ ಪಾಲು ಇರುತ್ತದೆ, ಆ ಪಾಲನ್ನು ನಾವು ಮರಳಿ ಪಡೆಯುತ್ತೇವೆ. ಯೋಜನೆಯನ್ನು ರೂಪಿಸುವಂತವರು ಅವೈಜ್ಞಾನಿಕವಾಗಿ ಅದನ್ನು ರೂಪಿಸುವಾಗ ಪ್ರಜ್ಞಾವಂತ ನಾಗರಿಕನಿಗೆ ಇದು ಎಲ್ಲೋ ಹಣ ಲೂಟಿಯಾಗುತ್ತಿದೆ ಎಂಬ ಕೆಟ್ಟ ಆಲೋಚನೆಯು ಬರುವಂತ ಮಾಡಿದೆ. ಏಕೆಂದರೆ ಸರ್ಕಾರದ ಇಂದಿನ ಕ್ರೋಢಿಕೃತ ಆದಾಯದಲ್ಲಿ ನಮ್ಮೂ ಪಾಲಿದೆ, ನಾವೇನು ಪಾಲಿರದ ಜನರಲ್ಲ. ಇಲ್ಲಿ ಯಾರೋ ಕೊಟ್ಟಿರುವ ಹಣವನ್ನು ನಾವು ಪಡೆಯುತ್ತಿದ್ದೇವೆಂಬ ಪ್ರಚಾರವಾಗುತ್ತಿದೆ. ಸಾಲ ಮನ್ನಾ ಏಕೆ ಮಾಡಬೇಕೆಂದರೆ, ಕೆಲವು ಸಂದರ್ಭದಲ್ಲಿ ಈ ಹಿಂದಿನ ಇತಿಹಾಸವನ್ನು ನೋಡಬೇಕಾಗುತ್ತದೆ, ಶಿವಾಜಿ ಮಹಾರಾಜರ ಕಾಲದಲ್ಲಿ ನಿರಂತರವಾಗಿ 2-3 ವರ್ಷಗಳ ಕಾಲ ಬರಗಾಲದಂತಹ ಸಂದರ್ಭಗಳು ಬಂದಾಗ ಅಲ್ಲಿ ಎಲ್ಲಾ ರೀತಿಯ ತೆರಿಗೆಗಳನ್ನು ಮನ್ನಾ ಮಾಡಿರುವದು ಮತ್ತು ತಮ್ಮ ಖಜಾನೆಯಲ್ಲಿರುವಂತಹ ಪದಾರ್ಥಗಳನ್ನು ಜನರಿಗೆ ನೀಡುವದರ ಮೂಲಕ ರಕ್ಷಣೆಯನ್ನು ಮಾಡಿದ ವಿಷಯಗಳು ದಾಖಲಾಗಿವೆ. ಈಗ ನಾವು ಪ್ರತಿವರ್ಷ ಸಾಲ ಮನ್ನಾ ಮಾಡಿ ಎಂದು ಯಾರನ್ನು ಕೇಳಿಲ್ಲ, ಈ ಸಾಲ ಮನ್ನಾ ಯೋಜನೆಗಳು ಒಮ್ಮೊಮ್ಮೆ ಅಗ್ಗದ ಪ್ರಚಾರದ ಯೋಜನೆಗಳಾಗಿರುತ್ತವೆ. ಹೇಗೆಂದರೆ ಸಾಲ ಮನ್ನಾ ಘೋಷಣೆ ಮಾಡುತ್ತಾರೆ ನಂತರ ಅವೈಜ್ಞಾನಿಕವಾದ ಶರತ್ತುಗಳನ್ನು ಹಾಕುತ್ತಾರೆ. ಅವು ಸುಸ್ತಿ ಸಾಲ ಮಾತ್ರ ಮನ್ನಾ ಎಂದು ಹೇಳುವದು, ಅಂದರೆ ನಿರಂತರವಾಗಿ ನಿಜವಾಗಿ ಸಾಲವನ್ನು ಭರಿಸುತ್ತಾ ಬಂದವರಿಗೆ ಈ ಯೋಜನೆಗಳ ಲಾಭ ಇರುವುದಿಲ್ಲ. ಅಲ್ಲಿ ಯಾರು ಮೋಸ ಮಾಡುತ್ತಿರುತ್ತಾರೋ ಅವರಿಗೆ ಅನುಕೂಲವಾಗುವಂತಹ ಕಾರ್ಯಗಳು ಆಗುತ್ತವೆ. ಇಂತಹ ಬೆಳವಣಿಗೆಗಳ ಬಗ್ಗೆ ಸರ್ಕಾರದ ಗಮನವನ್ನು ಪ್ರತಿಯೊಬ್ಬರೂ ಸೆಳೆಯಬೇಕಾಗಿದೆ. ಯೋಜನೆ ಪ್ರಾಮಾಣಿಕವಾಗಿರಬೇಕು ಮತ್ತು ಪ್ರತಿಯೊಬ್ಬರಿಗೂ ತಲುಪಬೇಕು, ಈ ಯೋಜನೆಗಳಿಂದ ಒಂದು ಒಳ್ಳೆಯ ಪರಿಣಾಮವು ಬರಬೇಕು. ಕೃಷಿ ಇಲಾಖೆ ಎಂದರೆ ಒಂದೇ ಕೃಷಿ ಇಲ್ಲ, ಅರಣ್ಯ ಕೃಷಿ ಇದೆ, ಆಹಾರ ಉತ್ಪಾದನೆ ಕೃಷಿ ಇದೆ, ತೋಟಗಾರಿಗೆ ಕೃಷಿ ಇದೆ, ವಾಣಿಜ್ಯ ಬೆಳೆ ಕೃಷಿ ಇದೆ, ಈ ಒಂದು ಇಲಾಖೆಯಲ್ಲಿ ಸಾಕಷ್ಟು ಯೋಜನೆಗಳನ್ನು ತರಗತಿಗನುಗುಣವಾಗಿ ವಿಂಗಡನೆ ಮಾಡುವ ವ್ಯವಸ್ಥೆ ಇದೆ. ಈ ಎಲ್ಲ ಯೋಜನೆಗಳು ರೈತರಿಗೆ ಎಷ್ಟರ ಮಟ್ಟಿಗೆ ತಲುಪ್ಪಿವೆ, ಈ ಯೋಜನೆಗಳಿಂದ ರೈತರು ಎಷ್ಟು ಪ್ರತಿಶತ ಅಭಿವೃದ್ಧಿ ಹೊಂದಿದ್ದಾರೆ ಎಂಬುದನ್ನು ಮೌಲ್ಯಮಾಪನ ಮಾಡಿ ನೋಡುವುದಿಲ್ಲ. ಒಂದು ಯೋಜನೆಯನ್ನು ಜಾರಿಗೆತರುವುದಷ್ಟೇ ಮುಖ್ಯ ಹೊರತು ಅದರಿಂದ ಎಷ್ಟರಮಟ್ಟಿಗೆ ಅಭಿವೃದ್ಧಿ ಆಗಿದೆ ಎಂದು ಗಮನಹರಿಸುವದಿಲ್ಲ. ಸರ್ಕಾರಗಳು ರೈತರನ್ನು ಪ್ರಾಯೋಗಿಕ ವಸ್ತುಗಳನ್ನಾಗಿ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ರೈತರಿಗೆ ಸರ್ಕಾರಗಳು ಮಾಡುವ ನೀತಿನಿಯಮಗಳ ಬದಲಾವಣೆಯ ಕುರಿತು ಅಸಮಧಾನಗೊಂಡಿದ್ದಾರೆ. ಇವುಗಳನ್ನೆಲ್ಲ ತೊಡೆದುಹಾಕಬೇಕಾದರೆ ಸರ್ಕಾರದಲ್ಲಿ ಒಂದು ಸುಸ್ಥಿರವಾದ ಯೋಜನೆಯು ಇರಬೇಕಾಗುತ್ತದೆ. ಒಂದು ಯೋಜನೆ ಜಾರಿಗೆ ಮಾಡಿದರೆ ಅದನ್ನು ಕೊನೆಯವರೆಗೆ ಕಾಯುವ ವ್ಯವಧಾನ ಯಾವುದೇ ಸರ್ಕಾರಗಳಿಗೆ ಇಲ್ಲ. ರೈತರು ಖರ್ಚುಗಳನ್ನು ಹೇಗೆ ಮಾಡುತ್ತಾರೆ ಎಂದರೆ, ಕೃಷಿ ಉತ್ಪಾದನೆಗೆ ವ್ಯಯಿಸುವ ಖರ್ಚು ಅಷ್ಟೇ ಪರಿಗಣನೆ ಮಾಡುತ್ತೇವೆ, ಆದರೆ ರೈತ ಹೊಲಕ್ಕೆ ಊಟ ಮಾಡಿ ಹೋಗಬೇಕೊ ಅಥವಾ ಹಾಗೇ

ಹೋಗಬೇಕೊ, ರೈತನು ಸಹ ಊಟಮಾಡಿಯೇ ಹೋಗಬೇಕಾಗುತ್ತದೆ, ರೈತ ಹೊಲಕ್ಕೆ ನಾಲ್ಕು ಜನರನ್ನು ಕರೆದುಕೊಂಡು ಹೋಗುವಾಗ ವಾಹನವನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ, ವಾಹನದ ಖರ್ಚು ಬರುತ್ತದೆ. ಈಗ ವಯಸ್ಕರು ಮಾತ್ರ ಹೊಲದಲ್ಲಿ ದುಡಿಯುವುದಿಲ್ಲ, ಸಣ್ಣ ಸಣ್ಣ ಮಕ್ಕಳನ್ನು ಸಹ ಹೊಲದ ಕೆಲಸಕ್ಕೆ ಕರೆದುಕೊಂಡು ಹೋಗುತ್ತೇವೆ, ನಮ್ಮ ಹೊಲದ ಕೆಲಸಗಳಿಗೆ ಬೇರೆ ಕೇಲಸಗಳಿಗಿರುವಂತ ಸಮಯದ ಪರಿಮಿತಿ ಇರುವುದಿಲ್ಲ. ಅನಿಯಮಿತವಾದ ಸಮಯದಲ್ಲಿ ರೈತರು ನಿರಂತರವಾಗಿ ತಮ್ಮ ಜೀವನವನ್ನು ಅಪಾಯದಲ್ಲಿಟ್ಟು ಹೊಲದಲ್ಲಿ ದುಡಿಯುತ್ತಾರೆ, ಈ ರೀತಿಯ ಕೆಲಸಕ್ಕೆ ಕಾರಣ ನಮ್ಮ ಜೊತೆ ಮತ್ತೊಬ್ಬರನ್ನೂ ಸಹ ಬದುಕಿಸಬೇಕೆಂದು ಒಳ್ಳೆಯ ಉದ್ದೇಶದಿಂದ. ಹಣಕ್ಕೆ ಬಹಳ ಮಹತ್ವ ಬಂದಿದುದಕ್ಕೆ ಕಾರಣ 1990 ಗ್ಯಾಟ್ ಒಪ್ಪಂದ, ಮುಕ್ತ ಮಾರುಕಟ್ಟೆ ವ್ಯವಸ್ಥೆ ಬಂದ ನಂತರ ಅಸಹಾಯಕ ಸ್ಥಿತಿಯಲ್ಲಿರುವ ನಮ್ಮ ರೈತರು ವಿದೇಶಿ ಕಂಪನಿಗಳ ಜೊತೆ ಸ್ಪರ್ಧೆಮಾಡುವಲ್ಲಿ ಅಸಮರ್ಥರಾದರು. ಈ ಒಂದು ಮುಕ್ತ ಮಾರುಕಟ್ಟೆಯಲ್ಲಿ, ಬೇರೆ ಕಡೆಯಲ್ಲಿ ಆಹಾರ ಉತ್ಪಾದನೆ ಕಡಿಮೆ ಬೆಲೆಯಲ್ಲಿ ಸಿಗಬಹುದು, ಆ ಆಹಾರ ಉತ್ಪಾದನೆಯಿಂದ ನಾವು ಇಲ್ಲಿ ಸಂಪೂರ್ಣವಾಗಿ ಉದ್ದಿಮೆಯನ್ನು ಸ್ಥಾಪಿಸಿಕೊಂಡು ಇಲ್ಲಿ ಆಹಾರ ಉತ್ಪಾದನೆಯನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟರೆ ಮುಂದಿನ ದಿನಗಳಲ್ಲಿ 1 ರೂಪಾಯಿ ವಸ್ತುವಿಗೆ 1 ಸಾವಿರ ರೂಪಾಯಿ ವಿಧಿಸುವರು, ಆಗ ಆ ವಸ್ತುಗಳನ್ನೇ ತರುವಂತಹ ಒಂದು ಕೆಟ್ಟ ವ್ಯವಸ್ಥೆಯು ನಿರ್ಮಾಣವಾಗುತ್ತದೆ. ನಾವು ಆಹಾರ ಉತ್ಪಾದನೆಯಲ್ಲಿ ಮತ್ತೊಬ್ಬರ ಮೇಲೆ ಅವಲಂಬನೆಯಾಗುವಂತದು ಆಗಬಾರದು, ಆಹಾರ ಉತ್ಪಾದನೆಯು ನಿರಂತರವಾಗಿ ಇರುವ ಹಾಗೆ ನೋಡಿಕೊಳ್ಳಬೇಕಾಗಿದೆ. ಮತ್ತೊಂದು ಅಂಶವೆಂದರೆ ಸರ್ಕಾರದ ಯೋಜನೆಗಳಲ್ಲಿ ಈ ಒಂದು ಬೆಳೆಗಳನ್ನು ಯಾವರೀತಿಯಲ್ಲಿ ಬೆಳೆಯಬೇಕು ಎನ್ನುವ ಬೆಳೆ ಮಾದರಿಯ ಪ್ರಜ್ಞೆಯನ್ನು ರೈತರಲ್ಲಿ ಇದುವರೆಗೂ ಮೂಡಿಸಿಲ್ಲ. ಉದಾಹರಣೆಗೆ, ಇವತ್ತು ಹತ್ತಿಯನ್ನು ಇಷ್ಟೇ ಬೆಳೆಯಬೇಕು, ಆಹಾರಧಾನ್ಯವನ್ನು ಇಷ್ಟೇ ಬೆಳೆಯಬೇಕು ಎನ್ನುವ ಅರಿವು ಇಲ್ಲ. ಈ ಕುರಿತು ರೈತರಲ್ಲಿ ಸಂಪೂರ್ಣವಾಗಿ ಪ್ರಜ್ಞೆಯನ್ನು ಮೂಡಿಸುವಲ್ಲಿ ನಾವೆಲ್ಲ ವಿಫಲರಾಗಿದ್ದೇವೆ. ಏಕೆಂದರೆ ಇಂದು ಬಾಗಶಃ ರೈತರು ವಾಣಿಜ್ಯ ಬೆಳೆಗಳ ಬೆನ್ನುಹತ್ತಿದ್ದೇವೆ, ದುಡಿಯದೆ ಹಣಗಳಿಸಬೇಕೆಂಬ ಮನಸ್ಥಿತಿಯನ್ನು ಸರ್ಕಾರಗಳು ರೈತರಲ್ಲಿ ತರುತ್ತಿವೆ. ಈ ಹಿಂದೆ ಬ್ಯಾಂಕುಗಳಿರಲಿಲ್ಲ, ನಾವು ಹೊಲಗಳಲ್ಲಿ ದುಡಿಯುತ್ತಿದ್ದೆವು, ಸಾಲಗಾರರಾಗಿರಲಿಲ್ಲ. ಇಂದು ಬ್ಯಾಂಕುಗಳು ಹಲವಾರು ಯೋಜನೆಗಳನ್ನು ತಂದಿವೆ, ನಾವು ಸಾಲಗಳ ಸುಳಿಯಲ್ಲಿ ಸಿಲುಕಿಕೊಂಡಿದ್ದೇವೆ. ಸಂಪೂರ್ಣವಾದ ಸಾಲಮನ್ನಾವನ್ನು ಮಾಡಬೇಕು, ಕೇವಲ ತಮ್ಮ ರಾಜಕೀಯ ಕಾರಣಗಳಿಗಾಗಿ ಅರ್ಧಂಬರ್ಧ ಸಾಲವನ್ನು ಮನ್ನಾ ಮಾಡುವದರಿಂದ ರೈತನಿಗೂ ಉಪಯೋಗವಾಗುವದಿಲ್ಲ ಮತ್ತು ಸರ್ಕಾರದ ಆರ್ಥಿಕ ಪರಿಸ್ಥಿತಿಯು ಹಾಳಾಗುತ್ತದೆ. ಸರ್ಕಾಂದ ಆರ್ಥಿಕ ಪರಿಸ್ಥಿತಿಯ ಕುರಿತು ಸಹ ರೈತರು ಚಿಂತನೆಯನ್ನು ಮಾಡುತ್ತಿರುತ್ತಾರೆ, ರೈತರು ಎಂದೂ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಹಾಳಾಗಲಿ ಎಂದು ಬಯಸುವವರಲ್ಲ. ಆರ್ಥಿಕ ಸ್ಥಿತಿಗಳು ಸುಭದ್ರವಾಗಿರಬೇಕಾದರೆ ಸರ್ಕಾರದ ಯೋಜನೆಗಳು ಒಂದು ಒಳ್ಳೆಯ ಹಾದಿಯಲ್ಲಿರಬೇಕು, ನಿರಂತರವಾಗಿರಬೇಕು ಹಾಗೂ ಧೀರ್ಘಾವಧಿಯ ಯೋಜನೆಗಳಾಗಿರಬೇಕು. ಮೇಲಿಂದ ಮೇಲೆ ಕೃಷಿ ಕ್ಷೇತ್ರದ ಮೇಲೆ ಕೇವಲ ಪ್ರಯೋಗಾತ್ಮಕ ಕೆಲಸಗಳು ನಡೆಯುವದರಿಂದ ದೇಶಕ್ಕೆ ಒಳ್ಳೆಯದಾಗುವದಿಲ್ಲ. ಇನ್ನು ಕಾರ್ಪೋರೇಟ್ ಕಂಪನಿಗಳ ಸಾಲವನ್ನು ಕೇಂದ್ರ ಸರ್ಕಾರದ ಈ ಹಿಂದಿನ10 ವರ್ಷದ ಅವಧಿಯಲ್ಲಿ 13 ಲಕ್ಷ ಕೋಟಿಗಳಷ್ಟು ಮನ್ನಾ ಮಾಡಿದೆ, ಇತ್ತೀಚಿನ ಸರ್ಕಾರ ಕಳೆದ 4 ವರ್ಷಗಳಲ್ಲಿ 5 ಲಕ್ಷ 49 ಸಾವಿರ ಕೋಟಿ ಸಾಲವನ್ನು ಮನ್ನಾ ಮಾಡಿದೆ. ಕಳೆದ 3 ವರ್ಷಗಳಿಂದ ಸತತವಾದ ಬರಗಾಲ ಬಂದಿದೆ, ಇಲ್ಲಿ ಯಾವುದೇ ಒಂದು ಸರಿಯಾದ ಯೋಜನೆಗಳು ಇಲ್ಲ, ಹರಿಯುವ ನೀರಿನ ನೀರಾವರಿಯಿಂದ ಸಂಪೂರ್ಣವಾಗಿ ಭೂಮಿಯ ಫಲವತ್ತತೆಯನ್ನು ಕಳೆದುಕೊಂಡು ಅವೈಜ್ಞಾನಿಕ ಪದ್ಧತಿಯಿಂದ ಇಲ್ಲಿ ರೈತರು ಸಾಲಗಾರರಾಗಿದ್ದಾರೆ, ಆದ್ದರಿಂದ ಈಗ ಸಂಪೂರ್ಣವಾದ ಸಾಲ ಮನ್ನಾ ಮಾಡುವ ಅವಶ್ಯಕತೆಯಿದೆ. ಪಬ್ಲಿಕ್-ಪ್ರೈವೇಟ್-ಫಾರಮರ್ಸ್ (ಪಿ.ಪಿ.ಎಫ್) ಗಳು ಕೂಡಿಕೊಂಡು ರೈತರಲ್ಲಿ ಜಾಗೃತಿಯನ್ನು ಮೂಡಿಸಿ ಪ್ರತಿಯೊಬ್ಬರೂ ಜವಾಬ್ದಾರಿಯನ್ನು ತೆಗೆದುಕೊಂಡು ಕಾರ್ಯಕ್ರಮಗಳನ್ನು ಹಾಕಿಕೊಂಡಲ್ಲಿ ಇದು ಸಫಲವಾಗುವ ಸಾಧ್ಯತೆಯಿದೆ. ಸಂಸ್ಕೃತಿಗಳಲ್ಲಿ ಕೃಷಿ ಸಂಸ್ಕೃತಿಯನ್ನು ಹೇಳಿಕೊಟ್ಟಿದ್ದು ನಮ್ಮ ಭಾರತ ದೇಶ, ಆದ್ದರಿಂದ ಕೃಷಿಯನ್ನ ಕಡೆಗಣಿಸಿದರೆ ಮತ್ತು ರೈತರನ್ನು ಕಡೆಗಣಿಸಿದರೆ ದೇಶ ಎಂದೂ ಉದ್ಧಾರವಾಗಲ್ಲ ಎಂದು ಹೇಳುತ್ತಾ ನನ್ನ ಮಾತನ್ನು ಸಮಾಪ್ತಿಗೊಳಿಸುತ್ತೇನೆ.

**ಶ್ರೀ ಬಿ.ಎಮ್. ಹನಸಿ,** *ರೈತರು, ನವಲಗುಂದ*

ಈಗಾಗಲೇ ಸಾಕಷ್ಟು ತಜ್ಞರು ಮತ್ತು ರೈತ ಹೋರಾಟಗಾರರು ಇಲ್ಲಿ ಮಾತನಾಡಿದ್ದಾರೆ. ಇವರ ಅಭಿಪ್ರಾಯಗಳು ಮತ್ತು ಅನಿಸಿಕೆಗಳು ಸಾಕಷ್ಟು ಒಳ್ಳೆಯ ರೀತಿಯಲ್ಲಿವೆ. ವ್ಯವಸ್ಥೆಯಲ್ಲಿರುವ ಸಮಸ್ಯೆಯೆಂದರೆ ಯಾವುದೇ ಯೋಜನೆಗಳು ಸರಿಯಾಗಿ ಅನುಷ್ಠಾನವಾಗುವದಿಲ್ಲ, ಯೋಜನೆಗಳು ತಾಲೂಕ ಮಟ್ಟದಿಂದ ಕೆಳಗೆ ಮುಟ್ಟುವದಿಲ್ಲ ಅಂದರೆ ಗ್ರಾಮ ಮಟ್ಟದವರೆಗೆ ಹೋಗುವುದಿಲ್ಲ, ಆದರೆ ಹಣ ಮಾತ್ರ ಪೋಲಾಗಿ ಹೋಗುತ್ತದೆ. ಈ ಸಾಲ ಮನ್ನಾ ಯೋಜನೆ ಬಗ್ಗೆ 1-6-2018 ಕ್ಕೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳಿಗೆ ಒಂದು ಮನವಿ ಪತ್ರವನ್ನು ಈಗಾಗಲೇ ಕೊಟ್ಟಿದ್ದೇನೆ. ಅದರಲ್ಲಿ ರಾಜ್ಯದ ರೈತರು ಅತೀವೃಷ್ಟಿ-ಅನಾವೃಷ್ಟಿಯಿಂದ ಹಾಗೂ ಬೆಳೆದ ಬೆಳೆಗಳಿಗೆ ಯೋಗ್ಯವಾದ ದರ ಸಿಗದಿರುವದರಿಂದ ಸಾಲಗಾರರಾಗಿ ನಿಂತಿದ್ದಾರೆ. ಬೆಳೆದ ಬೆಳೆಗಳನ್ನು ಸಾರ್ವಜನಿಕರಿಗೆ ಶೇ3 ರಷ್ಟು ಕಡಿಮೆದರದಲ್ಲಿ ಮಾರಾಟ ಮಾಡುತ್ತಿದ್ದಾರೆ. 2011 ರಲ್ಲಿ ರಾಜ್ಯದ ರೈತರನ್ನು ಒಂದು ನಿಯೋಗದೊಂದಿಗೆ ಕರೆದುಕೊಂಡು ನವದೆಹಲಿಗೆ ಹೋಗಿದ್ದೆವು, ಅಲ್ಲಿ ಸ್ವಾಮಿನಾಥನ ಆಯೋಗದ ಎಮ್.ಎಸ್.ಪಿ.ಯನ್ನು ಮಂಜೂರು ಮಾಡಿಸಲು ರಾಷ್ಟ್ರಮಟ್ಟದ ರೈತರ ನಿಯೋಗದೊಂದಿಗೆ ಹೋಗಿದ್ದೆವು, ಆಂಧ್ರ ಪ್ರದೇಶದ ಕೆಂಗಲ್ ರೆಡ್ಡಿಯೆನ್ನುವ ಒಬ್ಬ ರಾಷ್ಟ್ರಮಟ್ಟದ ರೈತ ಸಂಘಟನೆಯ ಒಕ್ಕೂಟದ ಸಂಘಟಕರು ನಮ್ಮನ್ನು ಪ್ರಧಾನ ಮಂತ್ರಿಗಳು ಮತ್ತು ಮಂತ್ರಿಗಳ ಜೊತೆ ಭೇಟಿ ಮಾಡಿಸಿದರು. ಅದರ ಜೊತೆ ನಾವು ನಮ್ಮ ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದ ಶ್ರೀ ಮೌಂಟೆಕ್ ಸಿಂಗ್ ಆಹ್ಲುವಾಲಿಯಾ ಅವರು ಹೇಳಿದರು, ಬೆಲೆ ನಿಗದಿಪಡಿಸಲು ಒಂದು ಉನ್ನತ ಮಟ್ಟದ ಸಮಿತಿ ಇದೆ, ಅದರಲ್ಲಿ ಪ್ರಧಾನ ಮಂತ್ರಿಗಳು, ಹಣಕಾಸು ಮಂತ್ರಿಗಳು, ಕೃಷಿ ಮಂತ್ರಿ ಮತ್ತು ವಾಣಿಜ್ಯ ಮಂತ್ರಿಗಳು ಇದ್ದಾರೆ, ಈ ಸಮಿತಿ ಒಪ್ಪಿಗೆ ಕೊಟ್ಟರೆ ಮಾತ್ರ ನಾವು ಬೆಳೆ ನಿಗದಿ ಮಾಡಬಹುದು. ಈ ವಿಷಯವನ್ನು ನೀವು ಸಂಸತ್ತಿನಲ್ಲಿ ಎತ್ತಿ ಮಾತನಾಡಬೇಕು, ನನ್ನ ಹತ್ತಿರ ಏಕೆ ತಂದಿದ್ದೀರಿ ಎಂದು ನಮ್ಮ ಜೊತೆ ಬಂದಿದ್ದ ಆಂಧ್ರ ಮತ್ತು ತಮಿಳುನಾಡಿನ ಕೆಲ ಸಂಸತ್ ಸದಸ್ಯರಿಗೆ ಕೇಳಿದರು. ಆದರೆ ಚುನಾಯಿತ ಪ್ರತಿನಿಧಿಗಳಿಗೆ ರೈತರ ಬೆಳೆಗಳ ಬೆಲೆ ವಿಷಯದಲ್ಲಿ ಮಾತನಾಡದಂತೆ ಪಕ್ಷದಿಂದ ವ್ಹಿಪ್ ಇರುತ್ತದೆ, ಆದ್ದರಿಂದ ಅವರು ಮಾತನಾಡುವುದಿಲ್ಲ. ಆದರೆ ರೈತರ ಬಗ್ಗೆ ಮೊಸಳೆ ಕಣ್ಣೀರು ಹಾಕುವದನ್ನು ಬಿಡುವುದಿಲ್ಲ. ನಮಗೆ ಸಾಲ ಮನ್ನಾಕ್ಕಿಂತ ಬೆಳೆದ ಬೆಳೆಗಳಿಗೆ ಯೋಗ್ಯವಾದ ಬೆಲೆಯ ಅವಶ್ಯಕತೆ ಇದೆ. ಎ.ಪಿ.ಎಮ್.ಸಿ.ಯಲ್ಲಿಯ ಏಜೆಂಟರು ಜನಪ್ರತಿನಿಧಿಗಳಿಗೆ ಆಮಿಷವನ್ನು ತೋರಿಸಿ ಸರ್ಕಾರದಿಂದ ಖರೀದಿ ಮಾಡದಂತೆ ಒತ್ತಡವನ್ನು ಹಾಕುತ್ತಾರೆ. ಇಂತಹ ಒಂದು ಉತ್ತಮವಾದ ಸಭೆಯನ್ನು ಆಯೋಜಿಸಿದಕ್ಕೆ ಧನ್ಯವಾದಗಳು ಎಂದು ಹೇಳುತ್ತಾ ನನ್ನ ಮಾತನ್ನು ಸಮಾಪ್ತಿಗೊಳಿಸುತ್ತೇನೆ.

**ಶ್ರೀ ಸಂಕರಗೌಡ ಆರ್. ಪಾಟೀಲ,** *ರೈತರು, ರಾಮದುರ್ಗ*

ಸಿ.ಎಮ್.ಡಿ.ಆರ್., ಸಂಸ್ಥೆಯಲ್ಲಿ ರೈತರ ಸಾಲ ಮನ್ನಾ ವಿಷಯದ ಕುರಿತು ವಿಚಾರಗೋಷ್ಠಿಯನ್ನು ಏರ್ಪಡಿಸಿರುವದು ಅತ್ಯಂತ ಮಹತ್ವಪೂರ್ಣವಾಗಿದೆ. ಈ ಒಂದು ವಿಚಾರಗೋಷ್ಠಿಯನ್ನು ಆಯೋಜಿಸಿರುವದಕ್ಕೆ ಸಿ.ಎಮ್.ಡಿ.ಆರ್. ಸಂಸ್ಥೆಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ರೈತರ ಸಾಲಮನ್ನಾ ವಿಷಯದ ಕುರಿತು ವಿವಿಧ ತಜ್ಞರು, ರೈತ ಪ್ರತಿನಿಧಿಗಳು ಸಾಕಷ್ಟು ಮಾರ್ಮಿಕವಾಗಿ ಮಾತನಾಡಿದ್ದಾರೆ. ಆದರೆ ರೈತರ ಕೂಗು ಸರ್ಕಾರಕ್ಕೆ ಕೇಳುತ್ತಿಲ್ಲವೇ ಎನ್ನುವದು ಪ್ರಶ್ನೆಯಾಗಿದೆ. ಈ ಸಮಸ್ಯೆಗೆ ಯಾವರೀತಿಯಾಗಿ ಸರ್ಕಾರವು ಪರಿಹಾರವನ್ನು ಕೈಗೊಳ್ಳಬೇಕಾಗಿದೆ ಎಂಬುದು ಹಾಗೂ ಕೂಡಲೆ ರೈತರನ್ನು ಬದುಕಿಸುವಂತಹ ಪರಿಹಾರಗಳು ತ್ವರಿತಗತಿಯಲ್ಲಿ ಸರ್ಕಾರದ ಕಿವಿಗಳಿಗೆ ಮುಟ್ಟಬೇಕಾಗಿದೆ. ರೈತರ ವಿಷಯವನ್ನು ರಾಜಕಾರಣಿಗಳು ರಾಜಕೀಯವಾಗಿ ತಮ್ಮ ಚದುರಂಗದಾಟಕ್ಕೆ ಬಳಸುತ್ತಿದ್ದಾರೆ, ಇದಕ್ಕೆ ಕಡಿವಾಣವನ್ನು ಹಾಕಬೇಕಾಗಿದೆ. ಸ್ವಾಮಿನಾಥನ್ ಆಯೋಗದ ಅಂಶಗಳು ಜಾರಿಯಾಗಬೇಕಾಗಿದೆ ಆದರೆ ಇದು ಏಕೆ ಜಾರಿಗೆ ಬರುತ್ತಿಲ್ಲವೆಂಬುದು ಪ್ರಶ್ನೆ. ರೈತರು ಬಳಸುವಂತಹ ವಸ್ತುಗಳ ಬೆಲೆಗಳು ಗಗನಕ್ಕೇರಿದೆ. ಆದರೆ ನಿಮಗೆಲ್ಲ ಗೊತ್ತು ರೈತರು ಬೆಳೆದ ಬೆಳೆಗಳಿಗೆ ಸರಿಯಾದ ದರಗಳು ಸಿಗುತ್ತಿಲ್ಲ. ರೈತರು ಖರೀದಿಸುವ ವಸ್ತುಗಳು ಮತ್ತು ತಾವು ಬೆಳೆದು ಮಾರುವ ವಸ್ತುಗಳ ಬೆಲೆಗಳಲ್ಲಿ ಸಾಕಷ್ಟು ಅಂತರವಿದೆ, ಆದ್ದರಿಂದ ತಜ್ಞರ ಸಲಹೆಗಳನ್ನು ತೆಗೆದುಕೊಂಡು ಬೆಲೆಗಳಲ್ಲಿಯ ವ್ಯತ್ಯಾಸ ಕಡಿಮೆಯಾಗುವ ವ್ಯವಸ್ಥೆಯನ್ನು ಮೊದಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾಡಬೇಕು. ಆಗ ಕೃಷಿ, ಬ್ಯಾಂಕುಗಳು ಮತ್ತು ಉದ್ದಿಮೆಗಳು ಎಲ್ಲಾ ಸರಿಯಾದ ರೀತಿಯಲ್ಲಿ

ಹೋಗುತ್ತವೆ. ಇದೀಗ ಶ್ರೀ ಅಂಬಲಿಯವರು ಹೇಳಿದಂತೆ ರಾಜಮಹಾರಾಜರ ಕಾಲದಿಂದಲೂ ಸಾಲಮನ್ನಾ ವ್ಯವಸ್ಥೆಯು ಜಾರಿಗೆ ಬಂದಿದೆ. ರೈತರ ಪರವಾಗಿದ್ದ ಶಿವಾಜಿ ಮಹಾರಾಜರಿಗೆ ರಾಜಶ್ರೀ ಪ್ರಶಸ್ತಿ ಮತ್ತು ರೈತಶ್ರೀ ಪ್ರಶಸ್ತಿ ಜನರು ಸಂತೋಷದಿಂದ ಕೊಟ್ಟರು, ಅಂತಹ ರಾಜಕಾರಣ ಇವತ್ತು ಕಾಣುತ್ತಿಲ್ಲ, ವೋಟ್ ಪಡೆದುಕೊಳ್ಳಲು ಒಂದು ಮಾತು ಪಡೆದ ನಂತರ ಇನ್ನೊಂದು ಮಾತು. ಇಂದಿನ ಸರ್ಕಾರಗಳು ಯಾವುದೇ ಇರಬಹುದು ಒಂದು ಯೋಜನೆಯನ್ನು ಘೋಷಣೆ ಮಾಡುವಾಗ ಸಂಪನ್ಮೂಲಗಳ ಕ್ರೋಢೀಕರಣದ ವ್ಯವಸ್ಥೆ ನಿಮಗೆ ಆಗದಿದ್ದಲ್ಲಿ ಆ ವಿಷಯವನ್ನು ಪ್ರಸ್ತಾವನೆ ಮಾಡಬಾರದು, ಇದಕ್ಕೆ ವ್ಯವಸ್ಥೆಯನ್ನು ಮಾಡಿಕೊಂಡು ಮಾಡಬೇಕು. ಆದರೆ ರೈತರ ಸಾಲಮನ್ನಾದ ವಿಷಯದಲ್ಲಿ ಅದು ಅತೀವೃಷ್ಟಿಯಿರಬಹುದು ಅಥವಾ ಬರಗಾಲವಿರಬಹುದು ಆ ಸಂದರ್ಭದಲ್ಲಿ ಸಾಲ ಮನ್ನಾ ಮಾಡಲೇಬೇಕು. ಆದರೆ ಇದಕ್ಕೆ ಒಂದು ಹಣದ ವ್ಯವಸ್ಥೆಯನ್ನು ಮಾಡಬೇಕು, ಸಾಲ ಮನ್ನಾಗೆ ಒಂದು ಕಾಯ್ದಿಟ್ಟ ನಿಧಿಯನ್ನು ಮಾಡಿಡಲೇಬೇಕು, ಅಂದರೆ ರೈತರು ಬದುಕಲು ಸಾಧ್ಯ ಇಲ್ಲವಾದಲ್ಲಿ ಅವರು ನೇಣುಹಾಕಿಕೊಂಡು ಸಾಯುವದು ಅನಿವಾರ್ಯವಾಗುತ್ತದೆ. ಸರ್ಕಾರದ ಮಟ್ಟದದಲ್ಲಿ ಬಹುತೇಕರಿಗೆ ರೈತರು ಕೃಷಿ ಸಾಲ ಮಾಡಿ ಯಾರು ಸಾಯುವುದಿಲ್ಲ ಎನ್ನುವ ಅಭಿಪ್ರಾಯವಿದೆ. ನಿಜವಾಗಿಯೂ ರೈತನು ಸಂಕಷ್ಟದಲ್ಲಿದ್ದಾನೆ ಆದರೆ ಇದಕ್ಕೆ ಕೇವಲ ಮೊಸಳೆ ಕಣ್ಣೀರು ಹಾಕುತ್ತಾರೆ. ನಿಜವಾಗಿಯೂ ಇವತ್ತಿನ ಸಭೆಯು ನನಗೆ ವೈಯಕ್ತಿಕವಾಗಿ ಬಹಳ ಸಂತೋಷ ತಂದಿದೆ, ಇಂತಹ ಚಿಂತನ-ಮಂಥನಗಳು ನಡೆಯಬೇಕು. ರೈತರ ಹೋರಾಟಗಳು ಸಾಕಷ್ಟು ಆಗಿವೆ, ಹಸಿರು ಶಾಲನ್ನು ಹಾಕಿಕೊಂಡು ಬಂದರೆ ನಮ್ಮನ್ನು ಇಂದು ಉಗ್ರಗಾಮಿಗಳ ಹಾಗೆ ನೋಡುತ್ತಾರೆ. ತಮಗೆ ಕೊನೆಯದಾಗಿ ಒಂದು ಉದಾಹರಣೆ ಹೇಳುತ್ತೇನೆ, ನನ್ನ ಮನೆಯಲ್ಲಿ 6 ಆಕಳುಗಳು ಇವೆ, ಅದರಲ್ಲಿ 2 ಆಕಳಲ್ಲಿ ಒಂದು ಆಕಳಲ್ಲಿ ಹಾಲು ದಪ್ಪ ಬರುತ್ತದೆ, ಇನ್ನೊಂದರಲ್ಲಿ ಬರಲ್ಲ. ನನ್ನ ಪತ್ನಿ ದಪ್ಪ ಹಾಲನ್ನು ಬೇರೆ ತೆಗೆದುಇಟ್ಟಿದ್ದಳು, ನಾನು ಏಕೆ ಅದನ್ನು ಬೇರೆ ಇಟ್ಟಿದ್ದಿಯಾ ಎಂದು ಕೇಳಿದಾಗ ಈ ದಪ್ಪ ಹಾಲಿನ ದರ ಜಾಸ್ತಿ ಇದೆ ಅದಕ್ಕೆ ಇದನ್ನು ಬೇರೆ ತೆಗೆದಿಟ್ಟಿದ್ದೇನೆ ಎಂದಳು. ಅಂದರೆ ನಾವು ಸಹ ಹಣದ ಲೆಕ್ಕಾಚಾರ ಹಾಕುವದನ್ನು ಈಗ ಪ್ರಾರಂಭಿಸಿದ್ದೇವೆ. ಇವತ್ತು ಸರ್ಕಾರಗಳಾಗಲಿ ಮತ್ತು ರಾಜಕೀಯ ಪಕ್ಷಗಳಾಗಲಿ ರೈತರನ್ನು ಕಿಂಚಿತ್ತೂ ಕಣ್ಣೆತ್ತಿ ನೋಡುತ್ತಿಲ್ಲ. ಇವರ ಕಣ್ಣು ತೆರೆಸುವ ಕೆಲಸವನ್ನು ನಾವೆಲ್ಲಾ ಕೂಡಿ ಮಾಡಬೇಕಾಗಿದೆ. ಈ ಸಂಸ್ಥೆಯು ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೆ ಎಂದು ತಿಳಿಸಲು ಸಂತೋಷವಾಗುತ್ತದೆ. ಈಗಾಗಲೆ ಮಹದಾಯಿ-ಕಳಸಾಬಂಡೂರಿ ಹೋರಾಟದಲ್ಲಿ ಒಂದು ಹೆಜ್ಜೆಯನ್ನಿಟ್ಟು ತೋರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ಎಲ್ಲಾ ರೈತರ ಪರವಾಗಿ ಈ ಸಂಸ್ಥೆಗೆ ನಾನು ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಮತ್ತೆ ಕೊನೆಯದಾಗಿ ರೈತರ ಖರೀದಿ ಕೇಂದ್ರಗಳನ್ನು 24/7 ತೆಗೆದಿಡಬೇಕು, ಸ್ವಾಮಿನಾಥನ್ ಆಯೋಗದ ಪ್ರಕಾರ ವೈಜ್ಞಾನಿಕ ಬೆಲೆ ನಿಗದಿಯಾಗಬೇಕು, ಬೆಲೆ ನಿಗದಿಮಾಡುವ ಸಮಿತಿಗಳಲ್ಲಿ ನಿಜವಾದ ರೈತರನ್ನು, ನಿಮ್ಮಂತಹ ತಜ್ಞರನ್ನು ಮತ್ತು ಇಂತಹ ಸಂಸ್ಥೆಯನ್ನು ಸೇರಿಸಿಕೊಂಡು ಉತ್ತಮವಾದ ಸಲಹೆ ಸೂಚನೆಗಳನ್ನು ಪಡೆದುಕೊಳ್ಳಬೇಕು. ಏಕೆಂದರೆ ಇಂದಿನ ಸಮಿತಿಗಳಲ್ಲಿ ಯಾರನ್ನೊ ಕರೆಸುವದು, ಅವರೊಂದು ಏನೋ ಸಲಹೆ ನೀಡುವದು ಮುಂದೆ ಅದು ಏನೋ ಆಗುವದು ಆಗುತ್ತಿದೆ. ಈ ರೀತಿಯಾಗಿ ಆಗಬಾರದು. ಇಂದಿನ ಪರಿಸ್ಥಿತಿಯಲ್ಲಿ ರೈತನಿಗೆ ಯಾರೂ ಸಾಲ ಕೊಡಲು ಮುಂದೆಬರುತ್ತಿಲ್ಲ, ಕನ್ಯೆಯನ್ನು ಕೊಡಲು ಬರುತ್ತಿಲ್ಲ, ರೈತ ಬದುಕುವದೇ ಕಷ್ಟಕರವಾಗಿದೆ, ಇದು ನಿಜವಾದ ಪರಿಸ್ಥಿತಿಯಾಗಿದೆ. ಆದರೆ ಸರ್ಕಾರಗಳು ಇದನ್ನು ಗಂಭೀರವಾಗಿ ತೆಗೆದುಕೊಂಡಿಲ್ಲದಿರುವದು ನನಗೆ ವೈಯಕ್ತಿಕವಾಗಿ ಬಹಳ ಖೇದವೆನಿಸುತ್ತಿದೆ ಎಂದು ಹೇಳುತ್ತಾ ಇಷ್ಟೊತ್ತು ನನಗೆ ಮಾತನಾಡಲು ಅವಕಾಶ ಕೊಟ್ಟ ನಿಮಗೆಲ್ಲ ಹೃತ್ಪೂರ್ವಕವಾದ ಧನ್ಯವಾದಗಳನ್ನು ಹೇಳುತ್ತಾ ನನ್ನ ಮಾತಿಗೆ ವಿರಾಮ ಹೇಳುತ್ತಿದ್ದೇನೆ.

**ಶ್ರೀ ಪ್ರಕಾಶ ಜಕಾತಿ, ಸಾಮಾಜಿಕ ಕಾರ್ಯಕರ್ತರು, ಧಾರವಾಡ**

ಮಾನ್ಯರೇ, ಪ್ರಸ್ತುತ ಪರಿಸ್ಥಿತಿಯಲ್ಲಿ ರೈತ ಸಾಲಮನ್ನಾ ಯೋಜನೆ ಕುರಿತು ಆಳವಾಗಿ ಚರ್ಚಿಸುವುದು ಅವಶ್ಯಕವಾಗಿದೆ. ಮೇಲಿಂದ ಮೇಲೆ ರೈತರ ಒಂದಿಲ್ಲೊಂದು ಸಮಸ್ಯೆಗಳು ದೇಶದ ಉದ್ದಗಲಕ್ಕೂ ಚರ್ಚೆಯಾಗುತ್ತಿರುತ್ತವೆ. ಅನ್ನದಾತರಾದ

ರೈತರ ಸಮಸ್ಯೆಗಳನ್ನು ಪರಿಹರಿಸಿ ಅವರನ್ನು ರಕ್ಷಿಸುವುದು ಸಮಾಜದ ಹಿತದೃಷ್ಟಿಯಿಂದ ಒಳ್ಳೆಯದೇ. ಹಲವಾರು ಸಮಸ್ಯೆಗಳಿಂದಾಗಿ ರೈತರು ತಮ್ಮನ್ನು ತಾವು ದುರಾದೃಷ್ಟರೆಂದು ಅಂದುಕೊಳ್ಳುವಂತಾಗಿದೆ.

ರೈತರು ಪ್ರಕೃತಿಯೊಂದಿಗೆ ಜೀವನ ಸಾಗಿಸುತ್ತಿರುವುದರಿಂದ ವಾತಾವರಣದಲ್ಲಾಗುವ ಬದಲಾವಣೆಗಳ ಅರಿವು ಹೆಚ್ಚಾಗಿರುತ್ತದೆ. ಅದರಂತೆ ನೆಲ, ಜಲ ಮತ್ತು ಪರಿಸರದ ಅರಿವು ರೈತರಿಗೆ ಇರುತ್ತದೆ. ಅಷ್ಟೇ ಅಲ್ಲದೇ ಯಾವ ಯಾವ ಭೂ ಹಿಡುವಳಿಗಳಲ್ಲಿ ಋತುಮಾನಗಳಿಗೆ ತಕ್ಕಂತೆ ಬೆಳೆಗಳನ್ನು ಬೆಳೆಯಬೇಕು ಎಂಬುವ ಸಂಪೂರ್ಣ ಜ್ಞಾನವನ್ನು ರೈತರು ಅನುಭವದಿಂದಲೇ ಪಡೆದಿರುತ್ತಾರೆ. ಮೊದಲು ಋತುಮಾನಗಳು ಕಾಲಕ್ಕನುಗುಣವಾಗಿ ಇರುತ್ತಿದ್ದವು. ಆದರೆ ಇಂದು ಪರಿಸರದಲ್ಲಿ ಹವಾಮಾನ ವೈಪರೀತ್ಯದಿಂದಾಗಿ ಸಾಕಷ್ಟು ಬದಲಾವಣೆಗಳಾಗುತ್ತಿವೆ. ಈ ಬದಲಾವಣೆಗಳಷ್ಟೇ ಅಲ್ಲದೇ ಇನ್ನೂ ಅನೇಕ ಅಂಶಗಳು ಅನ್ನದಾತರ ಮೇಲೆ ದುಷ್ಪರಿಣಾಮ ಬೀರುತ್ತಿವೆ. ಅವು ಯಾವುವೆಂದರೆ:-

1. ಹವಾಮಾನದ ವೈಪರೀತ್ಯದಿಂದಾಗಿ ಋತುಮಾನಗಳ ಮೇಲೆ ಪರಿಣಾಮ
2. ಮಾರುಕಟ್ಟೆ ರೈತನ ನಿಯಂತ್ರಣದಲ್ಲಿ ಇಲ್ಲದೇ ಇರುವುದು
3. ರೈತರ ಮೇಲೆ ದುಷ್ಪರಿಣಾಮ ಬೀರುವಂಥ ಅವೈಜ್ಞಾನಿಕ ಯೋಜನೆಗಳು

1. ಹವಾಮಾನದ ವೈಪರೀತ್ಯ:

ರೈತರಿಗೆ ಸೂಕ್ತ ಬೆಳೆಗಳಿಗೆ ಸೂಕ್ತ  ಪ್ರಮಾಣದ ಹಾಗೂ ಸಕಾಲಿಕ ಮಳೆಯ ಅವಶ್ಯಕತೆ ಇರುತ್ತದೆ.
ಉದಾಹರಣೆಗೆ, ಭತ್ತಕ್ಕೆ ಸಕಾಲಿಕ ಹೆಚ್ಚಿನ ಮಳೆಯ ಅವಶ್ಯಕತೆ ಇರುತ್ತದೆ. ಆದರೆ ಅತೀವೃಷ್ಟಿ, ಅನಾವೃಷ್ಟಿ ಹಾಗೂ ಅಕಾಲಿಕ ಮಳೆಯಿಂದಾಗಿ ರೈತರು ಬೆಳೆ ನಾಶದಿಂದ ಸಾಕಷ್ಟು ತೊಂದರೆ ಅನುಭವಿಸುವಂತಾಗಿದೆ. ಇಂತಹ ಸಂದಿಗ್ಧ ಪರಿಸ್ಥಿತಿಗಳು ಮೇಲಿಂದ ಮೇಲೆ ಉದ್ಭವಿಸುತ್ತಿವೆ. ಇಂತಹ ಪರಿಸ್ಥಿತಿಯನ್ನು ರೈತರು ಎದುರಿಸುವುದಾದರೂ ಹೇಗೆ? ಅಷ್ಟೇ ಅಲ್ಲದೇ ರೈತ ಸಮುದಾಯಕ್ಕೆ ಸಹಾಯಕಾರಿಯಾಗುವ ಜಾನುವಾರುಗಳ ರಕ್ಷಣೆಯಾದರೂ ಹೇಗೆ ಸಾಧ್ಯ? ಎಂಬ ಪ್ರಶ್ನೆಗಳು ಉದ್ಭವಿಸುತ್ತಿವೆ.

2. ಮಾರುಕಟ್ಟೆ:

ಮೇಲೆ ತಿಳಿಸಿದ ಸಮಸ್ಯೆಗಳ ಮಧ್ಯೆಯೂ ಬೆಳೆಗಳನ್ನು ರಾಶಿ ಮಾಡುವತನಕ ಅನೇಕ ಕಹಿ ಅನುಭವಗಳನ್ನು ರೈತರು ಎದುರಿಸಬೇಕಾಗುತ್ತದೆ. ಕೂಲಿ ದರ, ಉಪಕರಣಗಳ ಬಾಡಿಗೆ ಹಾಗೂ ಸಾಗಣೆ ಇತ್ಯಾದಿಗಳಿಗಾಗಿ ನಿಗದಿತ ವೆಚ್ಚಗಳನ್ನು ಮಾಡಬೇಕಾಗುತ್ತದೆ. ಅಷ್ಟೇ ಅಲ್ಲದೇ ಫಸಲನ್ನು ಮಳೆ ಮತ್ತು ಪ್ರಾಕೃತಿಕ ವಿಕೋಪಗಳಿಂದ ರಕ್ಷಿಸಬೇಕಾಗುತ್ತದೆ. ಇಷ್ಟೆಲ್ಲ ಮಾಡಿದ ನಂತರ ಫಸಲನ್ನು ಮಾರುಕಟ್ಟೆಗೆ ಒಯ್ಯುವಾಗ ಸೂಕ್ತ ಬೆಲೆ ದೊರೆಯುತ್ತದೆಂಬ ಭರವಸೆ ರೈತನಿಗೆ ಇರುವುದಿಲ್ಲ. ರೈತರು ತಮ್ಮ ಫಸಲಿಗೆ ಬೆಲೆ ಪಡೆಯುವುದು ಒಂದು ರೀತಿಯಲ್ಲಿ ಜೂಜಾಟದ ಪರಿಸ್ಥಿತಿಯಂತಿರುತ್ತದೆ ಎಂದರೆ ತಪ್ಪಾಗಲಾರದು. ಈ ಪರಿಸ್ಥಿತಿಗೆ ಜಾಗತಿಕ ಮಾರುಕಟ್ಟೆಯ ವೈಪರೀತ್ಯಗಳು ಹಾಗೂ ಸರ್ಕಾರಿ ಯೋಜನೆಗಳೇ ನೇರ ಕಾರಣ ಎನ್ನಬಹುದು.

3. ಅವೈಜ್ಞಾನಿಕ ಯೋಜನೆಗಳು:

ಸರ್ಕಾರವು ಅಭಿವೃದ್ಧಿಯ ಹೆಸರಿನಲ್ಲಿ ಸಾಕಷ್ಟು ಯೋಜನೆಗಳನ್ನು ಕೈಗೊಂಡಿದ್ದರೂ ಕೂಡ ಕೃಷಿ ಚಟುವಟಿಕೆಗಳಿಗೆ ಪ್ರಥಮ ಆದ್ಯತೆಯನ್ನು ನೀಡಿರುವುದಿಲ್ಲ. ಜಲ ಸಂರಕ್ಷಣಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿರುವುದಿಲ್ಲ. ಕೆರೆ -

ಭಾವಿಗಳನ್ನು ರಕ್ಷಿಸುವುದಕ್ಕೆ ಉನ್ನತ ಆದ್ಯತೆಯನ್ನು ನೀಡಿರುವುದಿಲ್ಲ. ಅದರಲ್ಲಿಯೂ ಬಹು ಮುಖ್ಯವಾಗಿ ಕೊಳವೆ ಭಾವಿಗಳನ್ನು ನಿಷೇಧಿಸುವ ಮತ್ತು ನಿಯಂತ್ರಿಸುವ ಕ್ರಮಗಳನ್ನು ಕೈಗೊಂಡಿರುವುದಿಲ್ಲ. ಏಕೆಂದರೆ ಕೊಳವೆ ಭಾವಿಗಳಿಂದಾಗಿ ಅಂತರ್ಜಲ ಮಟ್ಟವು ಕಡಿಮೆಯಾಗುವುದರಿಂದ ಕೃಷಿ ಚಟುವಟಿಕೆಗಳಿಗೆ ಅಪಾಯಕಾರಿ ಅಂಶವಾಗಿದೆ. ಕೃಷಿ ಚಟುವಟಿಕೆಗಳನ್ನು ರಕ್ಷಿಸುವ ಮೂಲಕ ಅನ್ನದಾತರನ್ನು ರಕ್ಷಿಸುವುದು ಅವಶ್ಯಕವಾಗಿದೆ. ಆದ್ದರಿಂದ ಸಾಲಮನ್ನಾ ಒಂದು ಸಲ ಮಾಡುವುದರಿಂದ ರೈತರಿಗೆ ಸಹಾಯಕಾರಿಯಾಗುವುದು. ಅದರಂತೆ ಅವಶ್ಯಕತೆ ಇದ್ದಾಗ ರೈತರ ಬೆಳೆಗಳನ್ನು ಸೂಕ್ತ ಬೆಲೆಗೆ ಕೊಂಡುಕೊಳ್ಳುವಂತಾಗಬೇಕು.

## ಕಾರ್ಯಕ್ರಮದ ಅಧ್ಯಕ್ಷರು

## ಪ್ರೊ. ಎಸ್.ಎ. ಪಾಟೀಲ,

*ಮಾಜಿ ಉಪ ಕುಲಪತಿಗಳು, ಕೃಷಿ ವಿಶ್ವ ವಿದ್ಯಾಲಯ, ಧಾರವಾಡ*

ತುಂಬಾ ಸಂತೋಷ, ಈ ಒಂದು ವಿಚಾರಗೋಷ್ಠಿಯಲ್ಲಿ ಎಲ್ಲರು ಭಾಗವಹಿಸಿ ತಮ್ಮ ತಮ್ಮ ಜ್ಞಾನ ಮತ್ತು ಅನಿಸಿಕೆಗಳನ್ನು ಹಂಚಿಕೊಂಡಿದ್ದೀರಿ. ಈ ಒಂದು ಸಂದರ್ಭದಲ್ಲಿ ನಾನು ಒಂದು ಉದಾಹರಣೆಯಲ್ಲಿ ಹೇಳಲು ಬಯಸುತ್ತೇನೆ, 1952ರಲ್ಲಿ ಶಾಸಕರ ಚುನಾವಣೆಗೆ 150 ರೂಪಾಯಿ ಖರ್ಚಾಗುತ್ತಿತ್ತು, ಈಗ 2016-17 ರ ಶಾಸಕರ ಚುನಾವಣೆಗೆ 20 ಕೋಟಿಗಳಷ್ಟು ಹಣ ಖರ್ಚಾಗುತ್ತಿದೆ. 20 ವರ್ಷಗಳ ಹಿಂದೆಯೇ ನಾನು ಪ್ರಜಾಪ್ರಭುತ್ವದ ಮೇಲೆ ಒಂದು ವ್ಯಾಖ್ಯಾನವನ್ನು ಮಾಡಿದ್ದೇನೆ, ಮೊದಲನೆಯದು ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ರೈತರಿಂದ ರೈತರಿಗೆ ಕಾರ್ಯಕ್ರಮ ಎನ್ನುವದು, ಎರಡನೆಯದು ರೈತರಿಗೆ ಪಿಎಚ್.ಡಿ ಪದವಿಯನ್ನು ಕೊಡುವಂತಹದ್ದು. ಇದರ ಉದ್ದೇಶ ರೈತರನ್ನು ಸಹ ಎಲ್ಲರಂತೆ ಸಮಾಜದ ಸಾಮಾನ್ಯ ವೇದಿಕೆಯ ಮೇಲೆ ತರುವದು ಆಗಿದೆ. ನನಗೆ ಇಲ್ಲಿ ಶ್ರೀ ಹೊಂಗಲ್ ಅವರು ಹೇಳಿದ ಒಂದು ವಿಚಾರ ಬಹಳ ಇಷ್ಟವಾಯಿತು, ಅದು ಯಾರು 15 ಜನ ರೈತರು ಬರಗಾಲದ ಸಮಯದಲ್ಲಿಯೂ ಸಹ ಉತ್ತಮವಾಗಿ ಕೃಷಿ ಮಾಡಿ ಸಾಧನೆ ಮಾಡಿದ್ದಾರೆ ಅಂತವರ ಹತ್ತಿರಹೋಗಿ ನಾವು ಕಲಿಯುವದು ಸಾಕಷ್ಟಿದೆ. ಇಂತಹ ವಿಚಾರಗಳ ಕುರಿತು ಹೆಚ್ಚಿನ ಕೆಲಸದ ಕುರಿತು ನಾನು ಸಿ.ಎಮ್.ಡಿ.ಆರ್. ಸಂಸ್ಥೆಯೊಡನೆ ಮಾತನಾಡುತ್ತೇನೆ. ಇಂತಹ ವಿಚಾರಗೋಷ್ಠಿಗಳು ಬಹಳ ಮಹತ್ವಪೂರ್ಣವಾದುದವು, ಏಕೆಂದರೆ ನಿಮ್ಮ ಜ್ಞಾನ, ನಿಮ್ಮ ಅನುಭವಗಳ ಮಾತು ಪಠ್ಯಪುಸ್ತಕಗಳಲ್ಲಿ ಸಿಗುವುದಿಲ್ಲ. ಪಠ್ಯಪುಸ್ತಕಗಳಲ್ಲಿ ನಿಮ್ಮ ಜ್ಞಾನಕ್ಕೆ ಮಹತ್ವ ಸಿಕ್ಕಿಲ್ಲ, ಅದಕ್ಕೆ ಯಾರೂ ಪ್ರಯತ್ನವನ್ನು ಮಾಡಿಲ್ಲ. ರೈತರ ಜ್ಞಾನ ಮತ್ತು ಅನುಭವವನ್ನು ಪಠ್ಯಕ್ರಮದಲ್ಲಿ ಸೇರಿಸುವಂತೆ ವಿನಂತಿಸಿ ನಾನು ಕೃಷಿ ವಿಶ್ವವಿದ್ಯಾಲಯದಲ್ಲಿ ಇದ್ದಾಗ ಬಹಳಷ್ಟು ಪತ್ರಗಳನ್ನು ಬರಿದಿದ್ದೆ. ನಾನು ಸಣ್ಣದೊಂದು ಉದಾಹರಣೆ ಹೇಳುತ್ತೇನೆ, ಶ್ರೀ ರಾಜಶೇಖರ ಎನ್ನುವವರು ವಿಜಾಪುರ ಜಿಲ್ಲೆಯ ಬ್ಯಾರಕಟ್ಟಿ ಎನ್ನುವ ಗ್ರಾಮದಲ್ಲಿದ್ದಾರೆ, ಅವರದು 2 1/2 ಎಕರೆ ಹೊಲವಿದೆ, 90 ನಿಂಬಿಹಣ್ಣಿನ ಗಿಡಗಳು ಇವೆ, 40 ಚಿಕ್ಕುಹಣ್ಣಿನ ಗಿಡಗಳಿವೆ, 265 ತೆಂಗಿನಗಿಡಗಳಿವೆ, ಅರ್ಧ ಎಕರೆ ತಮಗೆ ಬೇಕಾದ ಬೆಳೆಗಳನ್ನು ಬೆಳೆಯಲು ಇಟ್ಟಿದ್ದಾರೆ. 45 ವರ್ಷಗಳ ಹಿಂದೆ ಎಲ್ಲೆಲ್ಲಿ ಜಾತ್ರೆ ಆಯಿತೊ, ಸಂತೆ ಆಯಿತೊ ಅಲ್ಲಿ ಹೋಗಿ ಬಳಕೊಂಡು ಬಂದು ಹೊಲದಲ್ಲಿ ತುಂಬಿದ್ದಾರೆ, ಈಗ ಅದು ಮೊಣಕಾಲುತನಕ ಗೊಬ್ಬರ ಆಗಿ ಈಗ ರಷ್ಯನ್ ಕಾರ್ಪೆಟ್ ತರಹ ಆಗಿದೆ. ಅವರು ನನಗೆ ಹೇಳಿದರು, ಇಲ್ಲಿ ಮಳೆ ಆಗಬೇಕು ಅಂತ ಏನು ಇಲ್ಲ ಸರ್, ಮೋಡ ಆದರೆ ಸಾಕು ಈ ಗೊಬ್ಬರ ನೀರನ್ನು ಇಂಗಿಕೊಳ್ಳುತ್ತದೆ ಎಂದು, ನನ್ನ ವಾರ್ಷಿಕ ಆದಾಯ ನಿಂಬೆಗಿಡದಿಂದ 9ಲಕ್ಷ ರೂಪಾಯಿಗಳು, ಚಿಕ್ಕುಗಿಡದಿಂದ 4 ಲಕ್ಷರೂಪಾಯಿಗಳು, ತೆಂಗಿನಗಿಡದಿಂದ ನಾನು ಸಸಿ ಮಾಡುತ್ತಿದ್ದೇನೆ ಅದು ಸಹ 4 ಲಕ್ಷ ರೂಪಾಯಿಗಳು ಬರುತ್ತದೆ. ನನ್ನ ನಿವ್ವಳ ಆದಾಯ 15 ಲಕ್ಷರೂಪಾಯಿಗಳಿವೆ ಎಂದು. ಇದನ್ನು ಒಂದು ಮಾದರಿಯಾಗಿ ನಾವು ತೆಗೆದುಕೊಳ್ಳಬಹುದು. ನಾನು ಇಲ್ಲಿ ಹೇಳುವದು ಪಾರಂಪರಿಕ ಜ್ಞಾನ ನಮ್ಮ ವಿಜ್ಞಾನದಲ್ಲಿ ಸೇರಲಿಲ್ಲ ಎನ್ನುವದು, ಇದು ದುರದೃಷ್ಟಕರವಾದ ಸಂಗತಿಯಾಗಿದೆ. ನಮ್ಮ ವಿಶ್ವವಿದ್ಯಾಲಯದಲ್ಲಿ ಒಂದು ಪುಸ್ತಕವಿದೆ, ಪ್ಯಾಕೇಜ್ ಎಂಡ್ ಪ್ರಾಕ್ಟೀಸ್ ಫಾರ್ ಹೈಯರ್ ಯೀಲ್ಡ್ ಎಂದು, ಇಲ್ಲಿ ವಿಶ್ವವಿದ್ಯಾಲಯದಲ್ಲಿ ರೈತರೊಂದಿಗೆ ಚರ್ಚೆ ಮಾಡುವಾಗ ಬೆಳಗಾವಿ ರೈತರು ಹೇಳಿದರು, ಇಲ್ಲಾ ಸರ್ ನಿಮ್ಮದು ಎವರೇಜ್ ಯೀಲ್ಡ್ ಮತ್ತು ನಮ್ಮದು ಹೈಯರ್ ಯೀಲ್ಡ್ ಎಂದು, ಅವರು ಹೇಳಿದ್ದು ಸರಿಯಾಗಿದೆ. ನೀವು ಹೇಳಿದಂತೆ ಬೇಕಾದರೆ ನೀವು ಚಾಲೆಂಜ್ ಮಾಡಿರಿ ಎಂದು ಹೇಳಿದರು. ಅವರು ಹೇಳಿದ್ದರಲ್ಲಿ ತಪ್ಪಿಲ್ಲ, ಬದಲಾವಣೆಗಳನ್ನು ತಾಂತ್ರಿಕ ವಿಜ್ಞಾನಗಳಿಂದ ನಾವು ಒಪ್ಪಿಕೊಂಡಿದ್ದೇವೆ, ಆದರೂ ವಿಶ್ವವಿದ್ಯಾಲಯಗಳು ಈ ನಿಟ್ಟಿನಲ್ಲಿ ಕಣ್ಣುತೆರೆಯಬೇಕಾಗುತ್ತದೆ. ಈ ಪ್ರಯತ್ನವನ್ನು ನಾನು ಇದ್ದಾಗ ಸುಮಾರಾಗಿ ಮಾಡುತ್ತಾಬಂದಿದ್ದೆ. ಎಲ್ಲಿ ಸಬಲೀಕರಣ ಮಾಡಬಹುದು ಎನ್ನುವದನ್ನು ನಾವು ನೋಡಬೇಕಾಗುತ್ತದೆ, ಈಗ ಇಲ್ಲಿ ಚೈನಾದ ಉದಾಹರಣೆಯನ್ನು ಹೇಳಿದರು, ಹಳ್ಳಿಗಳಲ್ಲಿ ಗಂಡು ಮಕ್ಕಳಿಗೆ ಮತ್ತು ಹೆಣ್ಣುಮಕ್ಕಳಿಗೆ ಏನು ಉದ್ಯೋಗಗಳಿವೆ ಈಗ, ನಾವು ಒಕ್ಕಲುತನ ಮಾಡುತ್ತೇವೆ, ಬರಗಾಲಬಿದ್ದದು, ಸಾಲವಾಗಿದ್ದು ಎಲ್ಲಾ ವಿಷಯಗಳನ್ನು ಒಂದೆಡೆ ಇಟ್ಟು ಯೋಚನೆಮಾಡೋಣ, ಏನೇ ಆದರೂ ನಮ್ಮ ಮಕ್ಕಳಿಗೆ ಉದ್ಯೋಗಗಳು ಇವೆ. ನಾನು ಗುಲ್ಬರ್ಗದಲ್ಲಿ ತೊಗರಿಯನ್ನು ಬೆಳೆಯುತ್ತೇನೆ, 32 ದಿನ

ಮಾತ್ರ ಕೆಲಸವಾಗುತ್ತದೆ, ಆದರೆ ನಾವು 6ತಿಂಗಳೂ ಹೊಲಕ್ಕೆ ಹೋಗುತ್ತೇವೆ, ಅಲ್ಲಿ ಉದ್ಯೋಗವನ್ನು ಸೃಷ್ಟಿ ಮಾಡಬಹುದು. ರಾಜಮುಂಡ್ರೆಯಲ್ಲಿ ನಮ್ಮ ಕೃಷಿ ವಿಜ್ಞಾನ ಕೇಂದ್ರವು ಬಾಳೆಹಣ್ಣನ್ನು ಬೆಳೆದು 50ಲಕ್ಷ ರೂಪಾಯಿಗಳನ್ನು ಗಳಿಸಿದೆ. ಯಾವ ಯಾವ ರೀತಿಯಲ್ಲಿ ಕೃಷಿ ಮಾಡಬೇಕೆಂಬ ಕುರಿತಾಗಿ ಸಾಕಷ್ಟು ಜ್ಞಾನ ಮತ್ತು ಅನುಭವ ನಮ್ಮಲ್ಲಿದೆ. ಕೃಷಿ ಜಿಡಿಪಿ ಶೇ15 ಅಥವಾ ಶೇ14 ಅಂತಾ ಏನು ಹೇಳುತ್ತಾರೆ ಅದಕ್ಕೆ ಒಬ್ಬ ಕೃಷಿ ವಿಜ್ಞಾನಿಯಾಗಿ ನನ್ನ ವಿರೋಧವಿದೆ, ಕೃಷಿ ಉತ್ಪನ್ನಗಳನ್ನೇ ತೆಗೆದುಕೊಂಡು ಎಲ್ಲಾ ಪದಾರ್ಥಗಳನ್ನು ಮಾಡಲಾಗುತ್ತದೆ, ಉದಾಹರಣೆಗೆ ಈಗ ಹತ್ತಿ 1 ಕೆಜಿಗೆ 9ಮೀಟರ್ ಬಟ್ಟೆಯಾಗುತ್ತದೆ, ಬಟ್ಟೆ ಬೆಲೆ 150 ರೂಪಾಯಿಗೆ ಒಂದು ಮೀಟರ್ ಇದೆ, ಮುಂದೆ ಅಂಗಿಯ ಬೇಲೆ 1000 ರೂಪಾಯಿಯಿಂದ 3000 ರೂಪಾಯಿವರೆಗೆ ಇದೆ. ಆದರೆ ರೈತರಿಗೆ ಸಿಗುವದು 1 ಕೆಜಿ ಹತ್ತಿಗೆ 130 ರೂಪಾಯಿ ಹಣ. ಅಂದರೆ ಇಷ್ಟೊಂದು ಪ್ರಮಾಣದಲ್ಲಿ ಹಣವನ್ನು ನಮ್ಮ ಪದಾರ್ಥಗಳ ಮೇಲೆ ಗಳಿಸುತ್ತಾರೆ, ಅದಕ್ಕೆ ಇಲ್ಲಿ ರೈತರಿಗಾಗಿ ಯಾವುದಾದರೊಂದು ರೂಪದಲ್ಲಿ ತೆರಿಗೆಯನ್ನು ಹಾಕಬೇಕು. ಕೃಷಿಗೆ ಪೂರಕವಾಗಿ ಒಂದು ತೆರಿಗೆ ವ್ಯವಸ್ಥೆಯ ಬಗ್ಗೆ ನಾವೆಲ್ಲಾ ಯೋಚಿಸಬೇಕಾಗಿದೆ. ಉದ್ಯಮಿಗಳು ನಮ್ಮ ಪದಾರ್ಥವನ್ನು ತೆಗೆದುಕೊಂಡು ಲಾಭಗಳಿಸಿದ್ದಾರೆಂದರೆ ಅವರು ಅದಕ್ಕಾಗಿ ನಮಗೆ ವಾಪಸ್ಸು ಕೊಡಬೇಕಾಗುತ್ತದೆ. ಈ ಪದ್ಧತಿ ಬಂದರೆ ನಾವು ಉಳಿಯುತ್ತೇವೆ, ಬ್ಯಾಂಕುಗಳು ಉಳಿಯುತ್ತವೆ ಮತ್ತು ಜನಸಾಮಾನ್ಯರು ಉಳಿಯುತ್ತಾರೆ. ಇದರ ಕುರಿತು ಒಂದು ಕಾರ್ಯನೀತಿಯೇ ಆಗಬೇಕು, ಆದ್ದರಿಂದ ನಾವೆಲ್ಲರೂ ಸೇರಿ ಸ್ಪಷ್ಟವಾದ ಆಲೋಚನೆ ಮಾಡಬೇಕು. ಹೊರದೇಶಗಳಿಗೆ ಭಾರತದ ಬಗ್ಗೆ ಬಹಳ ಲಘುವಾಗಿ ಮಾತನಾಡುತ್ತಾರೆ, India is a country of mixture ಎಂದು ಹೇಳುತ್ತಾರೆ, ಮಿಕ್ಸ್ ಮಾಡುವದರಲ್ಲಿ ಭಾರತವು ಮೊದಲನೇ ಸ್ಥಾನದಲ್ಲಿದೆ, ಪಾಮ್ ಎಣ್ಣೆ ಜೊತೆ ಒಂದು ಒಳ್ಳೆಯ ಎಣ್ಣೆ ಸೇರಿಸಿ 90 ರೂಪಾಯಿಗಳಿಗೆ ಮಾರಾಟ ಮಾಡುತ್ತಾರೆ. ಇಂತವುಗಳಿಂದ ನಮ್ಮ ದೇಶದ ರಫ್ತು ಕುಂಠಿತಗೊಳ್ಳುತ್ತಿದೆ. ಕೃಷಿ ರಫ್ತು ಧನಾತ್ಮಕವಾಗಿದೆ ಆದರೂ ಸಹ ಇಂತಹ ವಿಚಾರಗಳನ್ನು ನಾವು ಗಮನಿಸಬೇಕಾಗುತ್ತದೆ. ಶ್ರೀ ಹನಸಿಯವರು ಹೇಳಿದಹಾಗೆ ರೂಪಿಸುವ ಯೋಜನೆಗಳು ಪ್ರತಿ ರೈತನ ಮಟ್ಟದಲ್ಲಿ ಆಗಬೇಕು. ನಮ್ಮದೇಶಕ್ಕಾಗಿ ನಾವು ಏನು ಬೆಳೆಯಬಹುದು, ವಿದೇಶಗಳಿಗೆ ರಫ್ತಿಗಾಗಿ ಏನು ಬೆಳೆಯಬಹುದು, ಯಾವ ಯಾವ ಸಂದರ್ಭಗಳಲ್ಲಿ ಯಾವ ಯಾವ ಹವಾಮಾನದಲ್ಲಿ ಯಾವರೀತಿಯ ಬೆಳೆಗಳನ್ನು ಬೆಳೆಯಬಹುದು ಎನ್ನುವದರ ಕುರಿತು ಇನ್ನೂ ಯೋಜನೆಗಳು ಆಗಿಲ್ಲ. ಆಹಾರ ಕೊರತೆಯ ಆಧಾರದ ಮೇಲೆ ಬೆಳೆಗಳನ್ನು ನಮ್ಮ ದೇಶದಲ್ಲಿ ಬೆಳೆಯಲಾಗುತ್ತಿದೆ. ನ್ಯಾಶನಲ್ ಪ್ಲ್ಯಾನಿಂಗ್ ಕ್ರೊಪಿಂಗ ಪ್ಯಾಟರ್ನ್ ಕುರಿತು ಈಗ ಒಬ್ಬರು ಹೇಳಿದರು, ಬೆಳೆ ಮಾದರಿಗಳ (Cropping pattern) ಪ್ರಕಾರ ಯೋಜನೆಗಳು ರೂಪಿತಗೊಂಡು ಮಾರುಕಟ್ಟೆಯನ್ನು ಅಧ್ಯಯನ ಮಾಡಿ ಬೆಳೆಗಳನ್ನು ಬೆಳೆಯುವಂತಹ ವ್ಯವಸ್ಥೆಯು ಬರಬೇಕು. ನಾವು ಯಾವುದೊ ಒಂದು ಹೊಸ ಬೆಳೆ ಬಂದರೆ ಎಲ್ಲರೂ ಅದಕ್ಕೆ ಹೋಗಿಬಿಡುತ್ತೇವೆ, ಈಗ ನಮ್ಮ ರಾಯಚೂರು ಜಿಲ್ಲೆಯಲ್ಲಿ ಶ್ರೀಗಂಧದಗಿಡ ಬೆಳೆಸುವ ಕೆಲಸ ಶುರು ಆಗಿದೆ, ಸಸಿ ಮಾರುವವರು ಹಣಗಳಿಸುತ್ತಿದ್ದಾರೆ, ಆದರೆ ತೆಗೆದುಕೊಂಡ ಜನ ಏನಾಗುತ್ತಿದ್ದಾರೋ ನನಗೆ ಗೊತ್ತಿಲ್ಲ. ನಮ್ಮಿಂದ ಆರಿಸಿ ಬಂದವರು ತಮ್ಮ ಜಂಜಾಟದಲ್ಲಿ ನಮ್ಮ ಸಮಸ್ಯೆಗಳನ್ನು ಮರೆತುಬಿಡುತ್ತಾರೆ, ನಾವು ಸಹ ನಮ್ಮ ಊರಿಗೆ ಕೆರೆ ಕಟ್ಟಿಸುವಂತಹ ಕೆಲಸಗಳನ್ನು ಕೇಳುವದನ್ನು ಬಿಟ್ಟು, ನನ್ನ ಮಗನಿಗೆ ಮೆಡಿಕಲ್ ಸೀಟು ಕೊಡಿಸಿ ಎನ್ನುವ ನಮ್ಮ ಸ್ವಂತ ಕೆಲಸಗಳನ್ನೇ ಕೇಳುತ್ತೇವೆ. ದೊಡ್ಡ ರೈತರಿರಬಹುದು ಅಥವಾ ಸಣ್ಣ ರೈತರಿರಬಹುದು, ರೈತರು ರೈತರೇ. ಹೊಲಗಳಿಗೆ ಹುಳುಗಳಾಗಲಿ, ಮಳೆಹನಿಗಳಾಗಲಿ ದೊಡ್ಡರೈತ ಅಥವಾ ಸಣ್ಣ ರೈತ ಎಂದು ಕೇಳಿಕೊಂಡು ಬರುವುದಿಲ್ಲ, ಆದ್ದರಿಂದ ಎಲ್ಲ ರೈತರು ರೈತರೇ. ನಾನು ಒಂದು ನೀತಿಯನ್ನು ಸಿದ್ಧಪಡಿಸಿದ್ದೆ, ಡ್ರೈಲ್ಯಾಂಡ್ ಕೃಷಿಯವರಿಗೆ, ಅದಕ್ಕೆ ಕೃಷಿ ಭಾಗ್ಯ ಎಂದು ಚೆಂದದಾದ ಹೆಸರಿಟ್ಟರು, ಆದರೆ ಅದನ್ನು ಆಚರಣೆಗೆ ತಂದವನು ನಾನು, ನಾನೇ ಅದನ್ನು ಬರೆದಿದ್ದು. ಆ ಸ್ಕೀಂ ತುಂಬಾ ಚೆನ್ನಾಗಿದೆ, ನೀವ್ಯಾರಾದರು ಅದನ್ನು ಅಭ್ಯಸಿಸಿರಬಹುದು. ಆದರಲ್ಲಿ ಕೆರೆಯಲ್ಲಿ ಹೊಂಡ ತೆಗೆಯುವದಕ್ಕೂ ಸಹಾಯ ಮಾಡುತ್ತಾರೆ, ಬೆಳೆ ಬೆಳೆಯಲು ಸಹಾಯಮಾಡುತ್ತಾರೆ. ಇಂತಹ ಅನೇಕ ಪ್ರಯೋಗಗಳನ್ನು ನಾವು ಮಾಡಿದ್ದೇವೆ. ಈಗ ಒಟ್ಟಾರೆಯಾಗಿ ನಾವು ಬದುಕಬೇಕು ಮತ್ತು ಬ್ಯಾಂಕುಗಳನ್ನು ಉಳಿಸಬೇಕು ಅಂತಹದೊಂದು ಕಾರ್ಯನೀತಿಯನ್ನು ನಾವು ಸಿದ್ಧಪಡಿಸಬೇಕಿದೆ. ಸರಿಯಾಗಿ ಮುಂಜಾಗ್ರತೆವಹಿಸದೆ ಸರ್ಕಾರಗಳು ದಬ್ಬಾಳಿಕೆ ಮಾಡಿ, ಬ್ಯಾಂಕಿಂಗ್ ವ್ಯವಸ್ಥೆಯನ್ನು ಹಾನಿ ಮಾಡಿ ಸಹಾಯ ಮಾಡಿ ಎನ್ನುವಂತಹದ್ದು ಸರಿಯಲ್ಲ. ನಾನು ಗುಲ್ಬರ್ಗದಲ್ಲಿ ಸ್ವಂತ ಕೃಷಿಯನ್ನು ಸುಮಾರು 50 ಎಕರೆ ಹೊಲದಲ್ಲಿ ಮಾಡುತ್ತಿದ್ದೇನೆ, ಇಲ್ಲಿ ಖರ್ಚೇ ಜಾಸ್ತಿ ಬರುತ್ತಿದೆ. ಬೆಳೆಗಳು

ಸಣ್ಣವದಿದ್ದಾಗ ಮಳೆ ಚೆನ್ನಾಗಿ ಬರುತ್ತದೆ, ಬೆಳೆ ದೊಡ್ಡದಾದ ಮೇಲೆ ಮಳೆಯೇ ಬರುವುದಿಲ್ಲ, ಕೃಷಿ ಕಾರ್ಮಿಕರ ಸಮಸ್ಯೆ ಇದೇ. ಆದ್ದರಿಂದ ಕೃಷಿ ಎನ್ನುವದು ಅನಿಶ್ಚಿತತೆಯ ಮತ್ತು ಶೋಷಣೆಯ ಆಗರವಾಗಿದೆ. ಬೀಜದಿಂದ ಹಿಡಿದು ಮಾರುವುದರವೆರೆಗೆ ಸುಮಾರು 20 ಸಂಸ್ಥೆಗಳು ನಮಗೆ ಪರೋಕ್ಷವಾಗಿ ಶೋಷಣೆ ಮಾಡುತ್ತಿವೆ. ಅನಿಶ್ಚಿತತೆಯ ಕುರಿತು ಹೇಳುವುದಾದರೆ ಮೊದಲು ಮಳೆಯೊಂದೇ ಅನಶ್ಚಿತತೆವಾಗಿತ್ತು, ಈಗ ಮಾರುಕಟ್ಟೆಯು ಸಹ ಅನಿಶ್ಚಿತತೆಯಲ್ಲಿದೆ. ನನ್ನ ಅಂದಾಜು ಪ್ರಕಾರ ಕರ್ನಾಟಕದಲ್ಲಿ ಪಂಪಸೆಟ್ ದುರಸ್ತಿಗೋಸ್ಕರ ಒಂದು ವರ್ಷದಲ್ಲಿ ಸುಮಾರು 10 ಸಾವಿರ ಕೋಟಿ ಹಣ ಹೋಗುತ್ತದೆ. ಇದನ್ನು ಯಾರಾದರು ನಂಬಲು ಸಾಧ್ಯವಾ? ರೈತರಿಗೆ ವೈಶಿಷ್ಟ್ಯಪೂರ್ಣವಾಗಿ, ಯೋಜನಾಬದ್ಧವಾಗಿ ಮಾರುಕಟ್ಟೆಯ ಅಭ್ಯಸಿಸಿ ಕೃಷಿ ಮಾಡುವದರ ಕುರಿತು ತಿಳಿಹೇಳಬೇಕು. ತಾಂತ್ರಿಕವಾಗಿ ಮುಂದೆಬರಲು ಹಳ್ಳಿಯ ಜನರಿಗೆ ತರಬೇತಿಯನ್ನು ಕೊಟ್ಟು ಒಂದು ಗ್ರಾಮ ಸಂಪನ್ಮೂಲ ಕೇಂದ್ರವನ್ನು ತೆರೆಯಬೇಕು. ರೈತರಿಗೆ ದೊರೆಯುತ್ತಿರುವ ಸಧ್ಯದ ಬೆಲೆಯು 1980 ರಲ್ಲಿ ಉದ್ಯೋಗಿಗಳು ತೆಗೆದುಕೊಳ್ಳುತ್ತಿದ್ದ ಬೆಲೆಯಾಗಿದೆ. ಆದ್ದರಿಂದ ನಾವು ಇದರಿಂದ ಮೇಲೆ ಹೋಗಬೇಕಾದರೆ ತಾಂತ್ರಿಕವಾಗಿ ಬದಲಾವಣೆ ಬರಬೇಕು, ಸಾಮಾಜಿಕವಾಗಿ ಬದಲಾವಣೆಯಾಗಬೇಕು ಈ ವಿಚಾರ ನಮ್ಮ ಶಾಸಕರಿಗೆ ಮುಟ್ಟಿಸಬೇಕು, ಅಂತಹದೊಂದು ಕಾರ್ಯನೀತಿ ಬರುವವರೆಗೂ ನಾವು ಬಿಡಬಾರದು, ಬಿಟ್ಟರೆ ಇದೇ ವ್ಯವಸ್ಥೆ ಮುಂದುವರೆದುಹೋಗುತ್ತದೆ. ಈಗ ತುಂಗಭದ್ರಾ ಕಾಲವೆಯ ಇನ್ನೂ 5 ಲಕ್ಷ ಎಕರೆಗಳಿಗೆ ನೀರು ಕೊಡಬಹುದು, ಅಪರ್ ಕೃಷ್ಣಾ ಯೋಜನೆಯಡಿಯಲ್ಲಿ ಸಂಪೂರ್ಣ ಕರ್ನಾಟಕಕ್ಕೆ ನೀರಾವರಿ ಮಾಡಬಹುದು, ಇದಕ್ಕೆ ಹಣ ಬೇಕಾಗುತ್ತದೆ. 1ಲಕ್ಷ ಕೋಟಿ ಹಣ ಬೇಕಾಗಬಹುದು ಇದಕ್ಕೆ. ಆದರೆ ಇದರಿಂದ ದೊಡ್ಡ ಬದಲಾವಣೆಯಾಗುವುದಿಲ್ಲ. ಆಹಾರ ಸಂಸ್ಕರಣಾ ಕೈಗಾರಿಕೆಗಳು ಹಳ್ಳಿಗಳಿಗೆ ಬರಬೇಕು. ಈಗ ಇವತ್ತಿನ ವಿಚಾರದ ಕುರಿತು ಮಾತನಾಡುವದಾದರೆ ರಾಜನೀತಿಯಲ್ಲಿ ತಪ್ಪು ಆಗಿಯೇ ಆಗುತ್ತವೆ, ನಾವು ಅವರಿಗೆ ತಿಳುವಳಿಕೆಯನ್ನು ಕೊಡಬೇಕು, ಅಂತಹ ಒಂದು ಕಾರ್ಯವನ್ನೇ ಇವತ್ತು ಸಿ.ಎಮ್.ಡಿ.ಆರ್. ಸಂಸ್ಥೆಯವರು ಮಾಡುತ್ತಿದ್ದಾರೆ. ಕೃಷಿಯಲ್ಲಿ ಸಾಕಷ್ಟು ಲಾಭಗಳಿಸಿದ ಉದಾಹರಣೆಗಳು ನಮಗೆ ಸಾಕಷ್ಟು ಸಿಗುತ್ತವೆ, ಆದರೆ ನಮ್ಮ ವಾತಾವರಣದಲ್ಲಿ ಯಾವುದಕ್ಕೆ ಮಾರುಕಟ್ಟೆಯಲ್ಲಿ ಬೇಡಿಕೆ ಇದೆ ಎನ್ನುವದನ್ನು ಅರಿತುಕೊಂಡು ಬೆಳೆಯಬೇಕು. ಇದರೊಂದಿಗೆ ಆಹಾರ ತೆರಿಗೆ ಅಥವಾ ಕೃಷಿ ಅಭಿವೃದ್ಧಿ ತೆರಿಗೆಯಂತಹ ವ್ಯವಸ್ಥೆಯನ್ನು ತಂದರೆ ರೈತರ ಜೀವನ ಸರಳೀಕರಣವಾಗುತ್ತದೆ, ಇಲ್ಲವಾದಲ್ಲಿ ಪ್ರತಿವರ್ಷವು ಇದೇರೀತಿಯ ಸಮಸ್ಯೆಗಳನ್ನು ನಾವೆಲ್ಲರು ಎದುರಿಸಬೇಕಾಗುತ್ತದೆ. ಸಾಲ ಮನ್ನಾ ವಿಚಾರ ಪ್ರತಿಸಾರಿಯೂ ಕೂಡ ಬಿಕ್ಕಟ್ಟಿನೊಂದಿಗೆ ಬರುತ್ತದೆ, ಆದ್ದರಿಂದ ಇದನ್ನು ನಾವು ಬೇರುಮಟ್ಟದಿಂದ ಸರಿಪಡಿಸುವ ನಿಟ್ಟಿನಲ್ಲಿ ಏನು ಮಾಡಬಹುದು ಎನ್ನುವದನ್ನು ವಿಚಾರಮಾಡಬೇಕಾಗಿದೆ. ನಮ್ಮಲ್ಲಿ ಸಾಕಷ್ಟು ಇಲಾಖೆಗಳಿವೆ ಅಲ್ಲಿ ಸಾಕಷ್ಟು ಲೋಪದೋಷಗಳಿವೆ. ಯಾರು ಎಲ್ಲಿ ಏನು ಮಾಡುತ್ತಾರೋ ಗೊತ್ತಾಗುವದಿಲ್ಲ. ಒಂದು ಉದಾಹರಣೆ ನಿಮಗೆ ಹೇಳುತ್ತೇನೆ, ನನ್ನ ಹತ್ತಿರ ಒಬ್ಬ ಪೂಜಾರಿ ಬಂದಿದ್ದ, ನಾನು ಬಾಳೆಗಿಡ ಹಚ್ಚಬೇಕಂತ ಮಾಡಿದ್ದೇನೆ ಅಂದ, ಆಗ ನಾನು ತೋಟಗಾರಿಕೆ ಇಲಾಖೆಗೆ ಹೋಗಪ್ಪ ಎಂದೆ, ಆಗ ಅವನು ಹೋಗಿಬಂದಿದ್ದೇನೆ ಸಾರ್ 3 ತಿಂಗಳಿಂದ ಅಲೆಯುತ್ತಿದ್ದೇನೆ, ಆದರೆ ಏನು ಉಪಯೋಗವಾಗುತ್ತಿಲ್ಲ ಎಂದ, ನೀನು ಹಚ್ಚಿದ ಮೇಲೆ ನಿನ್ನ ಗಿಡಗಳು ಶೇ90ರಷ್ಟು ಯಶಸ್ವಿಯಾಗಿ ಬೆಳೆದ ಮೇಲೆ ನಮಗೆ ಸಾಲ, ಸಬ್ಸಿಡಿ ಕೊಡಲುಬರುತ್ತದೆ, ಆದ್ದರಿಂದ ನೀನು ಮೊದಲು ಸಾಲ ತೆಗೆದುಕೋ 3 ತಿಂಗಳಾದ ಮೇಲೆ ಬಂದು ನಾವು ನೋಡುತ್ತೇವೆ ಎಂದು ತೋಟಗಾರಿಕೆ ಇಲಾಖೆಯವರು ಹೇಳಿದರು, ಆದ್ದರಿಂದ ಈಗ ನಿಮ್ಮ ಹತ್ತಿರ ಬಂದಿದ್ದೇವೆ, ಈಗ ನೀವು ಏನು ಹೇಳುತ್ತಿರಾ ಹೇಳಿ ಎಂದನು ಪೂಜಾರಿ. ಆಯ್ತಪ್ಪ ನಾನು ನಿನಗೆ ಹಣದ ಸಹಾಯ ಮಾಡುತ್ತೆನೆ, ಆದರೆ ನೀನು ನಿನಗೆ ಹಣ ಬಂದ ಮೇಲೆ ನನಗೆ ವಾಪಸ್ಸು ಕೊಡಬೇಕು ಎಂದೆ, ಆಗ ಅವನು ಇಲಾಖೆಯಿಂದ ಹಣ ಬಂದಕೂಡಲೆ ನಿಮ್ಮ ಹಣವನ್ನು ವಾಪಸ್ಸು ಕೊಡುತ್ತೇನೆಂದ. ಸರಿ, ಎಂದು ನಾನು ಅವನಿಗೆ 20 ಸಾವಿರ ಹಣವನ್ನು 2 ಎಕರೆಯಲ್ಲಿ ಬೆಳೆಯಲು ಕೊಟ್ಟೆ. ಅವನು ಮುಂದೆ ಎರೆಡು ಎಕರೆಯಲ್ಲಿ 60 ಟನ್ ಬೆಳೆದು ನನ್ನ 20 ಸಾವಿರ ಹಣವನ್ನು ತೆಗೆದುಕೊಂಡು ವಾಪಸ್ಸು ಕೊಡಲು ಬಂದ, ಅವನನ್ನು ನೋಡಿ ನನಗೆ ಕಣ್ಣಲ್ಲಿ ನೀರು ಬಂತು. ಹೀಗಿರುವಾಗ ರೈತನು ಅಪ್ರಾಮಾಣಿಕನಿದ್ದಾನೆಂದು ಹೇಗೆ ಹೇಳುವದು? ಪರಿಸ್ಥಿತಿ ಅತ್ಯಂತ ಕೆಟ್ಟಾಗ ಮಾತ್ರ ಅಪ್ರಾಣಿಕನಾಗಬಹುದು ಅಷ್ಟೆ. ಇಲ್ಲಪ್ಪ ನಾನು ವಾಪಸ್ಸು ತೆಗೆದುಕೊಳ್ಳುವದಿಲ್ಲ, ಬೇರೆ ಯಾರಾದರು ರೈತನಿಗೆ ಈ ಹಣದಿಂದ ಸಹಾಯ ಮಾಡು ಎಂದು ಹೇಳಿದೆ ನಾನು ಆಗ ಕೇಳಿದೆ ಸರ್ಕಾರದ ಸಹಾಯಹಣ ಬಂತಾ ಎಂದು, ಆಗ ಆತ ಇನ್ನೂ ಬಂದಿಲ್ಲ ಸಾರ್, ನನ್ನ ಹಣವನ್ನು ನಾನು ಕೊಡುತ್ತಿದ್ದೇನೆ, ಈ ವರ್ಷದ

ಬಜೆಟ್ ಮುಗಿದಿದೆ, ಮುಂದಿನ ಸಾರಿ ಬೇರೆ ತಾಲೂಕಿನಡಿಯಲ್ಲಿ ಹಾಕಿ ಕೊಡುತ್ತಾರೆ ಅಂತ ಹೇಳಿದರು ಎಂದು ಹೇಳಿದ. ಇದನ್ನೆಲ್ಲಾ ಏಕೆ ವಿಕೇಂದ್ರೀಕೃತವಾಗಿ ಮಾಡಬಾರದು ಮತ್ತು ಸರಳೀಕರಣ ಮಾಡಬಾರದು ? ಈಗ ಸಾಕಷ್ಟು ಕಷ್ಟದಿಂದ ದುಡಿದ ಮೇಲೆಯೂ ಸಹ ಸಾಲವಾಗಲು ಕಾರಣಗಳು ಸರ್ಕಾರದ ನೀತಿನಿಯಮಗಳು, ಆದ್ದರಿಂದ ನಿಮಗೆ ಬೆಂಬಲವನ್ನು ನೀಡುವದು ಸರ್ಕಾರದ ಕರ್ತವ್ಯವಾಗಿದೆ. ಅದೇ ರೀತಿ ಬ್ಯಾಂಕುಗಳನ್ನು ಯಾವರೀತಿಯಲ್ಲಿ ಉಳಿಸಬೇಕು ಎನ್ನುವದನ್ನು ವಿಚಾರಮಾಡಬೇಕು. ಈಗ ಆದಾಯ ತೆರಿಗೆಯಲ್ಲಿ ಹೇಗೆ ಶಿಕ್ಷಣ ತೆರಿಗೆ ಎಂದು ತೆರಿಗೆ ಇದೆಯೋ ಅದೇ ರೀತಿಯಲ್ಲಿ ರೈತ ಕಲ್ಯಾಣ ತೆರಿಗೆಯಂತಹ ಹೆಸರಿನ ತೆರಿಗೆಯನ್ನು ತರಬೇಕು.

ಈಗ ಒಟ್ಟಾರೆಯಾಗಿ ಹೇಳುವದಾರೆ, ಮೊದಲನೆಯದು, ಈ ವಿಷಮ ಪರಿಸ್ಥಿತಿಯಲ್ಲಿ ರೈತರು ಆರ್ಥಿಕವಾಗಿ ಸೊರಗುತ್ತಿರುವದರಿಂದ ಈಗ ಸಾಲ ಮನ್ನಾ ಮಾಡುತ್ತಿರುವದು ಒಳ್ಳೆಯ ನಿರ್ಧಾರವೇ ಆಗಿದೆ, ಆದರೆ ಇದನ್ನು ಯಾವರೀತಿಯಲ್ಲಿ ಹೊಸಹೊಸ ವಿಧಾನಗಳ ಮೂಲಕ ಮಾಡಬೇಕು ಎನ್ನುವದರ ಕುರಿತು ಕಾರ್ಯನೀತಿಯನ್ನು ತರಬೇಕು. ಎರಡನೆಯದು, ವೈಜ್ಞಾನಿಕವಾಗಿ ಹಾಗೂ ತಾಂತ್ರಿಕವಾಗಿ ತಾಲೂಕ ಮಟ್ಟದಲ್ಲಿ ವೈಯಕ್ತಿಕವಾಗಿ ರೈತನ ಮಾರುಕಟ್ಟೆಯನ್ನು ನೋಡಿ ಯಾವ ತರಹದ ಬೆಳೆ ಮಾದರಿಯನ್ನು ಜಾರಿಗೆ ತರಬೇಕು ಎಂಬುದು ನಾನು ವೈಯಕ್ತಿಕವಾಗಿ ಕಂಡತೆ ಇಂದು ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ರೈತ ಸಂಪರ್ಕ ಕೇಂದ್ರಗಳು ಪ್ರಾಮಾಣಿಕವಾಗಿ ಕೆಲಸಗಳನ್ನು ಮಾಡುತ್ತಿವೆ, ಆದ್ದರಿಂದ ಈ ಕೇಂದ್ರಗಳಲ್ಲಿ ಸಿಬ್ಬಂದಿಗಳನ್ನು ಹೆಚ್ಚಿಸಿ ಈ ಕೇಂದ್ರಗಳ ಕಾರ್ಯವನ್ನು ಇನ್ನಷ್ಟು ವಿಸ್ತರಿಸಬೇಕು ಎನ್ನುವದು ನನ್ನ ಅಭಿಪ್ರಾಯ. ಈ ಕೇಂದ್ರದ ಸಿಬ್ಬಂದಿ ಪಂಚಾಯತಿ ಅಥವಾ ಹೋಬಳಿ ಮಟ್ಟದಲ್ಲಿ ಬಂದು ಚರ್ಚೆಮಾಡಿ ಆ ಪ್ರಕಾರವಾಗಿ ಯೋಜನೆಯನ್ನು ಮಾಡಿದರೆ ಅರ್ಧದಷ್ಟು ಕಷ್ಟ ಕಡಿಮೆಯಾಗುತ್ತದೆ. ರೈತರು ಹೊಸ ಹೊಸ ಆವಿಷ್ಕಾರಗಳು ಮತ್ತು ತಾಂತ್ರಿಕತೆಯನ್ನು ತಿಳಿದುಕೊಳ್ಳಬೇಕು. ಮತ್ತು ರೈತರ ಆವಿಷ್ಕಾರಗಳ ಕುರಿತು ವಿವರಗಳನ್ನು ಯುಕೆಜಿ ಯಿಂದ 10 ನೇ ತರಗತಿಯವರೆಗೂ ಪಠ್ಯಪುಸ್ತಕಗಳಲ್ಲಿ ತಿಳಿಸಬೇಕು, ಆಗ ಮಾತ್ರ ನಮ್ಮ ಮಕ್ಕಳಿಗೆ ಕೃಷಿಯ ಕುರಿತಾದ ವಿಷಯವು ತಲೆಯೊಳಗೆ ಹೋಗಲು ಸಾಧ್ಯ. ನಾವೆಲ್ಲ ಇಲ್ಲಿ ಸೇರಿರುವದು ತುಂಬಾ ಸಂತೋಷದ ವಿಚಾರ, ಕರ್ನಾಟಕ ಸರ್ಕಾರ, ಭಾರತ ಸರ್ಕಾರ ಮತ್ತು ವಿಶ್ವವಿದ್ಯಾಲಯಗಳು ನನಗೆ ಸಾಕಷ್ಟು ಅವಕಾಶವನ್ನು ಕೊಟ್ಟಿವೆ, ನಾನು ಸಹ ನನ್ನ ಕೈಲಾದಷ್ಟು ಮಾಡಿದ್ದೇನೆ. ನನ್ನ ವೃತ್ತಿಯಲ್ಲಿ ಬಂದತಹ ವೈಯಕ್ತಿಕ ಹಣದಿಂದ ನಾನು ಈಗ ರಿಸರ್ಚ್ ಎಂಡ್ ರಿಸೋರ್ಸ್ ಸೆಂಟರ್ ಇನ್ ದಿ ವೆಲ್‌ಫೇರ್ ಆಫ್ ಫಾರ್ಮರ್ಸ್ ಎನ್ನುವ ಸಂಶೋಧನಾ ಸಂಸ್ಥೆಯನ್ನು ಕಟ್ಟುತ್ತಿದ್ದೇನೆ, ಈ ಸಂಸ್ಥೆಯನ್ನು ಕಟ್ಟುತ್ತಿರುವದು ರೈತರ ಕಲ್ಯಾಣಕ್ಕಾಗಿ, ಇದರಲ್ಲಿ ಲಾಭಗಳಿಸುವ ಉದ್ದೇಶವಿಲ್ಲ. ಮುಂದೆ ಇಂಜಿನಿಯರಗಳು ಸಹ ಕೃಷಿ ಕ್ಷೇತ್ರಕ್ಕೆ ಬರಲಿದ್ದಾರೆ, ಸ್ವಾಮಿನಾಥನ್ ಆಯೋಗದ ವರದಿಯ ಅನುಷ್ಠಾನಕ್ಕೆ ಕೃಷಿ ವಿಜ್ಞಾನಿಗಳ ಜೊತೆ ಇಂಜಿನೀಯರಗಳು ಸಹ ಮುಂದೆ ಕೈಜೋಡಿಸುತ್ತಾರೆ ಆಗ ಇನ್ನೊಂದು ಹಸಿರು ಕ್ರಾಂತಿಯು ನಮ್ಮ ದೇಶದಲ್ಲಿ ಆಗುತ್ತದೆ. ಭೂಮಿಯ ಫಲವತ್ತತೆ ಮತ್ತು ನೀರಿನ ಸಂಗ್ರಹ ಅಥವಾ ನೀರಾವರಿ ಯೋಜನೆಗಳು ಸರಿಯಾಗಿ ಆದಲ್ಲಿ ಕೃಷಿ ಕ್ಷೇತ್ರದ ಬೆಳವಣಿಗೆ ಹೆಚ್ಚುತ್ತದೆ ಮತ್ತು ಈ ಜಾತಿ ಪದ್ಧತಿ, ಸಣ್ಣ ರೈತರು ಮತ್ತು ದೊಡ್ಡ ರೈತರು ಎಂದು ವಿಂಗಡನೆ ಮಾಡುವದನ್ನು ಬಿಡುವದು ಮತ್ತು ಕೃಷಿಯ ಸಲುವಾಗಿ ತೆರಿಗೆಯನ್ನು ಜಾರಿಗೆ ತರುವದನ್ನು ಮಾಡಿದಲ್ಲಿ ನಮ್ಮ ಸಮಸ್ಯೆಗಳು ದೂರವಾಗಲಿವೆ ಎನ್ನುವದು ನನ್ನ ವೈಯಕ್ತಿಕವಾದ ವಿಚಾರವಾಗಿದೆ. ನನಗೆ ಈ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿ ನನ್ನ ಅನಿಸಿಕೆಗಳು ಮತ್ತು ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಅವಕಾಶ ಕೊಟ್ಟಿದ್ದಕ್ಕಾಗಿ ಸಿ.ಎಮ್.ಡಿ.ಆರ್., ಸಂಸ್ಥೆಯ ನಿರ್ದೇಶಕರಾದ ಡಾ. ಅಣ್ಣಿಗೇರಿಯವರಿಗೆ ಮತ್ತು ಸಿಬ್ಬಂದಿಗೆ ಧನ್ಯವಾದಗಳನ್ನು ಹೇಳುತ್ತಾ ನನ್ನ ಮಾತನ್ನು ಸಮಾಪ್ತಿಗೊಳಿಸುತ್ತಿದ್ದೇನೆ.

* * * * *